Mr. SPEAKER.—Motion moved:

"That the Mysore Sales Tax (Third Amendment) Bill, 1955 be passed."

Sri P. R. RAMAIYA.—Before it is put to vote, I wish to appeal to the Revenue Minister. Now as it stands, it may go, but we should take the earliest occasion to consider this question again and decide in favour of newspapers.

Sri Kadidal MANJAPPA.—I am not in a position to make a definite statement at this stage. It is a question of fiscal policy. I will have to consult the Chief Minister.

Mr. SPEAKER.—The question is:

"That the Mysore Sales Tax (Third Amendment) Bill, 1955 be passed."

The Motion was adopted.

Sri J. MOHAMED IMAM.—It is necessary, I think, that this should be given effect to immediately. Is it necessary to send it to the President for obtaining his assent?

Sri Kadidal MANJAPPA.—As I understand, there will not be any need for sending it for the assent of the President because we are not changing the rate of levy. Anyhow, we will try to give effect to it as early as possible.

Sri P. R. RAMAIYA.—Recently, the Lok Sabha has passed a Bill where they have included several commodities under essential commodities item; they have brought in many commodities and I wish to say that newsprint is also one such thing brought under essential commodities' section. Therefore, I don't think the Government of Mysore can straightaway have the pleasure of levying this tax.

Mr. SPEAKER.—What the Minister says is this, that there is no new tax contemplated in the Bill to obtain the consent of the President; it is only a reduction. In the case of groundnut it is only a question of changing the incidence of taxation.

Sri P. R. RAMAIYA.—It is not reduction for the first time. A new tax is imposed upon newsprint. Therefore, I say this is a matter which is under the compentence of the President, not merely of this Government.

DISCUSSION ON THE FACT FINDING COMMITTEE REPORT (*Contd.*)

Mr. SPEAKER.—Now the next item of business, discussion on the Fact Finding Committee Report. Sri M. Chikkalingaiah may continue his speech.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಹಿಂದಿನ ದಿನ ಮಾತನಾಡುತ್ತಿರುವಾಗ ಈ ರಾಜ್ಯಗಳ ಪುನರ್ವಿಂಗಡಣೆಯ ವಿಚಾರದಲ್ಲಿ ನಾವು ಒಂದು ಉದಾರ ಮನಸ್ಸಿನಿಂದಲೂ ಮತ್ತು ಈ ಪ್ರಶ್ನೆಯನ್ನು ಒಂದು ದೇಶದ ಹಿತದೃಷ್ಟಿಯಿಂದ ವಿಮರ್ಶೆ ಮಾಡುತ್ತಿರುವಂಥ ಕಾಲದಲ್ಲಿ ಈ ಮಹಾ ಪ್ರಶ್ನೆಯನ್ನು ಅಷ್ಟು ಸುಲಭವಾಗಿ ಆಗಲಿ ಅಥವಾ ಲಘುವಾಗಿಯಾಗಲಿ ವಿಚಾರಮಾಡಬಾರದು ಎಂದು ಹೇಳುವಷ್ಟು ಹೊತ್ತಿಗೆ ಆ ದಿವಸ ಕಾಲ ಮುಗಿಯಿತು. ಈಗಾಗಲೇ ಮಾತನಾಡಿರತಕ್ಕಂಥ ಸದಸ್ಯರ ಪೈಕಿ ಕೆಲವರು ನಮ್ಮ ಮೈಸೂರು ಈಗಿರುವಂಥ ಮೈಸೂರು ಮುಂದಕ್ಕೂ ಉಳಿಯಬೇಕೆಂದು ಹೇಳಿದ್ದಾರೆ. ಇನ್ನುಳಿದವರು ಈಗಿರತಕ್ಕಂಥ ಮೈಸೂರು ಇನ್ನೂ ವಿಶಾಲವಾಗಬೇಕು ಎಂದು ಹೇಳಿದ್ದಾರೆ. ನಮ್ಮ ಮಂಡ್ಯ ಜಿಲ್ಲೆಯಿಂದ ಬಂದಿರತಕ್ಕಂಥ ಮುಖಂಡರಾದಂಥ ಶ್ರೀಮಾನ್ ಎಚ್. ಕೆ. ವೀರಣ್ಣಗೌಡರ ವಿಷಯದಲ್ಲಿ ನನಗೆ ತುಂಬ ಗೌರವವಿದೆ. ಅವರು ಸ್ವಾತಂತ್ರ್ಯಕ್ಕಾಗಿ ತುಂಬ ಶ್ರಮಿಸಿದವರ ಪೈಕಿ ಒಬ್ಬರಾಗಿದ್ದಾರೆ. ಆದರೆ ಇಂಥವರ ಬಾಯಲ್ಲಿ ಆ ರೀತಿ ಡೋಲಾಯಮಾನವಾದಂಥ ಒಂದು ಹೇಳಿಕೆ ಹೊರಬೀಳುತ್ತದೆಂದು ನಾನು ಖಂಡಿತ ತಿಳಿದಿರಲಿಲ್ಲ. ಅವರು ಲೋಕಾಭಿರಾಮವಾಗಿ ಕೆಲವು ಭಾಷೆಗಳ ವಿಚಾರವನ್ನು ಪ್ರಸ್ತಾಪಿಸುತ್ತಾ ಉತ್ತರ ದೇಶದ ಕೆಲವು ಕನ್ನಡ ಭಾಷೆಯ ಪದಗಳನ್ನು ಹೇಳಿ ಅನಂತರ ಇಲ್ಲಿ ನಮ್ಮ ದೇಶದ ಭಾಷೆ ಹೇಗಿದೆ ಎನ್ನುವುದನ್ನು ಪ್ರಸ್ತಾಪಮಾಡಿ, ಹಾಗೆ ಒಂದಕ್ಕೊಂದಕ್ಕೆ ಸ್ವಲ್ಪ ವ್ಯತ್ಯಾಸವಿದ್ದೇ ಇರುತ್ತದೆಂದು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಾನು ಹೇಳುತ್ತೇನೆ, ಈಗ ನಮ್ಮ ಮೈಸೂರಿನಲ್ಲಿ ಆಡತಕ್ಕಂಥ ಕನ್ನಡಕ್ಕೂ ಹೊರಗಡೆಯವರಾಡತಕ್ಕಂಥ ಕನ್ನಡಕ್ಕೂ ವ್ಯತ್ಯಾಸವಿರತಕ್ಕದ್ದು ಹಾಗಿರಲಿ, ನಮ್ಮ ಮೈಸೂರು ಸಂಸ್ಥಾನದಲ್ಲೇ ಮೈಸೂರು ಮಂಡ್ಯ ಜಿಲ್ಲೆಗಳವರು ಆಡತಕ್ಕಂಥ ಕನ್ನಡ ಭಾಷೆಗೂ ಮತ್ತು ದಾವಣಗೆರೆಯ ಪ್ರಾಂತ್ಯದಲ್ಲಿರತಕ್ಕಂಥ ಜನರು ಆಡತಕ್ಕಂಥ ಕನ್ನಡ ಭಾಷೆಗೂ ಬಹಳ ವ್ಯತ್ಯಾಸವಿದೆ. ಹೀಗೆ ಒಂದೊಂದು ಕಡೆ ಒಂದೊಂದು ರೀತಿ ಇರುತ್ತದೆ. ಪಟ್ಟಣದಲ್ಲಿರತಕ್ಕವರಾಡುವ ಭಾಷೆಗೂ ಮತ್ತು ಹಳ್ಳಿಯಲ್ಲಿರತಕ್ಕವರು ಆಡುವ ಭಾಷೆಗೂ ಸ್ವಲ್ಪ ವ್ಯತ್ಯಾಸವಿದ್ದೇ ಇದೆ. ಆದರೆ ಹೀಗೆ ಇರತಕ್ಕಂಥ ಈ ಸಣ್ಣ ವಿಚಾರವನ್ನೇ ಒಂದು ಆಧಾರವಾಗಿಟ್ಟುಕೊಂಡು ಮಾತನಾಡುವುದು ಎಷ್ಟರಮಟ್ಟಿಗೆ ಈ ಪ್ರಶ್ನೆಗೆ ಅನ್ವಯಿಸುತ್ತದೆ ಅಥವಾ ಇಲ್ಲ ಎನ್ನುವಂಥ ವಿಚಾರಕ್ಕೆ ನಾನೀಗ ಪ್ರವೇಶಮಾಡದೆ ಇದನ್ನು ಇಲ್ಲಿಗೇ ಬಿಟ್ಟುಬಿಡುತ್ತೇನೆ.

Sri H. K. VEERANNA GOWDH (Maddur).—It only shows your standard of understanding my speech.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾನು ಆ ವಿಚಾರವನ್ನು ಮೊದಲೇ ಹೇಳಿದ್ದೇನೆ. ಈ ವಿಷಯದಲ್ಲಿ ಅಷ್ಟಾಗಿ ಕಾಮೆಂಟ್ ಮಾಡುವುದು ಸೂಕ್ತವಲ್ಲ ಎಂದೇ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಹೇಳಿ ಅದನ್ನಾಗಲೇ ಕೈ ಬಿಟ್ಟಿದ್ದೇನೆ. ಆದರೆ ಅವರು ಮುಂದುವರಿದು ಮಾತನಾಡುತ್ತಾ ಎರಡು ಕರ್ಣಾಟಕ ಗಳಾಗಲಿ ಎಂದು ಹೇಳಿದ್ದಾರೆ. ಅಲ್ಲದೆ ಹೊರಗಡೆ ಇರತಕ್ಕಂಥ ಕನ್ನಡ ಜನರು ಇನ್ನೂ ಮುಂದುವರಿಯ ಬೇಕಾಗಿದೆ ಎಂದು ಬೇರೆ ಹೇಳಿದ್ದಾರೆ. ಆದರೆ ಕಾಲ ಸ್ಥಿತಿ ಹೇಗೆಯೇ ಇರುತ್ತದೆಂದು ಹೇಳ ವುದಕ್ಕಾಗುವುದಿಲ್ಲ. 1947ನೆಯ ಆಗಸ್ಟ್ 15ರಲ್ಲಿದ್ದಂಥ ಕಾಲ ಈ ದಿವಸ ಇಲ್ಲ. ಈಗ ನಾವುಗಳೆಲ್ಲರೂ ಸ್ವತಂತ್ರರಾಗಿದ್ದೇವೆ. ಸ್ವರಾಜ್ಯ ಸ್ಥಾಪನೆಯಾಗಿದೆ. ಈ ದಿವಸ ದೇಶದಲ್ಲಿರ ತಕ್ಕಂಥ ಪ್ರತಿಯೊಬ್ಬರಿಗೂ ಅವರವರ ಹಕ್ಕುಬಾಧ್ಯತೆ ಗಳನ್ನು ಕಾಪಾಡುವುದಾಗಿ ರಾಜ್ಯಾಂಗದಲ್ಲಿ ಭರವಸೆ ಕೊಡಲಾಗಿದೆ ಎನ್ನುವುದನ್ನು ಯಾರೂ ಮರೆಯುವುದಿಲ್ಲ ವೆಂದು ತಿಳಿದುಕೊಂಡಿದ್ದೇನೆ. ಆದರೆ ನಮಗೆ ಹೀಗೆ ಸ್ವಾತಂತ್ರ್ಯ ಬಂದ ನಂತರ ಬಳ್ಳಾರಿ ನಮ್ಮ ಮೈಸೂರಿಗೆ ಇಷ್ಟು ಶ್ರಮಪಡದ ಹಾಗೆ ಬಂದು ಸೇರು ತ್ತದೆಂದು ನಾನಂತೂ ಭಾವಿಸಿರಲಿಲ್ಲ. ಆ ಕೇಂದ್ರ ಸರ್ಕಾರದವರು ಈ ಸಂಬಂಧವಾಗಿ ನಮ್ಮನ್ನು ಒಂದು ಮಾತೂ ಕೇಳದೆ ಅದನ್ನು ಮೈಸೂರಿಗೆ ಸೇರಿಸಿಕೊಟ್ಟಿ ದ್ದಾರೆ. ನಮ್ಮ ಭರತಖಂಡದಲ್ಲಿ ಇಂಥ ಒಂದು ಯೂನಿಟ್ ಇಲ್ಲಿಗೆ 300—400 ವರ್ಷಗಳಿಂದಲೂ ಆಗಿ ರಲಿಲ್ಲ. ಅಂಥ ಒಂದು ಪರಿಸ್ಥಿತಿ ಇಂದು ಲಭ್ಯವಾಗಿದೆ. ದೇಶದಲ್ಲಿ ಇಂಥ ವಿಚಾರಗಳಲ್ಲಿ ಒಂದು ತಿಕ್ಕಾಟ ಇಟ್ಟು ಕೊಂಡಿದ್ದರೆ ರಾಜ್ಯಭಾರವಾಡುವುದಕ್ಕೆ ಬಹಳ ಕಷ್ಟ ವಾಗುತ್ತದೆಂಬುದನ್ನು ತಿಳಿದುಕೊಂಡು ಮುಂದಿನ ಆಡ ಳಿತವು ಸುಗಮವಾಗಿ ನಡೆದು ರಾಷ್ಟ್ರಾಭಿವೃದ್ಧಿ ಕೆಲಸ ಗಳು ಸರ್ವತೋಮುಖವಾಗಿ ನಡೆಯಲಿ ಎಂದೇ ಈಗ ಆಂಧ್ರರ ಮನವಿಯನ್ನು ಲಾಲಿಸಿ ಅವರ ಇಷ್ಟದ ಪ್ರಕಾರವೇ ಆ ಆಂಧ್ರರಾಜ್ಯವನ್ನು ನಿರ್ಮಿಸಿದ್ದಾರೆ. ಆ ಒಂದು ಭಾಷಾ ಅಭಿಮಾನದ ಮೇಲೆಯೇ ಈಗ ಯಾವಯಾವ ಪ್ರದೇಶಗಳು ಆಂಧ್ರಕ್ಕೆ ಸೇರಬೇಕೋ ಅವುಗಳನ್ನು ಆಂಧ್ರಕ್ಕೆ ಸೇರಿಸಿ, ಉಳಿದ ಕನ್ನಡ ಭಾಗಗಳನ್ನು ನಮ್ಮ ಮೈಸೂರಿಗೆ ಸೇರಿಸಿರುತ್ತಾರೆ. ಈ ದಿವಸವೂ ಸಹ ಆಂಧ್ರರು ಇನ್ನೂ ಕೆಲ ಕೆಲವು ಭಾಗಗಳು ತಮಗೆ ಬರಬೇಕಾಗಿದೆಯೆಂದೂ, ಆ ಭಾಗ ಗಳನ್ನೆಲ್ಲಾ ಸೇರಿಸಿ ಈ ಮೂಲಕ ಒಂದು ವಿಶಾಲಾಂಧ್ರ ಪ್ರಾಂತ್ಯ ನಿರ್ಮಾಣಮಾಡಬೇಕೆಂದೂ ಅನೇಕ ರೀತಿಯಲ್ಲಿ ಒತ್ತಾಯಪಡಿಸುತ್ತಿರುವಂಥ ವಿಚಾರ ಅನೇಕ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. ಈ ವಿಷಯ ಇಡೀ ದೇಶಕ್ಕೂ ಗೊತ್ತಿದೆ. ಆಂಧ್ರ ಕ್ಕಿಂತಲೂ ಹಿಂದೆಯೇ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗಬೇಕಾಗಿತ್ತು. ಜನರು ಬಹಳ ಹಿಂದಿ ನಿಂದಲೂ ಇದಕ್ಕೆ ಒತ್ತಾಯಮಾಡುತ್ತಲೇ ಬಂದಿದ್ದಾರೆ ಅದಕ್ಕಾಗಿಯೇ ನಾವೀಗ ಈ ಪ್ರಶ್ನೆಯನ್ನು ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ಆಂಧ್ರರು ತಮ್ಮ ರಾಜ್ಯಸ್ಥಾಪನೆಗಾಗಿ ಹರಪ್ರಯತ್ನಗಳನ್ನೆಲ್ಲಾ ಮಾಡುತ್ತಿರುವಾಗ ಅದೇ ರೀತಿ ಈ ನಮ್ಮ ಮೈಸೂರಿಗೆ ಸಂಬಂಧಪಟ್ಟಂಥ ರಾಜ್ಯಗಳಾವುವೆಯೋ ಅವುಗಳೆಲ್ಲಾ ತಾವೇ ತಾವಾಗಿ ಬಂದು ಸೇರಿ ಒಂದು ರಾಜ್ಯವಾಗ ಬೇಕೆಂದು ಕೇಳುತ್ತಿರುವಂಥ ಕಾಲದಲ್ಲಿ, ನಾವು ಈಗಲೇ ಇದಾಗುವುದು ಬೇಡ, ಇನ್ನೂ ಸ್ವಲ್ಪಕಾಲ ಈ ಪ್ರಶ್ನೆ ಯನ್ನು ಹಿಂದಕ್ಕೆ ಹಾಕೋಣ, ಎನ್ನತಕ್ಕಂಥ ಮಾತುಗಳನ್ನಾ ಡುವುದರಲ್ಲಿ ಅರ್ಥವಿಲ್ಲ. ಯಾವ ರೂಪದಲ್ಲಾಗಿಯೇ ಆಗಲಿ ಈಗ ಈ ಪ್ರಶ್ನೆಗೆ ಸಕಾಲವಲ್ಲ ಎಂದು ಹೇಳತಕ್ಕಂಥ ಸ್ವಾರ್ಥಿಗಳೆಲ್ಲಾ ಹುರುಳಿಲ್ಲದ ಮಾತುಗಳು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕೆಂದಿಸುತ್ತಿ ವೆ. ಅದನ್ನು ವೈಯಕ್ತಿಕವಾಗಿಯೇನೂ ಹೇಳುತ್ತಿಲ್ಲ.

ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದಲ್ಲಿ ನಾವೀಗ 1951ನೆಯ ಜನಗಣತಿಯ ಪ್ರಕಾರ, ಕರ್ಣಾಟಕ ಪ್ರಾಂತ್ಯದಲ್ಲಿ ಸುಮಾರು 40 ಲಕ್ಷಕ್ಕೂ ಮೇಲ್ಪಟ್ಟ ನಿಮ್ನ ತರಗತಿಯವರಿರುತ್ತೇವೆ. ಅವರಿಗೀಗ ಈ ಚುನಾವಣೆಗಳಲ್ಲಿ ಬೇರೆ ರಿಜರ್ವೇಷನ್ ಇದೆ.

2-30 P.M.

ಒಂದು ವೇಳೆ ಮುಂದಿನ general election ಹೊತ್ತಿಗೆ ಕರ್ಣಾಟಕಕ್ಕೆ ಪ್ರತ್ಯೇಕವಾಗಿ election ನಡೆದಪಕ್ಷದಲ್ಲಿ ಇದರಿಂದ ಸ್ವಲ್ಪ ಹೆಚ್ಚು ಕಡಿಮೆ ಆಗಬಹುದೆಂಬ ವದಂತಿ ಇದೆ. ನಿಮ್ನ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಅಧಿಕಾರ ವನ್ನು ವಹಿಸಿಕೊಳ್ಳಬಹುದು ಎನ್ನುವ ಶಂಕೆ ಇದ್ದ ಪಕ್ಷದಲ್ಲಿ, ಒಂದುವೇಳೆ ಆ ರೀತಿ ಕರ್ಣಾಟಕ ರಾಜ್ಯ ನಮ್ಮ ಕೈಗೆ ಬರುವಪಕ್ಷದಲ್ಲಿ, ಇಡೀ ಭರತಖಂಡಕ್ಕೆ ಕಲ್ಯಾಣದ ದಿವಸವೆಂದು ಭಾವಿಸಿಕೊಳ ಬಹುದು. ನಾವು ಇರತಕ್ಕಂಥ ಆರ್ಥಿಕಸ್ಥಿತಿ ಮತ್ತು ಆರ್ಥಿಕ ಮುಗ್ಗಟ್ಟು ಇದರಿಂದ ಮೇಲ್ಮಟ್ಟಕ್ಕೆ ಸದ್ಯದಲ್ಲಿ ಬರು ತ್ತೇವೋ ಇಲ್ಲವೋ ಅಥವಾ ಇನ್ನೂ ಒಂದು ಶತಮಾನ ವಾಗುತ್ತದೋ ಎಂಬುದು ಯೋಚನೆ ಮಾಡಬೇಕಾದ ವಿಷಯ. ಆದ್ದರಿಂದ ನಾನು ಈಗ ಅಂತಹ ಆಶೆ ಯಿಂದ ಅಥವಾ ಕೋಮುವಾರು ಭಾವನೆಯಿಂದ ಕರ್ಣಾಟಕರಾಜ್ಯವಾಗಬೇಕು ಎಂದು ಹೇಳುತ್ತಾ ಇಲ್ಲ. ತಾನಾಗಿ ಬರತಕ್ಕ ರಾಜ್ಯವನ್ನು ಏತಕ್ಕೆ ನಿಧಾನಿಸ ಬೇಕು ? ತಡಮಾಡಬೇಕು ? ಹೀಗೆ ಮಾಡುವುದರಿಂದ ನಮಗೆ ಸಹಾಯವಾಗುತ್ತದೆಯೇ ಎನ್ನುವ ವಿಚಾರವನ್ನು ಸ್ವಲ್ಪ ಯೋಚನೆ ಮಾಡಬೇಕು. ಆದುದರಿಂದ ದೇಶದ ಹಿತದೃಷ್ಟಿಯಿಂದ ಮೈಸೂರು ವಿಸ್ತಾರ ಆಗಬೇಕೆಂಬ ಅಭಿಪ್ರಾಯವನ್ನು ಸರ್ವಾನುಮತದಿಂದ ಕೊಡಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಈ ಸಮಯ ದಲ್ಲಿ ಈ ಸಭೆಯನ್ನು ಕೇಳಿಕೊಳ್ಳುತ್ತೇನೆ. ಕೆಲವರು ಮೈಸೂರಿಗೆ ಸೇರಲು ಇಷ್ಟಪಡುವುದಿಲ್ಲ ಎಂದು ಹೇಳಿ ದರು. ಈ ಸಂದರ್ಭದಲ್ಲಿ ಕೊಡಗಿನವರು ಮೈಸೂರು ಸಂಸ್ಥಾನಕ್ಕೆ ಸೇರುವುದಿಲ್ಲ, ಎಂಬ ಮಾತನ್ನು ಹೇಳಿ ದರು. ಕೊಡಗಿನವರು ಈಗ ಉತ್ತಮ ಸ್ಥಿತಿಯಲ್ಲಿರ ಬಹುದು ಅಥವಾ ಅವರು ಎಲ್ಲಾ ಭಾಗದಲ್ಲೂ ಅಭಿ ವೃದ್ಧಿಯನ್ನು ಹೊಂದಿರಬಹುದು, ಆದರೆ ನಾನು ಒಂದು ವಿಷಯವನ್ನು ಕೇಳುತ್ತೇನೆ. ಕೊಡಗಿನವರು ಅಭಿವೃದ್ಧಿ ಸ್ಥಿತಿಗೆ ಬಂದು ಅವರ ಕಾಲಮೇಲೆ ಅವರು ನಿಂತುಕೊಂಡಿದ್ದಾರೆಯೇ ? ಕೊಡಗು ದೇಶದ ವಿಚಾರ ವನ್ನು ನೋಡುವುದಾದರೆ ಅವರು ಭತ್ತ, ಕಾಫಿಯನ್ನು ಬೆಳೆಯಬಹುದು. ಆದರೆ ಬಾಕಿ ಪದಾರ್ಥಗಳನ್ನು ಮೈಸೂರು ಸಂಸ್ಥಾನದಿಂದಲೇ ಯಥೇಚ್ಛವಾಗಿ ತೆಗೆದು ಕೊಂಡು ಹೋಗಬೇಕಾಗಿದೆ. Food control ಬಂದಾಗ ಈ ವಿಚಾರ ಕೂಲಂಕಷವಾಗಿ ಚರ್ಚೆಯಾಗಿ ಯಾವ ರೀತಿ ಕೊಡಗಿನವರು ಇತರ ದೇಶಗಳ ಮೇಲೆ ಅವಲಂಬಿಸಿದ್ದಾರೆ ಬಂದು recordನಲ್ಲಿದೆ. ಯಾವ ದೇಶವೇ ಆಗಲಿ ಸ್ವಾತಂತ್ರ್ಯವಾಗಿ ತನ್ನಷ್ಟಕ್ಕೆ ತಾನೆ ಬದುಕುತ್ತದೆ ಎನ್ನುವ ವಿಷಯವನ್ನು ನಾವು ಒಪ್ಪಿ ಕೊಳ್ಳಬಾರದು. ಕೊಳ್ಳೇಗಾಲ ಮತ್ತು ಇತರ ಸ್ಥಳ ಗಳು ತಾವಾಗಿಯೇ ನಮ್ಮ ಜೊತೆಗೆ ಬರತಕ್ಕಂಥ ಪ್ರಯತ್ನಮಾಡುತ್ತಿರುವಾಗ ಅವನ್ನು ಏತಕ್ಕೆ ಬಿಡಬೇಕು ? ಈ ಕಡೆ ಉತ್ತರಕರ್ಣಾಟಕದವರು ಬಹಳ ಉತ್ಸಾಹ ದಿಂದ ನಮ್ಮೊಡನೆ ಸಹಕರಿಸಿ, ಕಷ್ಟ ಬಂದರೆ ಭಾಗಿ ಗಳಾಗೋಣ, ಅನುಕೂಲ ಸಂಪತ್ತು ಬಂದರೆ ಒಟ್ಟಿಗೆ ಅನುಭವಿಸೋಣ ಎಂಬ ಮನೋಭಾವಗಳಿಂದ voluntary ಆಗಿ ಮುಂದೆ ಬಂದು ಅಭಿಪ್ರಾಯವನ್ನು ಸೂಚಿ ಸುತ್ತಿರುವಾಗ ಏತಕ್ಕೋಸ್ಕರ ಆ ಅಭಿಪ್ರಾಯವನ್ನು

ಉದಾಸೀನಭಾವದಿಂದ ಕಾಣಬೇಕು ? ಹುಚ್ಚುಹೊಳೆ ಹರಿಯುತ್ತಿರುವಾಗ ಹೂವಿನ ದಂಡೆ ಎಲ್ಲಿ ನಿಲ್ಲುತ್ತವೆ ? ಈಗ ಒಳ್ಳೆ ಕಾಲ ಬಂದಿದೆ. ಆ ಕಾಲವನ್ನು ಉಪಯೋಗಿಸಿಕೊಂಡಪಕ್ಷದಲ್ಲಿ ಮಾನ್ಯ ಸಭೆಗೆ ಗೌರವ ಮತ್ತು ಘನತೆ ಉಂಟಾಗುವುದಲ್ಲದೆ, ಹಾಗೆಯೇ ನಮ್ಮ ಕಾಲದಲ್ಲಿ ರಾಜ್ಯವನ್ನು ಸಂಪಾದಿಸಿದ್ದೇವೆ ಎಂಬ ಸಂತೋಷ ಮತ್ತು ಹೆಮ್ಮೆ ಉಂಟಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿಷಯ : ನಮ್ಮ ಈಗ ಇಂಡಿಯಾ ದೇಶವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ದಿವಂಗತರಾದ ವಲ್ಲಭಭಾಯ್ ಪಟೇಲರವರು 562 ಸಂಸ್ಥಾನಗಳನ್ನು ಕಿತ್ತುಹಾಕಿ ಕೆಲವು ಸಂಸ್ಥಾನಗಳನ್ನು ಇತರ ದೇಶಗಳೊಂದಿಗೆ ಮಿಳಿತಮಾಡಿ ಅವರು ಸ್ವತಂತ್ರವಾಗಿ ಮತ್ತು ಸುಖವಾಗಿ ಬೆಳೆಯುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಾಗ ಕೆಲವರು ಅವನ್ನು ಪ್ರಶ್ನೆ ಮಾಡಿದರು. ನಮ್ಮ ಇಂಡಿಯಾ ದೇಶದಲ್ಲಿ ಇಂತಹ ರಾಜರುಗಳನ್ನು ಮಟ್ಟ ಹಾಕಿ ರಾಜವಂಶಗಳನ್ನು ತೊಡೆದುಹಾಕಿದ್ದಾರೆಂದು ಹೇಳಿದರು. ಆಗ ಅವರು ರಾಜರ ಮನೆತನಗಳನ್ನಾಗಲಿ ರಾಜರುಗಳನ್ನಾಗಲಿ ತೊಡೆದು ಹಾಕಿಲ್ಲ. ರಾಜರ ಕಿರೀಟಗಳಲ್ಲಿರುವ ರತ್ನದ ಕೊಳೆಯನ್ನು ತೆಗೆದು ಆ ಕಿರೀಟವು ಪ್ರಕಾಶಮಾನವಾಗಿ ಬೆಳಗಲಿ ಎನ್ನುವ ಸ್ಥಿತಿಗೆ ತಂದಿದ್ದೇವೆ. ಏನಾದರೂ ಈ ವಿಚಾರವನ್ನು ಅವರು ವ್ಯಕ್ತಪಡಿಸಿರುವುದು ತಮಗೆ ಗೊತ್ತಿರಬಹುದು. ದೇಶದ ಹಿತದೃಷ್ಟಿಯಿಂದ ಆಡಳಿತಸೌಕರ್ಯಗಳಿಗೋಸ್ಕರ A B C ಎಂದು ಮೂರು ಭಾಗಗಳಾಗಿ ವಿಂಗಡಿಸಿ ಅಂತಹ 28 ಸ್ಟೇಟುಗಳನ್ನು ಮಾಡಿದ್ದಾರೆ. A B C ಎಂಬ ಭಾಗಗಳು ಆಡಳಿತದೃಷ್ಟಿಯಿಂದ ಇರಕೂಡದು, ಇಡೀ ಭರತಖಂಡದಲ್ಲೇ A B C ಎಂಬ ವ್ಯತ್ಯಾಸವಿಲ್ಲದೆ ಪ್ರತಿಯೊಂದು ಸ್ಟೇಟ್ ಸಮಭಾಗವಾಗಿ ಎಲ್ಲಾ ವಿಧದಲ್ಲೂ ಎಂದರೆ, ಪ್ರಜಾಸಂಖ್ಯೆ, ಆರ್ಥಿಕ ಸ್ಥಿತಿ, ಇವೆಲ್ಲವನ್ನೂ ವಿಭಾಗ ಮಾಡಿ ಒಂದೇ ಸಮವಾದಂಥ ನಿರ್ದಿಷ್ಟವಾದ ಬೌಂಡರಿಯನ್ನು ಏರ್ಪಡುಮಾಡಿ A B C ಸ್ಟೇಟುಗಳನ್ನು abolish ಮಾಡಬೇಕೆಂದು ಕೇಂದ್ರ ಸರ್ಕಾರದವರಿಗೆ ಫಜಲಾಲಿ ಸಮಿತಿಯವರು ಅವರ ವರದಿಯಲ್ಲಿ ಸೂಚಿಸುತ್ತಾರೆ ಎಂದು ನಾನೂ ನಂಬಿದ್ದೇನೆ. ನಮ್ಮ ಮುಂದಿರುವ ಸಮಿತಿಯ ವರದಿಯಲ್ಲಿ ಕೊನೆಯ ಒಂದು ಭಾಗದಲ್ಲಿ ಆಡಳಿತ ದೃಷ್ಟಿಯಿಂದ ಒಂದು ಸಲಹೆಯನ್ನು ಕೊಟ್ಟಿರುತ್ತಾರೆ. ಕರ್ಣಾಟಕ ಪ್ರಾಂತ್ಯ ಮಾಡಿದರೆ ಅದು ಬಹಳ unwieldy ಆಗುತ್ತದೆ, 600 ಮೈಲಿ ದೂರವಿರುತ್ತದೆ, ಆಡಳಿತ ದೃಷ್ಟಿಯಿಂದ ಇದ್ದರೂ ಸರಿಯಾಗಿಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಚಿಂತೆ ಇಲ್ಲ, ಆಡಳಿತದಲ್ಲಿ District Headquarters ದೂರವಾಗಿದ್ದರೆ ಅನುಕೂಲ ಎಂದು ನನ್ನ ಅನುಭವದಲ್ಲಿ ಹೇಳುತ್ತೇನೆ. ಉದಾಹರಣೆಗೆ ಹೇಳುವಪಕ್ಷದಲ್ಲಿ ಈಗಿರತಕ್ಕಂಥ ನಮ್ಮ ಮೈಸೂರು ದೇಶದ ಅನೇಕ ಡಿಸ್ಟ್ರಿಕ್ಟುಗಳು, ತಾಲ್ಲೂಕುಗಳು Sub-Divisionಗಳು ಬಹಳ ಚಿಕ್ಕಚಿಕ್ಕವಾಗಿವೆ. ಈಗ ಒಬ್ಬ ಅಮಲ್ದಾರರು ಒಂದು ತಾಲ್ಲೂಕಿಗೆ ಬಂದಪಕ್ಷದಲ್ಲಿ ಎರಡು–ಮೂರು ದಿವಸಗಳ ಕಾಲ ಅವರು ಅಲ್ಲಿಯೇ ಇದ್ದರೆ ತಿರುಗಿ Sub-Division Officer ಆಗಿ ಅದೇ ತಾಲ್ಲೂಕಿಗೆ ಬರುತ್ತಾರೆ. Sub-Divisionನಲ್ಲಿ ಕೆಲವು ಕಾಲದವಾದ ಮೇಲೆ ಡೆಪ್ಯುಟಿ ಕಮೀಷನರ್ ಆಗಿ ಅದೇ ಡಿಸ್ಟ್ರಿಕ್ಟಿಗೆ ಬರುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಒಬ್ಬ ಆಫೀಸರು ಒಂದು ಸಾರಿ ಒಂದು ತಾಲ್ಲೂಕಿಗೆ ಅಥವಾ ಡಿಸ್ಟ್ರಿಕ್ಟಿಗೆ ಬಂದು ಕೆಲವು ಕಾಲ ಅಧಿಕಾರ ಮಾಡಿದ ಮೇಲೆ ತಿರುಗಿ ಅವರ ಅಧಿಕಾರ ಅವಧಿಯೊಳಗೆ ಅವರು ಡಿಸ್ಟ್ರಿಕ್ಟಿಗೆ ಪುನಃ ಬರಬಾರದು ಎಂಬುದಾಗಿದೆ. ಈಗಿರುವುದಕ್ಕಿಂತ ಡಿಸ್ಟ್ರಿಕ್ಟಿಗೆ ಸ್ವಲ್ಪ ವಿಶಾಲ Jurisdiction ಇದ್ದರೆ, ಡಿಸ್ಟ್ರಿಕ್ಟುಗಳ ಸಂಖ್ಯೆ ಜಾಸ್ತಿ ಇದ್ದರೆ ಈ ರೀತಿ ಮಾಡುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ.

(Disturbance)

Mr. SPEAKER.—I have already brought to the notice of the Hon'ble Members that every Hon'ble Member must be heard patiently. They should give a patient hearing. There are too many interruptions.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸ್ವಾಮಿ, ಶ್ರೀ ಸಿದ್ಧಲಿಂಗಯ್ಯನವರು ನಮ್ಮ ಮೈಸೂರು ದೇಶದ ಕನ್ನಡಿಗರ ವೈಶಿಷ್ಟತೆಯನ್ನೂ, ಹೊರದೇಶದಲ್ಲಿ ಕನ್ನಡಿಗರಿಗೆ ಇರುವ ಗೌರವ ಮತ್ತು ಕನ್ನಡಿಗರು ನಮ್ಮ ದೇಶದ ಅಭಿವೃದ್ಧಿಯನ್ನು ಯಾವರೀತಿ ನಿರೀಕ್ಷಣೆಮಾಡುತ್ತಿದ್ದಾರೆ ಮತ್ತು ಒಂದು Unification of Karnataka ಎಂದರೆ, ಈ ವಿಶಾಲ ಕನ್ನಡರಾಜ್ಯ ಸ್ಥಾಪನೆಯಾಗುತ್ತದೆ ಎಂದು ಪರದೇಶದಲ್ಲಿಯೂ ಕೂಡ ಬಹಳ ಆತುರವಾಗಿ ನೋಡುತ್ತಿದ್ದಾರೆ ಎಂಬ ವಿಷಯವನ್ನೂ ವ್ಯಕ್ತಪಡಿಸಿದರು. ಅಲ್ಲದೆ, ಇದು ಒಂದು ಸುಸಮಯ, ಈ ಸುಸಮಯ ಬಂದಿರುವುದನ್ನು ಉಪಯೋಗಿಸಿಕೊಂಡು ನಾವು ಸರ್ವಾನುಮತದಿಂದ ಯಾವ ಭಿನ್ನಾಭಿಪ್ರಾಯವೂ ಇಲ್ಲದೆ ರಾಜ್ಯ ವಿಸ್ತರಣೆ ಮಾಡಿಕೊಳ್ಳುವುದಕ್ಕೆ ಒಪ್ಪಿಕೊಳ್ಳಬೇಕು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಈಗ ಶ್ರಮಪಟ್ಟು ರಾಜ್ಯವನ್ನು ಸಂಪಾದಿಸತಕ್ಕದ್ದು ನಮಗೇ ಅಲ್ಲ ಮುಂದಿನ ನಮ್ಮ ಪೀಳಿಗೆಗೆ. ಹಾಗೆ ಮಾಡಿದರೆ ನಮ್ಮ ಮಕ್ಕಳ ಮತ್ತು ಮೊಮ್ಮಕ್ಕಳ ಜೀವನವನ್ನು ಕಲ್ಪಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಆ ರೀತಿ ದೇಶ ವಿಸ್ತರಣೆಯಾದಪಕ್ಷದಲ್ಲಿ ಹೆಚ್ಚಿನ ಜನಸಂಖ್ಯೆಗೆ ಅವಕಾಶವಾಗಿ ಬರಬರುತ್ತಾ ಗೌರವ ಜಾಸ್ತಿಯಾಗುವ ದೆಸೆಯಿಂದ ಆರ್ಥಿಕ ದೃಷ್ಟಿಯಿಂದಲೂ, ರಾಜಕೀಯ ದೃಷ್ಟಿಯಿಂದಲೂ ಮತ್ತು ಇತರ ದೃಷ್ಟಿಯಿಂದಲೂ ಹೆಚ್ಚಿನ ಅನುಕೂಲವುಂಟಾಗುತ್ತದೆ ಎಂದು ಹೇಳುತ್ತೇನೆ. ನಾನು ಹೆಚ್ಚಿಗೆ ಭಾಷಣಮಾಡಲು ಇಷ್ಟಪಡುವುದಿಲ್ಲ. ಅನೇಕ ಮಹನೀಯರು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆಂದು ತಿಳಿದುಕೊಂಡಿದ್ದೇನೆ. ಒಟ್ಟಿನಲ್ಲಿ ಹೇಳುವುದಾದರೆ, ದೇಶದ ಹಿತದೃಷ್ಟಿಯಿಂದ ನಮಗೆ ಸುಲಲಿತವಾಗಿ ಹೆಚ್ಚಿಗೆ ಬರತಕ್ಕಂಥ ರಾಜ್ಯವನ್ನು ನಾವು ಬೇಡವೆಂದು ಹೇಳುವುದು ಖಂಡಿತವಾಗಿಯೂ ಸೂಕ್ತವಲ್ಲ. ನಾನು ಹಿಂದೆ ಹೇಳಿದಹಾಗೆ, ಹಿಂದಿನ ಕಾಲದಲ್ಲಿ ರಾಜರುಗಳು ರಾಜ್ಯವನ್ನು ಸಂಪಾದಿಸಲು ಎಷ್ಟು ಶ್ರಮಪಡುತ್ತಿದ್ದರು, ಎಷ್ಟು ರಕ್ತಪಾತವಾಗುತ್ತಿತ್ತು, ಒಂದೊಂದು ಹೆಜ್ಜೆಗೂ ಎಷ್ಟು ತೊಂದರೆಗಳನ್ನು ಅನುಭವಿಸಬೇಕಾಗಿತ್ತು ಎಂಬುದನ್ನು ಯೋಚನೆಮಾಡಬೇಕು.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ತಾವು ಯಾವ ಶತಮಾನದಲ್ಲಿ ಇದ್ದೀರಿ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಜನರಿಗೆ ತಿಳಿವಳಿಕೆ ಬರಲಿ, ಜ್ಞಾನ ಬರಲಿ ಎಂದು ಸಂಸ್ಕೃತಿ ಪ್ರಸಾರ ಮಾಡುತ್ತಿದ್ದೀರಿ. ಹಾಗೆಯೇ ರಾಜ್ಯಸ್ಥಾಪನೆ ವಿಚಾರದಲ್ಲೂ ಪುರಾಣದ ವಿಚಾರವನ್ನು ತಮ್ಮ ಕಿವಿಯಲ್ಲಿ ಇಡಬೇಕೆಂಬುದೇ ನನ್ನ ಉದ್ದೇಶ. ಕುರುಕ್ಷೇತ್ರದಲ್ಲಿ ಪಾಂಡವರಿಗೂ ಮತ್ತು ಕೌರವರಿಗೂ ಯಾವ ರೀತಿ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ರಾಜ್ಯಸಂಪಾದನೆಯ ವಿಷಯದಲ್ಲಿ ಜಿಜ್ಞಾಸೆ ನಡೆಯಿತು ಮತ್ತು ಶ್ರೀ ಕೃಷ್ಣಪರಮಾತ್ಮನು ಸಂಧಾನಕ್ಕೆ ಹೋದಾಗ ಕೌರವನು ತಾನು ಬದುಕಿರುವವರೆಗೆ ಐದು ಗ್ರಾಮವಲ್ಲ ಒಂದು ಗ್ರಾಮವಲ್ಲ ಒಂದು ಸೂಜಿ ಊರುವಷ್ಟು ಜಾಗವನ್ನೂ ಕೊಡುವುದಿಲ್ಲವೆಂದು ಹೇಗೆ ಛಲ ಮತ್ತು ಹಟ ತೋರಿಸುತ್ತಿದ್ದನು ಎಂಬುದು ತಮಗೆಲ್ಲರಿಗೂ ಗೊತ್ತಿರುವ ವಿಷಯ. ನಮ್ಮ ಮುಂದಿನ ಪೀಳಿಗೆಯವರಿಗಾಗಿ 50-100 ವರ್ಷಗಳವರೆಗೂ ನಮ್ಮ ಪೂರ್ವಿಕರು ಶ್ರಮಪಟ್ಟು, ರಕ್ತಪಾತವಿಲ್ಲದೆ ಇಷ್ಟೊಂದು ರಾಜ್ಯವನ್ನು ಸಂಪಾದಿಸಿಕೊಟ್ಟಿದ್ದಾರೆ. ತಾವಾಗಿಯೇ ನಿಮ್ಮ ಕಾರ್ಯನೀತಿ ಹೀಗಿರಬೇಕು ಎಂದು ನಮಗೆ ಜ್ಞಾಪಕಕೊಡುತ್ತಿದ್ದಾರೆ. ಆ ತತ್ವ ದೃಷ್ಟಿಯಿಂದ ಈ ರಾಜ್ಯ ವಿಶಾಲವಾಗಬೇಕು. ದೊಡ್ಡದು ಮಾಡಬೇಕು ಎಂದು ಹೇಳುತ್ತೇನೆ. ನಾನು ಇದನ್ನು ಹೇಳಿದ್ದು ಪುರಾಣ ಸಂಸ್ಕೃತಿಯನ್ನು ಹೇಳುವುದಕ್ಕೋಸ್ಕರವಲ್ಲ. ನಾನು ಮೊದಲೇ ತಿಳಿಸಿದಹಾಗೆ, ಒಂದು ಕೋಮಿನ ಭಾವನೆಯಿಂದಲಾಗಲಿ ಅಥವಾ ಒಂದು ಅಧಿಕಾರದ ಆಶೆಯಿಂದಲಾಗಲಿ ಇದನ್ನು ಹೇಳುತ್ತಾ ಇಲ್ಲ. ನಿರ್ಧಾಕ್ಷಿಣ್ಯವಾಗಿ ಮತ್ತು ನಿಷ್ಪಕ್ಷಪಾತವಾಗಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಇಷ್ಟು ಕಾಲಾವಕಾಶವನ್ನು ನನಗೆ ಈ ಸಂದರ್ಭದಲ್ಲಿ ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಸಭೆಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಡಿ. ದೇವರಾಜ್ ಅರಸ್.—ಸ್ವಾಮಿ, ನಮ್ಮ ಮುಂದೆ ಇರತಕ್ಕಂಥ ರಾಜ್ಯಗಳ ಪುನರ್ವಿಂಗಡನೆಗೆ ನೇಮಕವಾಗಿದ್ದಂಥ ಪರಿಶೀಲನಾ ಸಮಿತಿಯ ವರದಿಯ ಮೇಲೆ ಈಗ ಅನೇಕ ದಿವಸಗಳಿಂದ ಮಾಡಿರತಕ್ಕಂಥ ಭಾಷಣಗಳನ್ನು ನಾನು ಬಹಳ ಕುತೂಹಲದಿಂದ ಕೇಳಿದ್ದೇನೆ. ಆ ಭಾಷಣಗಳನ್ನು ಮಾಡತಕ್ಕಂಥ ಕಾಲದಲ್ಲಿ ಅನೇಕ ಮಾನ್ಯ ಸದಸ್ಯರು ಅಂಕಿಅಂಶಗಳು ತಾವು ಹಿಂದೆ ಹೊಂದಿರತಕ್ಕಂಥ ಅಭಿಪ್ರಾಯಗಳಿಗೆ ಅನುಗುಣವಾಗಿದ್ದಾಗ ಅವು ಸರಿ ಎಂದೂ, ತಮ್ಮ ಪೂರ್ವಭಾವಿಯಾದ ಅಭಿಪ್ರಾಯಕ್ಕೆ ಅವು ಹೊಂದಿಲ್ಲದಿದ್ದರೆ ಆ ಅಂಕಿಅಂಶಗಳು ಚೆನ್ನಾಗಿಲ್ಲವೆಂದೂ ಅಥವಾ ಅನೇಕ ತಪ್ಪುಗಳಿಂದ ಕೂಡಿವೆಯೆಂದೂ ಅಥವಾ ಒಂದುವೇಳೆ ಸರಿಯಾಗಿದ್ದರೂ ಅವುಗಳನ್ನು ಗಮನಿಸಬೇಕಾಗಿಲ್ಲವೆಂದೂ ಇತ್ಯಾದಿ ಇತ್ಯಾದಿಯಾಗಿ ಟೀಕೆ ಮಾಡಿದ್ದಾರೆ. ಎಲ್ಲದಕ್ಕಿಂತ ಹೆಚ್ಚಿಗೆ ಆಶ್ಚರ್ಯವನ್ನುಂಟುಮಾಡತಕ್ಕಂಥ ಟೀಕೆ ಯಾರದು ಎಂದರೆ ನನ್ನ ಪರಮಮಿತ್ರರಾದ ಶ್ರೀ ಚೆನ್ನಬಸಪ್ಪನವರದು. ಈ ವಿಷಯದಲ್ಲಿ ಏಕೆ ಅಷ್ಟು ಆಶ್ಚರ್ಯವುಂಟಾಯಿತು ಎಂದರೆ, ಈ ಮಾನ್ಯ ಸಭೆಯಲ್ಲಿ ಬಹುಶಃ ಯಾವುದೊಂದು ವಿಚಾರದಮೇಲೆ ಮಾತನಾಡಬೇಕಾದರೂ ಕೂಡ ಅಂಕಿಅಂಶಗಳ ಆಧಾರದಮೇಲೆ ಮಾತನಾಡುವವರು ಯಾರಿಲ್ಲದಿದ್ದರೂ ಕೂಡ ಶ್ರೀ ಚೆನ್ನಬಸಪ್ಪನವರು ಮಾತ್ರ ಪ್ರತಿಯೊಂದು ವಿಷಯದಲ್ಲೂ ಅಂಕಿಅಂಶಗಳಿಲ್ಲದೆ ಮುಂದಕ್ಕೆ ಹೋಗುವುದಿಲ್ಲ. ಮೊನ್ನೆ ಟೆನೆನ್ಸಿ ಬಿಲ್ಲಿನ ಸಂಬಂಧದಲ್ಲಿ ಅವರು ಕೊಟ್ಟಿರತಕ್ಕ ಅಂಕಿಅಂಶಗಳನ್ನು ಸವಿಸ್ತಾರವಾಗಿ ತಿಳಿದುಕೊಳ್ಳಬೇಕಾದರೇ ಒಂದು ವಾರ ಬೇಕಾಗುತ್ತದೆ. ಹೀಗೆ ಅಷ್ಟೊಂದು ಎಲ್ಲಾ ಸಮಸ್ಯೆಗಳ ಮೇಲೂ ಅಂಕಿಅಂಶಗಳು ಇದ್ದೇ ಇರಬೇಕು, ಅದರ ಆಧಾರದಮೇಲೆಯೇ ಪ್ರತಿಯೊಂದು ಕಾನೂನೂ ರಚಿಸಬೇಕೆಂದು ಹೇಳುವ ಮಹನೀಯರು ಈ ಸಂಬಂಧದಲ್ಲಿ ಇರುವ ಅಂಕಿಅಂಶಗಳ ವಿಚಾರದಲ್ಲಿ ಮಾತ್ರ ಅವು ಸತ್ಯವಾಗಿದ್ದರೂ ಇರಬಹುದು. ಆದರೆ, ಅಷ್ಟು ಗಮನಕ್ಕೆ ತೆಗೆದುಕೊಳ್ಳಬೇಕಾಗಿಲ್ಲವೆಂದು ಹೇಳಿದರು. ಅವರಂತೆಯೇ ಇನ್ನೂ ಕೆಲವು ಮಹನೀಯರು ಅಂಕಿಅಂಶಗಳು ಬೇಕಿಲ್ಲ ಎಂದು ಹೇಳಿದರು. ಬಡ್ಜೆಟ್ಟು ಮಾಡಬೇಕಾದರೆ ಅಂಕಿಅಂಶಗಳು ಬೇಕು; ದೇಶದ ಯಾವ ಕೆಲಸಗಳನ್ನು ಮಾಡಬೇಕಾದರೂ ಅಂಕಿಅಂಶಗಳು ಬೇಕೇ ಬೇಕು. ಒಂದು ಸಣ್ಣ ಅಣೆಕಟ್ಟು ಕಟ್ಟಬೇಕಾದರೂ ಅಂಕಿಅಂಶಗಳು ಬೇಕು. ಹೀಗಿರುವಾಗ ಈ ಕೆಲಸದಲ್ಲಿ ಮಾತ್ರ ಅಂಕಿಅಂಶಗಳು ಬೇಕಿಲ್ಲವೆಂದು ಹೇಳುವ ವಾದ ನನಗರ್ಥವಾಗುವುದಿಲ್ಲ.

ಅಂದಮೇಲೆ, ಈ ಅಂಕಿಅಂಶಗಳನ್ನು ನಾವು ನಿಧಾನವಾಗಿ ಪರಿಶೀಲನೆ ಮಾಡಿದ್ದೇ ಆದರೆ, ಈ ವರದಿಯನ್ನು ಕೊಟ್ಟಿರತಕ್ಕಂಥ ಮಹನೀಯರು ಯಾರೂ ಕೂಡ ಕರ್ಣಾಟಕ ಏಕೀಕರಣವೇ ಆಗಲಿ, ಭಾಷಾವಾರು ಪ್ರಾಂತ್ಯವೇ ಆಗಲಿ ಅದರ ಸಂಬಂಧದಲ್ಲಿ ವಿರೋಧಿಗಳೂ ಅಲ್ಲ; ಪರವಾದವರೂ ಅಲ್ಲ. ಅಂಥ ಯಾವ ಮನೋಭಾವದಿಂದಲೂ ಅಂಕಿಅಂಶಗಳನ್ನಿಟ್ಟಿಲ್ಲ; ಮತ್ತು ಕೊನೆಯ ಪುಟದಲ್ಲಿ ಯಾವ ಯಾವ ಆಧಾರಗಳಮೇಲೆ ಅಂಕಿಅಂಶಗಳನ್ನು ಶೇಖರಿಸಿದ್ದಾರೆಂಬುದನ್ನು ಹೇಳಿದ್ದಾರೆ. ಸಂಬಂಧಪಟ್ಟ ಸರ್ಕಾರಗಳ ಬಳಿಯಿರುವ ಪುಸ್ತಕಗಳನ್ನೆಲ್ಲಾ ಹುಡುಕಿ ವಿಷಯಗಳನ್ನು ಸಂಗ್ರಹಿಸಿ ಅಂಕಿಅಂಶಗಳನ್ನು ಇದ್ದದ್ದನ್ನು ಇದ್ದಹಾಗೆ ನಮ್ಮ ಮುಂದಿಟ್ಟಿದ್ದಾರೆ. ಈ ಎಲ್ಲ ಕಾರಣಗಳಿಂದ ಈ ಅಂಕಿಅಂಶಗಳೆಲ್ಲಾ ಸರಿಯಿಲ್ಲವೆಂದು ವಾದಿಸುವುದು ಸಾಧುವಲ್ಲ.

ಇನ್ನು ಈ ಅಂಕಿಅಂಶಗಳ ಆಧಾರದಮೇಲೆ ನಾವು ಯಾವ ಪ್ರಶ್ನೆಯನ್ನು ಬಗೆಹರಿಸಬೇಕೋ, ಯಾವ ವಿಚಾರದಲ್ಲಿ ಅಭಿಪ್ರಾಯ ಕೊಡಬೇಕೋ ಅದನ್ನು ಸ್ವಲ್ಪ ವಿಮರ್ಶೆಮಾಡಿ ನೋಡೋಣ. ಸ್ವಾಮಿ, ಇಂಡಿಯಾ ದೇಶವಲ್ಲ ಅನೇಕ ವರ್ಷಗಳಿಂದ, ಅಂದರೆ ಸ್ವರಾಜ್ಯ ಬರುವುದಕ್ಕೆ ಪೂರ್ವಭಾವಿಯಾಗಿಯೂ ಕೂಡ ಇಂಡಿಯಾ ದೇಶದ ಕಾಂಗ್ರೆಸ್ಸು ಪ್ರಾಂತಗಳನ್ನು ಭಾಷೆಯ ಮೇಲೆ ಪುನರ್ವಿಂಗಡಣೆ ಮಾಡಬೇಕೆಂದು ಹೇಳಿದ್ದು ವಾಸ್ತವಾಂಶ. ಅದನ್ನು ಈಗಾಗಲೇ ಮಾತನಾಡಿದ ಅನೇಕ ಮಾನ್ಯ ಸದಸ್ಯರು ಉದಹರಿಸಿ ಅಖಿಲಭಾರತ ಕಾಂಗ್ರೆಸ್ಸು ನ್ಯಾಷನಲ್ ಕಾಂಗ್ರೆಸ್ಸಿನ ಧ್ಯೇಯಗಳಿಗನುಸಾರವಾಗಿ ನಡೆಯುತ್ತಿಲ್ಲ, ತಮ್ಮ ಮಾತುಗಳನ್ನೇ ಬದಲಾಯಿಸಿಕೊಂಡರು ಇತ್ಯಾದಿಯಾಗಿ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅದು ಸರಿಯಿಲ್ಲ. ನಾನೂ ಕೂಡ ಅದಕ್ಕೆ ಸಂಬಂಧಪಟ್ಟ ಸಾಹಿತ್ಯಗಳನ್ನು ಓದಿದ್ದರಲ್ಲ ಅಖಿಲ ಭಾರತ ಕಾಂಗ್ರೆಸ್ಸು, ನ್ಯಾಷನಲ್ ಕಾಂಗ್ರೆಸ್ಸು ತನ್ನ ಧ್ಯೇಯಗಳನ್ನು ಬದಲಾಯಿಸಿಕೊಂಡಿಲ್ಲ. ಭಾಷಾವಾರು ಪ್ರಾಂತ್ಯಗಳಾಗಬೇಕೆಂಬ ವಿಚಾರವಲ್ಲ ಫಜಲಾಲಿ ಕಮಿಷನ್ ನೇಮಕವಾಗಿರುವುದರಲ್ಲಿ ಇಂಥಿಂಥ ಆಧಾರಗಳಮೇಲೆ ಗಡಿಗಳನ್ನು ನಿರ್ಧಾರಮಾಡಬೇಕೆಂದು ನಮೂದು ಮಾಡಿದ್ದಾರೆ. ಅವೇನೆಂದರೆ, ಭಾಷೆಯ ಆಧಾರ, ಆಡಳಿತ ಸೌಕರ್ಯ, ಭೌಗೋಳಿಕವಾಗಿ ಯಾವಯಾವ ಪ್ರದೇಶ ಸೇರಬೇಕಾದ್ದು ಅವಶ್ಯಕ—ಇವುಗಳನ್ನೆಲ್ಲಾ ನೋಡಿ ಪುನರ್ವಿಂಗಡಣೆ ಮಾಡಬೇಕೆಂದು ಹೇಳಿದಾಗ ಭಾಷೆಯನ್ನು ಬಿಟ್ಟುಬಿಡಬೇಕೆಂದು ಅರ್ಥವಲ್ಲ.

ಮತ್ತೊಂದು ಸ್ವಾರಸ್ಯವಾದ ವಿಚಾರವೇನೆಂದರೆ, ಭಾಷೆಯ ಆಧಾರದಮೇಲೆ ಪ್ರಾಂತ್ಯ ವಿಂಗಡಣೆಯಾಗಬೇಕಾದ ಸಮಸ್ಯೆ ಉತ್ತರ ಇಂಡಿಯಾಕ್ಕಿಂತಲೂ ದಕ್ಷಿಣ ಇಂಡಿಯಾದಲ್ಲಿ ಹೆಚ್ಚಾಗಿದೆ. ಉತ್ತರ ಇಂಡಿಯಾದಲ್ಲಿ ಫಜಲಾಲಿ ಕಮಿಷನ್ನಿಗೆ ಇರತಕ್ಕ ಕೆಲಸ, ಭಾಷೆಯ ಆಧಾರದ ಮೇಲೆ ಯಾವಯಾವ ಪ್ರಾಂತ್ಯಗಳನ್ನು ಪುನ

ವಿಂಗಡಣೆ ಮಾಡಬೇಕು ಎಂಬುದಲ್ಲ. ಅಲ್ಲಿ ಹಿಂದೀ ಆಧಾರದಮೇಲೆ ಒಂದುಗೂಡಿಸುವುದಲ್ಲ, ಅದನ್ನು ಹಂಚ ಬೇಕಾಗಿದೆ. ಒಂದಿರುವುದನ್ನು ಎರಡುಮಾಡಬೇಕಾಗುತ್ತದೆ; ಎರಡಿರುವುದನ್ನು ಮೂರು ಮಾಡಬೇಕಾಗಿದೆ. ದಕ್ಷಿಣ ಇಂಡಿಯಾವಲ್ಲಾದರೋ, ಹನ್ನೆರಡಾದರೂ ಇರಲಿ, ಯಾವುದೇ ದೃಷ್ಟಿಕೋಣದಿಂದ ಪ್ರಾಂತ್ಯ ವಿಂಗಡಣೆ ಮಾಡಬೇಕಾದರೂ ಭಾಷೆಯನ್ನೂ ಒಂದು ಆಧಾರವಾಗಿಟ್ಟುಕೊಂಡು ವಿಂಗಡಣೆ ಮಾಡಬೇಕಾಗಿ ಬಂದೇಬರುತ್ತದೆ. ಪ್ರಾಂತ್ಯಗಳು ಈಗ ನೇರವಾಗಿರಲಿ ಬಿಡಲಿ, ಕಾರಣಾಂತರದಿಂದ, ಅದು ಚಾರಿತ್ರಿಕ ವಾಗಿಯೇ ಆಗಲಿ ಇನ್ನಾವ ಕಾರಣದಿಂದಲೇ ಆಗಲಿ ಈಗಿರುವ ಮದ್ರಾಸ್ ಪ್ರಾಂತ್ಯ, ಬೊಂಬಾಯಿ ಪ್ರಾಂತ್ಯ ತಿರುವಾಂಕೂರು-ಕೊಚ್ಚಿನ್ ಪ್ರಾಂತ್ಯಗಳು ಎರಡು ಮೂರು ಭಾಷೆಗಳನ್ನಾಡುವ ಜನರನ್ನೊಳಗೊಂಡಿರುವುದರಿಂದ ಮತ್ತು ಈಗಾಗಲೇ ಭಾಷೆಯ ಆಧಾರದ ಮೇಲೆ ವಿಂಗಡಣೆ ಮಾಡುವುದಕ್ಕೆ ಒಬ್ಬರಿಗೆ ಒಪ್ಪಿಗೆ ಕೊಟ್ಟಿರುವುದರಿಂದ, ಇತರರಿಗೂ ಅವರವರ ಭಾಷೆ ಗನುಸಾರವಾಗಿ ಬೇರೆ ಪ್ರಾಂತ್ಯ ಮಾಡಿಕೊಳ್ಳಲಿಕ್ಕೆ ಅವಕಾಶ ಕೊಟ್ಟೇಕೊಡಬೇಕು. ಫಜಲಾಲಿ ಕಮಿಷನ್ನವರೂ ಕೂಡ ಬೇರೆ ರೀತಿಯಲ್ಲಿ ವಿಂಗಡಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಹೀಗೆ ಭಾಷೆಗಳಮೇಲೆ ಪುನರ್ವಿಂಗಡಣೆ ಮಾಡಬೇಕಾದ ಕಾಲದಲ್ಲಿ ನಮ್ಮ ಮುಂದಿರುವ ಸಮಸ್ಯೆ ಏನೆಂದರೆ, ಮೈಸೂರಿಗೆ ಸಂಬಂಧಪಟ್ಟಂತಿರುವ ಪ್ರದೇಶ ಈಗ ಇದ್ದ ಹಾಗೆಯೇ ಇರಬೇಕೇ ಅಥವಾ ವಿಸ್ತಾರವಾಗಬೇಕೇ ಅಥವಾ ಇದಕ್ಕೆ ಕನ್ನಡ ಮಾತನಾಡತಕ್ಕ ಇತರ ಪ್ರದೇಶಗಳು ಅಂದರೆ ಬೊಂಬಾಯಿನಲ್ಲಿರತಕ್ಕ 3-4 ಡಿಸ್ಟ್ರಿಕ್ಟ್‌ಗಳು, ಹೈದರಾಬಾದಿನಲ್ಲಿರತಕ್ಕ 3-4 ಡಿಸ್ಟ್ರಿಕ್ಟ್‌ಗಳು ಜೊತೆಗೆ ಮದ್ರಾಸಿನ ದಕ್ಷಿಣ ಕನ್ನಡ ಜಿಲ್ಲೆ, ಕೊಳ್ಳೇಗಾಲ ಮುಂತಾದುವೆಲ್ಲಾ ಸೇರಿ ಅಖಂಡ ಕರ್ಣಾಟಕ ಅಥವಾ ಕರ್ಣಾಟಕ ಏಕೀಕರಣ ವಾಗಬೇಕೇ ಎಂಬುದು. ಈ ಸಮಸ್ಯೆಯನ್ನು ಬಗೆಹರಿಸ ಬೇಕಾಗಿದೆ. ಈ ವಿಷಯದಲ್ಲಿ ನಾವು ಜವಾಬ್ದಾರಿಯಿಂದ ಯಾವ ರೀತಿ ಮಾಡಬೇಕೆಂದು ಹೇಳಿ ಸಲಹೆ ಮಾಡ ಬೇಕಾಗಿದೆ.

ಮಾನ್ಯ ಪಟ್ಟಾಭಿರಾಮರವರು ಮಾತನಾಡುತ್ತಾ, ಈ ಪ್ರಶ್ನೆ ಮೈಸೂರಿಗೆ ಸಂಬಂಧಪಟ್ಟ ಹಾಗೆಯೇ ಇಲ್ಲ, ಇಡೀ ಇಂಡಿಯಾ ದೇಶದಲ್ಲಿರತಕ್ಕ ಪ್ರಾಂತ್ಯಗಳನ್ನು ಪುನರ್ವಿಂಗಡಣೆ ಮಾಡಬೇಕಾದ ಕಾಲದಲ್ಲಿ, ಮೈಸೂರಿನಲ್ಲಿ ಎಷ್ಟು ಜನರಿರಬೇಕು, ಒಂದು ಕೋಟಿ ಜನರಿರಬೇಕೇ ಎರಡು ಕೋಟಿ ಜನರಿರಬೇಕೇ ಎಷ್ಟು ಚದರಮೈಲಿಗಳ ವಿಸ್ತೀರ್ಣವಿರಬೇಕೆಂಬ ಪ್ರಶ್ನೆಯೇ ಬರುವುದಿಲ್ಲ, ಇಂಡಿಯಾ ದೇಶದ ಚಿತ್ರಪಟ ಇಟ್ಟುಕೊಂಡು ಅದಕ್ಕೆಲ್ಲಾ ಅನ್ವಯಿಸುವಂತೆ ಯೋಚನೆ ಮಾಡಬೇಕಾಗಿ ಬರುತ್ತದೆ. ಈ ದೃಷ್ಟಿಯಿಂದ ಮೈಸೂರಿಗೆ ಈ ಕನ್ನಡ ಮಾತನಾಡುವ ಪ್ರದೇಶಗಳು ಸೇರಬೇಕು ಎಂಬ ಅರ್ಥದಲ್ಲಿ ಮಾತನಾಡಿದರು.

ಆದರೆ, ಅದೇ ಒಂದು ಆಧಾರವಾಗಿಟ್ಟುಕೊಂಡು ಮೊದಲು ಸ್ವಲ್ಪ ವಿಮರ್ಶೆ ಮಾಡುವುದಾದರೆ, ಕರ್ಣಾಟಕ ಏಕೀಕರಣವಾಗಬೇಕೆಂದು ಹೇಳುವವರು ಈ ಎರಡು ಕೋಟಿ ಜನರೂ ಏಕೆ ಒಂದಾಗಿರಕೂಡದೆಂದು ಒಂದು ವಾದ ಹೂಡಬಹುದು. ಜನಗಣನೆಯ ಲೆಕ್ಕದ ಪ್ರಕಾರ ಹೆಚ್ಚು ಕಡಮೆ ಎರಡು ಕೋಟಿ ಚಿಲ್ಲರೆ ಕನ್ನಡಿಗರಾಗುತ್ತಾರೆ. ಆದ್ದರಿಂದ ಎರಡು ಕೋಟಿ ಜನ ಒಂದು ಪ್ರಾಂತ್ಯದಲ್ಲಿರಬೇಕೆಂದು ಹೇಳುವುದಾದರೆ ಕರ್ಣಾಟಕ ಏಕೀಕರಣವಾಗಬೇಕು. ಈ ರೀತಿಯಾಗಿ ಹೇಳಿದರೆ ಇದು ಸಾಧನೆಯಾಗುತ್ತದೆಂಬ ದೃಷ್ಟಿಯಿಂದ ಒಂದೊಂದು ಪ್ರಾಂತ್ಯದಲ್ಲಿ ಎರಡು ಕೋಟಿಇರಲಿ ಎಂಬುದು ಒಂದು ವಾದ. ಇನ್ನೊಂದು ದೃಷ್ಟಿಯಿಂದ ಒಂದು ಕೋಟಿಯೇ ಒಂದು ಪ್ರಾಂತ್ಯದಲ್ಲಿರಬೇಕು, ಮೈಸೂರನ್ನೇ ಒಂದು ಯೂನಿಟ್ಟಾಗಿ ಇಟ್ಟುಕೊಂಡರೆ ಎಲ್ಲಾ ಪ್ರಾಂತ್ಯಗಳನ್ನೂ ಮೈಸೂರಿನ ಆಧಾರದ ಮೇಲೆಯೇ ವಿಂಗಡಣೆ ಮಾಡಬಹುದೆಂದು ಹೇಳಿ ಮೈಸೂರು ಇದ್ದ ಹಾಗೆಯೇ ಇರಲೆಂಬುದು ಇನ್ನೊಂದು ವಾದ. ಎರಡು ಕೋಟಿಯೇ ಇರಬೇಕೆಂದು ಬ್ರಹ್ಮಲಿಪಿಯನ್ನು ಯಾರೂ ಬರೆದಿಲ್ಲ. ಅಥವಾ ಒಂದು ಕೋಟಿಯೇ ಇರಬೇಕೆಂದು ಯಾರೂ ಬ್ರಹ್ಮಲಿಪಿ ಬರೆಯಬೇಕಾಗಿಲ್ಲ. ಇವೆಲ್ಲಾ Real Problems ಯಾವ ರೀತಿಯಿವೆಯೋ ಅದರ ಮೇಲೆ ಹೋಗುತ್ತದೆ. ಆದ್ದರಿಂದ Realities ಇರತಕ್ಕದ್ದನ್ನು ನೇರವಾಗಿ ಎದುರಿಸಿ ಮಾತನಾಡುವುದಾದರೆ, $6\frac{1}{2}$-7 ಕೋಟಿಯಷ್ಟಿರುವ ಒಂದು ದೊಡ್ಡ ಪ್ರಾಂತ್ಯವನ್ನು ವಿಭಾಗ ಮಾಡುವಾಗ ಎರಡು ಕೋಟಿಯೇ ನಿಗದಿಮಾಡ ಬೇಕೆಂದೇನಿದೆ? ಒಂದು ವೇಳೆ ಒಂದು ಪ್ರಾಂತ್ಯ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೆ ಒಂದು ಸಾವಿರ ಮೈಲಿ ಉದ್ದ ಇರುವುದಾದರೆ ಅದನ್ನು ನಾಲ್ಕೈದು ಭಾಗ ಮಾಡಿದರೆ ಅದರಲ್ಲಿ ತಪ್ಪೇನು! ಅಥವಾ ಅಮೇರಿಕಾ ದೇಶದಲ್ಲಿ ಮಾಡಿರುವಂತೆ ಭೂಪಟ ಇಟ್ಟುಕೊಂಡು ಹಾಗೊಂದು ಮೈಲಿಗೆ ಹೀಗೊಂದು ಮೈಲಿಗೆ ಗೆರೆಗಳನ್ನೆಳೆದು ಮಧ್ಯೆಬರುವ ಚೌಕಟ್ಟಿನ ಪ್ರದೇಶದಲ್ಲಿರುವುದನ್ನೇ ಒಂದು ಪ್ರಾಂತ್ಯವೆಂದು ಹೇಳುವುದಾದರೆ ಈ ರೀತಿ ಒಂದು ಕೋಟಿ ಎರಡು ಕೋಟಿ, ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಇದೂ ಒಂದು ರೀತಿ. ಅಂತೂ ಯಾವುದೇ ನೀತಿ ಮಾಡಲಿ, ಈ ಸಮಸ್ಯೆ ಹೀಗೆ ನಾನಾ ರೀತಿಯಲ್ಲಿರುವಾಗ ಯಾರೊಬ್ಬರೂ ಎರಡು ಕೋಟಿಯೇ ಇರಲಿ, ಅಥವಾ ಒಂದು ಕೋಟಿಯೇ ಇರಬೇಕೆಂದು ಹೇಳುವ ಹಾಗಿಲ್ಲ. ಎರಡು ಕೋಟಿ ಇರಬೇಕೆಂದರೂ ಇರಬೇಕಾಗುತ್ತದೆ ಒಂದು ಕೋಟಿ ಇರಬೇಕೆಂದರೂ ಇರಬೇಕಾಗುತ್ತದೆ. ಆದ್ದರಿಂದ ಇದೇ ಸರಿಯೆಂದು ಹೇಳುವುದು ಜಾಣ್ಮೆಯ ಮಾತಾಗುವುದಿಲ್ಲ. ಹಾಗಾದರೆ ಮೈಸೂರು ಪ್ರಾಂತ್ಯ ಈಗ ಇದ್ದ ಹಾಗೆಯೇ ಇಟ್ಟುಕೊಂಡಿರುವುದಕ್ಕೆ ಸಾಧ್ಯವೇ ಅಂದರೆ ಅದು ಸಾಧ್ಯವಾಗುವುದಿಲ್ಲವೆಂದು ನನಗೂ ಅರ್ಥವಾಗುತ್ತದೆ. ಯಾವ ಪ್ರಾಂತ್ಯವನ್ನೇ ಆಗಲಿ ಅದಕ್ಕೆ ಸ್ವಲ್ಪವೂ ಸೇರಿಸದೇ ಹಾಗೆಯೇ ಇಟ್ಟುಕೊಳ್ಳುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಹೀಗಿರುವಲ್ಲಿ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಕರ್ಣಾಟಕ ಪ್ರಾಂತ್ಯ ಒಂದಾಗಬೇಕು, ಬಾಕಿ ಪ್ರಾಂತ್ಯಗಳು ಇಲ್ಲಿಗೆ ಸೇರಬೇಕೆಂದು ಹೇಳುವಾಗ ಇದರ ಸಾಧಕ ಬಾಧಕಗಳನ್ನು ಯೋಚನೆ ಮಾಡಬೇಕಾದದ್ದು ಸರಿಯಾಗಿದೆ. ಈ ಸಂದರ್ಭದಲ್ಲಿ ಸಾಧಕ ಬಾಧಕಗಳನ್ನು ಯೋಚನೆ ಮಾಡುವುದೇಬೇಡ, ಅದನ್ನು ತಾತ್ವಿಕ ದೃಷ್ಟಿಯಿಂದಲೇ Sentimental ಆಗಿಯೇ ಯೋಚಿಸಬೇಕು, ಅಂಕಿ ಅಂಶಗಳು ಬೇಡ, ಮೈಸೂರು ದೇಶಕ್ಕೆ ಒಳ್ಳೆಯದಾಗುತ್ತದೆಯೆಲ್ಲ ಎಂಬ ಲಾಭ ನಷ್ಟದ ದೃಷ್ಟಿ ಬೇಡ, ಕನ್ನಡಿಗರೆಲ್ಲಾ ಒಂದೇ ಎಂಬ ಭಾವನೆಯಿಂದ ತೊಂದರೆಯಾದರೂ ಆಗಲಿ ಮುಂದಾದರೂ ಸುಖವಾಗುತ್ತದೆಂದು ಹೇಳಿ ಈ ಸಮಸ್ಯೆಯನ್ನು ಯೋಚಿಸಬೇಕು, ನಮ್ಮ ಅಣ್ಣ ತಮ್ಮಂದಿರು ನಮ್ಮ ಜೊತೆಯಲ್ಲಿ ಸೇರಬೇಕು ಎಂದು ಮುಂತಾಗಿ ಕೆಲವು ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೆಲವರು ಸೂಚಿಸಿದ್ದಾರೆ.

3 P.M.

ಸ್ವಾಮಿ, ನಾನು ನಮ್ಮ ದೇಶದ ಕಷ್ಟ ಸುಖಗಳೇನೇ ಇರಲಿ ಕರ್ಣಾಟಕ ಪ್ರಾಂತ್ಯವಾಗಲೇ ಬೇಕು ಎಂಬು

(ಶ್ರೀ ಎಂ. ಚಿಕ್ಕಲಿಂಗಯ್ಯ.)

ದ್ದಾಗಿ ಇಷ್ಟಪಡತಕ್ಕ ಜನರಪೈಕಿ ನಾನು ಒಬ್ಬನಾಗಿಲ್ಲ ಎಂದು ಹೇಳುತ್ತೇನೆ. ಮೈಸೂರನ್ನೊಳಗೊಂಡ ಕರ್ಣಾಟಕವಾಗಬೇಕೆ ಅಥವಾ ಮೈಸೂರು ಹಾಗೆಯೇ ಉಳಿಯಬೇಕೆ ? ಎಂಬುದು ಸುಮಾರು ಎರಡು ಕೋಟಿ ಜನಗಳಿಗೆ ಸಂಬಂಧಪಟ್ಟಂಥ ಪ್ರಶ್ನೆಯಾಗಿದೆ. ಈಗ ಮೈಸೂರು ಇರುವಷ್ಟೇ ಆದರೆ ಆಗ ಇದು ಒಂದು ಕೋಟಿ ಜನರ ಸಮಸ್ಯೆಯಾಗುತ್ತದೆ. ಅನೇಕ ವರ್ಷಗಳಿಂದಲೂ ಈ ಮೈಸೂರನ್ನು ಇಂಥ ಸ್ಥಿತಿಯಲ್ಲಿ ಇಟ್ಟುಕೊಂಡು, ಇದನ್ನು ಇಷ್ಟರ ಮಟ್ಟಿಗೆ ಬೆಳೆಸಿಕೊಂಡು ಬಂದಿರತಕ್ಕ ಜನರ ಅಭಿಪ್ರಾಯ ಯಾವ ರೀತಿಯಿದೆ ಎನ್ನುವುದನ್ನು ತೆಗೆದುಕೊಳ್ಳದೆ ನಮ್ಮ ಅಭಿಪ್ರಾಯವೇ ಶ್ರೇಷ್ಠವಾದದ್ದು, ಒಳ್ಳೆಯದು ಎಂತ ಹೇಳಿಕೊಂಡು ಈ ಪ್ರಾಂತ್ಯಗಳ ಪುನರ್ವಿಂಗಡಣೆಯನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ಈಗ ಅನೇಕ ಮಾನ್ಯಸದಸ್ಯರು ಏನು ಹೇಳಿರುತ್ತಾರೋ ಅದು ಅನೇಕರಿಗೆ ಹಿಡಿಸದೆ ಇರಬಹುದು ಎಂದು ಹೇಳಬಹುದು. ಆದರೆ ಈ ಹಿಂದೆ ಆ ಪ್ರಾಂತ್ಯಗಳ ಪುನರ್ವಿಂಗಡಣೆ ಸಮಿತಿಯವರು ನಮ್ಮ ದೇಶಕ್ಕೆ ಬಂದಿದ್ದಾಗ್ಗೆ ಅವರಿಗೆ ಅನೇಕ ಪ್ರತಿನಿಧಿಗಳನ್ನು ನಮ್ಮ ದೇಶ ಯಾವರೀತಿ ಇರಬೇಕು ಅನ್ನತಕ್ಕ ಬಗ್ಗೆ ಅನೇಕ ಅಭಿಪ್ರಾಯಗಳನ್ನು ಸೂಚಿಸಿರುತ್ತಾರೆ. ಅನೇಕ ಕಾಂಗ್ರೆಸ್ ಸಂಸ್ಥೆಗಳೂ ಕೂಡ ಅನೇಕ ವರದಿಗಳನ್ನು ಆ ಸಮಿತಿಯವರಿಗೆ ಒಪ್ಪಿಸಿವೆ, ಹೀಗೆ ಈ ಪ್ರಶ್ನೆಯು ಒಂದು ಮಟ್ಟಕ್ಕೆ ಬಂದಿರುವಾಗ ಈ ರೀತಿಯಾಗಿ ನಾವು ಒಂದು ವಾದವಿವಾದಕ್ಕೆ ಇಟ್ಟುಕೊಳ್ಳುವುದು ಸರಿಯಾದದ್ದಲ್ಲವೆಂದೂ ಮತ್ತು ಇಂಥ ವಿಚಾರದಲ್ಲಿ ಒಂದು ಪ್ಲೆಬಿಸ್ಸೈಟನ್ನೆತ್ತುವುದೆಂದರೇನು ಅರ್ಥ, ಓಟ್ಸ್ ತೆಗೆದುಕೊಳ್ಳುವುದೆಂದರೇನು ಅರ್ಥ, ಇದೆಲ್ಲಾ ಒಂದು ಮೂರ್ಖತನ ಎಂಬುದಾಗಿಯೂ ಶ್ರೀಮಾನ್ ಚೆನ್ನಬಸಪ್ಪನವರು ಹೇಳಿದರು.

Mr. SPEAKER.—Does the Hon'ble Member intend to take more time?

Sri D. DEVARAJ URS.—Yes.

Mr. SPEAKER.—The House will rise for lunch and meet at 3-30.

The House adjorned for Lunch at Two Minutes past Three of the Clock and met again at Thrirty-two Minutes past Three of the Clock.

[MR. SPEAKER. in the Chair].

ಶ್ರೀ ಡಿ. ದೇವರಾಜೇ ಅರಸ್.—ಈಗ ನಮ್ಮ ಮಾನ್ಯ ಸಭೆಯಲ್ಲೇ, ಸ್ವಾಮಿ, ನಮ್ಮ ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಭಿಪ್ರಾಯ ಈ ವಿಚಾರದಲ್ಲಿ ಈಗ ಯಾವ ರೀತಿ ಇದೆ, ಹಿಂದೆ ಯಾವರೀತಿ ಇತ್ತು ಎನ್ನುವುದನ್ನು ಸದಸ್ಯರು ವ್ಯಕ್ತಪಡಿಸಿದ್ದಾರೆ. ಕರ್ಣಾಟಕ ಏಕೀಕರಣ ವಾಗಲೇಬೇಕೆಂಬ ಬಗ್ಗೆ ನಮ್ಮ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ಒಂದು ನಿರ್ಣಯವನ್ನೇ ಪಾಸ್ ಮಾಡಿರುತ್ತಾರೆಂದು ಕೂಡ ಈಗ ಮಾತನಾಡಿರತಕ್ಕಂಥ ಮಾನ್ಯ ಸದಸ್ಯರುಗಳೆಲ್ಲಾ ತಿಳಿಸಿರುತ್ತಾರೆ. ಪ್ರಶ್ನೆ ಸ್ವರಾಜ್ಯ ಬಂದಮೇಲೆ ಮತ್ತಷ್ಟು ಸುಲಭವಾಗಿ ತೀರ್ಮಾನ ವಾಗುವಂತೆ ಕಾಣುತ್ತಿತ್ತು. ಆದರೆ ಈಗ ಇದೊಂದು ಜಟಿಲ ಪ್ರಶ್ನೆಯಾಗಿ ಪರಿಣಮಿಸಿದೆ. ಆದಕಾರಣ ಇಂಥ ಒಂದು ಮುಖ್ಯ ಪ್ರಶ್ನೆಯನ್ನು ಪರಿಶೀಲನೆ ಮಾಡಲು ಆಲ್‌ಇಂಡಿಯಾ ಕಾಂಗ್ರೆಸ್ ಸಮಿತಿಯವರು ಎಲ್ಲಾ ಪ್ರಾಂತ್ಯಗಳನ್ನೂ ಭಾಷಾವಾರು ಆಧಾರದ ಮೇಲೆ ರಚನೆ ಮಾಡತಕ್ಕದ್ದಾಗಿದ್ದರೆ ಇದು ಇಡೀ ಭರತಖಂಡಕ್ಕೆ ಅನ್ವಯಿಸತಕ್ಕಂಥ ಪ್ರಶ್ನೆಯಾದುದರಿಂದ ಇದನ್ನು ಮುಂದೆ ಯಾವ ರೀತಿ ಮಾಡಬೇಕಾಗಿದೆ, ಯಾವ ವಿಧಾನವನ್ನು ಅನುಸರಿಸಬೇಕು, ದೇಶಾದ್ಯಂತವೂ ಇರುವ ಕಾಂಗ್ರೆಸ್ ಸದಸ್ಯರುಗಳು ಈ ವಿಚಾರದಲ್ಲಿ ಏನು ಅಭಿಪ್ರಾಯ ಪಡುತ್ತಿದ್ದಾರೆ, ಇದು ಜಟಿಲವಾದಂಥ ಪ್ರಶ್ನೆ, ನಮಗೆ ಸ್ವಾತಂತ್ರ್ಯ ಬಂದಮೇಲೆ ನಮ್ಮ ರಾಜ್ಯಗಳು ಯಾವ ರೀತಿ ಇರಬೇಕೆಂಬ ಬಗ್ಗೆ ಈ ಹಿಂದೆಯೇ ನಾವು ನಿರ್ಣಯಗಳನ್ನು ಪಾಸ್ ಮಾಡಿದ್ದೇವೆ ಆದರೆ ಈಗ ಯಾವ ಅಭಿಪ್ರಾಯಗಳಿರುತ್ತವೆ ಎನ್ನುವುದರ ಬಗ್ಗೆ ಶೇಖರಣೆ ಮಾಡುತ್ತಿದ್ದಾರೆ. ಆದರೆ ಹೀಗೆಲ್ಲಾ ಮಾಡುವುದು ಸರಿಯಾದದ್ದಲ್ಲ, ಈಗ ಪುನಃ ಜನರ ಅಭಿಪ್ರಾಯವನ್ನೇನೂ ಕೇಳಬೇಕಾಗಿಲ್ಲ ಎಂದು ಮಾನ್ಯ ಸದಸ್ಯರು ಕೆಲವರು ವಾದಮಾಡುತ್ತಿದ್ದಾರೆ. ಆದರೆ ಈ ಚರ್ಚೆ ಇಲ್ಲಿ ಷುರುವಾದ ಮೇಲೆ ಈ ಏಕೀಕರಣ ಪ್ರಶ್ನೆಯ ಸಂಬಂಧದಲ್ಲಿ ಪರವಾಗಿಯೂ ಮತ್ತು ವಿರೋಧವಾಗಿಯೂ ಭಾಷಣಗಳಾಗಿರುವುದು ತಮಗೆಲ್ಲರಿಗೂ ಗೊತ್ತೇ ಇದೆ. ಅಂದ ಮೇಲೆ ಇದರ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ ಎಂಬುದು ಗೊತ್ತಾಗುತ್ತದೆ. ಹೀಗೆ ಸದಸ್ಯರಲ್ಲೇ ಭಿನ್ನಾಭಿಪ್ರಾಯಗಳಿರುವಾಗ, ಈ ವಿಚಾರದಲ್ಲಿ ನೇರವಾದಂಥ ಮತ್ತು ನಿರ್ದಿಷ್ಟವಾದಂಥ ರೀತಿಯಲ್ಲಿ ಜನರನ್ನೇ ಕೇಳಿ, ಇದರಿಂದ ನಮ್ಮ ದೇಶದ ಜನರ ಹಿತಸಾಧನೆಯಾಗುತ್ತದೆಯೇ ಅಥವಾ ಇಲ್ಲವೇ ಎನ್ನತಕ್ಕ ಬಗ್ಗೆ ಜನರನ್ನೇ ಕೇಳಬೇಕು ಎಂದು ಹೇಳುವುದರಲ್ಲಿ ತಪ್ಪೇನಿದೆ ? ಈ ದಿವಸ ಈ ಪ್ರಶ್ನೆ ಒಂದುಕೋಟಿ ಜನರಿಗೆ ಸಂಬಂಧಪಟ್ಟಿರತಕ್ಕದ್ದಾಗಿದ್ದರೂ ಕೂಡ, ಅವರು ಹಿತಸಾಧನೆಯ ಕಡೆಗೆ ಲಕ್ಷ್ಯವಿಡದೆ, ಇಲ್ಲಿಗೆ 20ನೇ ಶತಮಾನಕ್ಕೆ ಹಿಂದೆ ಯಾವುದೋ ಒಬಿಗಾಯನ ಕಾಲದಲ್ಲಿ ಗಂಡೂ, ಹೆಣ್ಣೂ ಒಪ್ಪಿದ್ದರು, ಆದ್ದರಿಂದ ಈಗ ಆ ಒಪ್ಪಂದದಂತೆ ಲಗ್ನವಾಗಲೇಬೇಕೆಂದು ಹೇಳುತ್ತಿದ್ದಾರೆ. ಆದರೆ ತಾವು ಈಗ ಆ ರೀತಿ ಜನರನ್ನೆಲ್ಲಾ ಕೇಳುವುದಕ್ಕೆ ಕಾಲವಿದೆಯೇ, ನಾವು ಇನ್ನೂ ಆ ಫಜಲ್ಲಾಲಿ ಸಮಿತಿಯವರಿಗೆ ನಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅವಕಾಶವಿದೆಯೇ, ಇದಕ್ಕೆಲ್ಲಾ ಕಾಲವಿದೆಯೇ ಎಂದು ತಾವುಗಳು ಕೇಳಬಹುದು, ಈಗ ಇದಕ್ಕೆಲ್ಲಾ ಕಾಲವಿಲ್ಲದೇ ಇರಬಹುದು. ನಮ್ಮ ಮೈಸೂರು ದೇಶ ವಿಸ್ತಾರವಾಗಬಹುದು. ಆದರೆ ಹಾಗೆ ಅಕ್ಕಪಕ್ಕದ ದೇಶಗಳು ಸೇರಿಬಿಟ್ಟುಗೊಡಬೇಕಾಗಿದ್ದರೆ ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಈಗ ಆಡಳಿತವರ್ಗದವರು ತರಿಸಿಕೊಂಡಿರತಕ್ಕಂಥ ಉದ್ದೇಶವಾದರೂ ಇದರ ಸಾಧಕಬಾಧಕಗಳೇನು ಅನ್ನುವುದನ್ನು ಚರ್ಚೆಮಾಡಬೇಕು ಅನ್ನುವುದೇ ಆಗಿದೆ. ಆದರೆ ಈ ಅಂಕಿಅಂಶಗಳ ವರದಿಯಲ್ಲಿ ಇದರ ಸಾಧಕಬಾಧಕಗಳ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ನಾನೀಗ ಚಾಪ್ಟರ್ ಬೈ ಚಾಪ್ಟರ್, ಹೇಳುವುದಕ್ಕೆ ಇಷ್ಟಪಡುವುದಿಲ್ಲ.

Sri H.M. CHANNABASAPPA (Periyapatna).—If the Hon'ble Member were to yield, I would like to make this submission as a matter of fact, a personal explanation, because he has made a reference to me Article 3 makes it very clear. The best brains of India have sat at the Constituent Assembly

and decided that decisions on such important matters as these should be taken not by referendum but by the best brains sitting at the top and having in view the overall picture of what constitutes the best in the interests of the country. Therefore, I say it is not too big a matter to be decided by referendum.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈ ರೆಫರಂಡಂ ಎನ್ನುವುದನ್ನು ಈಗೇನೂ ನಾವು ಜನರಿಂದ ಪಡೆಯಬೇಕಾಗಿಲ್ಲ. ನಾವೆಲ್ಲರೂ ಈ ಹಿಂದೆ ನಮ್ಮೆಲ್ಲರ ಮಹಾ ಚುನಾವಣೆ ಕಾಲದಲ್ಲಿ ಜನರನ್ನು ನೀವು ಇಂಥಿಂಥಾ ಕಾರಣಗಳಿಗೋಸ್ಕರವಾಗಿಯೇ ನಮಗೆ ಓಟುಗಳನ್ನು ಕೊಡಬೇಕಾಗಿರುತ್ತೆಂದೂ, ನಾವು ಕರ್ಣಾಟಕ ಪ್ರಾಂತ್ಯ ನಿರ್ಮಾಣ ಮಾಡುತ್ತೇವೆಂದೂ ಹೇಳಿ ಜನರಿಂದ ಚುನಾವಣೆ ಹೊಂದಿ ಬಂದಿರುವ ಕಾರಣದಿಂದ ನಾವೀಗ ಈ ವಿಚಾರದಲ್ಲಿ ಮತ್ತೊಮ್ಮೆ ಜನರ ಅಭಿಪ್ರಾಯವನ್ನೇನೂ ಕೇಳಬೇಕಾಗಿಲ್ಲ ಎಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಾನು ಹೇಳುತ್ತಿರುವ ಅಭಿಪ್ರಾಯವೇ ಅದು.

ಶ್ರೀ ಡಿ. ದೇವರಾಜ ಅರಸ್.—ಹಾಗೆ ಇದೊಂದು ದೊಡ್ಡ ಪ್ರಶ್ನೆಯಲ್ಲ ಎಂದು ಆಗಿದ್ದರೆ ಆಗ ಇದನ್ನು ಕೇಂದ್ರದವರೇ ಯಾರನ್ನೂ ಕೇಳದೆ ಅವರೇ ಮಾಡಬಹುದಾಗಿತ್ತಲ್ಲ. ಆದರೆ ಅವರು ಹಾಗೆ ಮಾಡಲಿಲ್ಲ. ಅಂದವೇಳೆ ದೇಶದ ಪ್ರತಿನಿಧಿಗಳ ಅಭಿಪ್ರಾಯವನ್ನು ಸರಿಪಡಿಸಿಕೊಂಡಾಕ್ಷಣಕ್ಕೆ ಅದನ್ನು ಮಾಡಿಯೇ ತೀರಬೇಕೆಂದು ಯಾವ ಸಿದ್ಧಾಂತವೂ ಇಲ್ಲ.

ಶ್ರೀ ಎಚ್.ಎಂ. ಚೆನ್ನಬಸಪ್ಪ.—ನಮ್ಮೆಲ್ಲರ ಅಭಿಪ್ರಾಯಗಳೇನೇ ಇರಲಿ, ನಮಗೆ ಇದರ ಬಗ್ಗೆ ಇಷ್ಟವಿರಲಿ, ಇಲ್ಲದೇ ಇರಲಿ, ಇದರ ಕೊನೆಯ ತೀರ್ಮಾನದ ಅಧಿಕಾರ ಪಾರ್ಲಿಮೆಂಟಿನವರ ಕೈಯ್ಯಲ್ಲಿದೆ ಎನ್ನುವುದನ್ನು ತಾವುಗಳು ಯಾರೂ ಮರೆಯಬಾರದು.

ಶ್ರೀ ಡಿ. ದೇವರಾಜ ಅರಸ್.—ಆದರೆ ಈಗ ನಾವು ಇದರ ಪರವಾಗಿ ಮಾತನಾಡುತ್ತಿದ್ದೇವೆಯೇ ಅಥವಾ ವಿರೋಧವಾಗಿ ಮಾತನಾಡುತ್ತಿದ್ದೇವೆಯೇ ಎನ್ನುವುದು ಬೇರೆ ವಿಚಾರ. ಆ ಕೇಂದ್ರ ಸರ್ಕಾರದವರು ಈ ಬಗ್ಗೆ ನಿಮ್ಮೆಲ್ಲರ ಅಭಿಪ್ರಾಯವೇನಿರುತ್ತೆಂದು ಕೇಳುತ್ತಾರೆ ಎಂದು ನಾವು ತಿಳಿದಿದ್ದೆವು. ಹಾಗೆ ನಮ್ಮೆಲ್ಲರ ಅಭಿಪ್ರಾಯವನ್ನು ಅವರು ಕೇಳಬೇಕಾಗಿಲ್ಲವೆಂದು ಹೇಳುವಪಕ್ಷಕ್ಕೆ ಆ ಆಂಧ್ರ ಬಿಲ್ಲನ್ನು ಈ ಸಭೆಯ ಮುಂದೆ ಚರ್ಚೆಗಾಗಿ ಏಕೆ ತರಬೇಕಾಗಿತ್ತು ? ಅದನ್ನೂ ಅವರೇ ಮಾಡಬಹುದಾಗಿತ್ತಲ್ಲ. ಆದರೆ ಇಂಥ ವಿಚಾರಗಳಲ್ಲಿ ಕೇಂದ್ರ ಸರ್ಕಾರದವರು ಏನೇ ಮಾಡಿರಲಿ ಅದನ್ನೆಲ್ಲಾ ಅವರು ನಮ್ಮೆಲ್ಲರ ಇಷ್ಟದ ಪ್ರಕಾರವೇ ಮಾಡಿದ್ದಾರೆ.

Sri H. M. CHANNABASAPPA.—I never said that the views of the Legislature would be disregarded. It will be given its due weight, but in spite of it, if the people sitting at the top, that is, in the Parliament, consider, in spite of your opinion, that a certain thing is good in the interests of the country, nothing prevents them from acting accordingly, whether on the lines suggested by the House or otherwise. That is what I said.

ಶ್ರೀ ಡಿ. ದೇವರಾಜ ಅರಸ್.—ಆದರೆ ಅಂಥ ಸಂದರ್ಭವಿನ್ನೂ ಬಂದಿಲ್ಲ. ಈಗ ಅವರು ಕೇಳಿದ್ದಾರೆ. ಆದುದರಿಂದಲೇ ಈಗ ನಮ್ಮ ಸರ್ಕಾರದವರು ಇದನ್ನೆಲ್ಲಾ ನಮ್ಮ ಮುಂದೆ ಇಟ್ಟಿದ್ದಾರೆ. ಇಲ್ಲಿ ಬರತಕ್ಕಂಥ ಅಭಿಪ್ರಾಯ ಯಾವ ರೀತಿ ಇರುತ್ತದೆಯೋ ಅದರ ಪ್ರಕಾರ ಅವರು ಮುಂದುವರಿಯಬೇಕೆಂದಿದ್ದಾರೆ. ಆದರೆ ನಾವೀಗ ಈ ಅಂಕಿ ಅಂಶಗಳ ವರದಿಯ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿದೆ. ಆದರೆ ನಾವು ಈಗ ಈ ವರದಿಯಲ್ಲಿ ಹೇಳಿರತಕ್ಕಂಥ ವಿಚಾರಗಳನ್ನು ಪರಿಶೀಲಿಸಿದರೆ—ಬೊಂಬಾಯಿ, ಮದ್ರಾಸ್ ಮತ್ತು ಹೈದರಾಬಾದ್ ಪ್ರಾಂತ್ಯಗಳಲ್ಲಿರತಕ್ಕಂಥ ಕನ್ನಡ ಜನರಿರುವ ಪ್ರದೇಶಗಳನ್ನೆಲ್ಲಾ ಸೇರಿಸಿಕೊಳ್ಳುವುದರಿಂದ ನಮ್ಮ ಸರ್ಕಾರದ ಆಡಳಿತದಲ್ಲಿ ಏನೇನು ಏರುಪೇರುಗಳಾಗಬಹುದು, ಇದರಿಂದ ಹಣಕಾಸಿನ ದೃಷ್ಟಿಯಿಂದ ಯಾವ ರೀತಿ ತೊಂದರೆಯಾಗುತ್ತದೆ, ಇದರಿಂದ ಮೈಸೂರು ಸರ್ಕಾರಕ್ಕೆ ಖೋತಾಬರುವ ಮೊಬಲಗೆಷ್ಟಾಗುತ್ತದೆ ಇತ್ಯಾದಿ ಅಂಶಗಳನ್ನೆಲ್ಲಾ ಈ ವರದಿಯಲ್ಲಿ ಸೂಚಿಸಿದ್ದಾರೆ. ನಾವೀಗ ಈ ನಮ್ಮ ದೇಶವನ್ನು ದೊಡ್ಡದಾಗಿ ಮಾಡಬೇಕೆಂಬುದು ಜನರ ಹಿತದೃಷ್ಟಿಯಿಂದ ಲಾಭವೇ ಅಥವಾ ನಷ್ಟವೇ ಎನ್ನುವುದನ್ನು ನಾವು ಪರಿಶೀಲಿಸಿ ಹೇಳುವುದಾದರೆ ಇದರಿಂದ ನಮಗೆ ತೊಂದರೆ ಆಗುತ್ತದೆ ಎಂದು ಹೇಳಲೇಬೇಕಾಗುತ್ತದೆ. ಆದರೆ ನಾನೀಗ ಆ ತೊಂದರೆಗಳೇನು ಎನ್ನುವುದನ್ನು ಡೀಟೇಲ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ. ನಮಗೆ ಹಾಲಿ ಇರತಕ್ಕಂಥ ಅನುಕೂಲಗಳು ಕಡಿಮೆಯಾಗುತ್ತವೆ ಇಲ್ಲವೇ ಅವುಗಳನ್ನು ಕುಂಠಿತಗೊಳಿಸಬೇಕಾಗುತ್ತದೆಯೆಂದು ವರದಿಯಲ್ಲೇ ತಿಳಿಸಿದ್ದಾರೆ. ವರದಿಯಲ್ಲಿ ಹೀಗೆ ತಿಳಿಸಿದ್ದರೂ ಕೂಡ ಈ ಪ್ರಶ್ನೆಯನ್ನು ನಾವು ಈ ಲಾಭ-ನಷ್ಟಗಳ ದೃಷ್ಟಿಯಿಂದ ನೋಡಬೇಕಾಗಿಲ್ಲ ಎಂದು ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ಆ ದಿವಸ ಆ ಬೊಂಬಾಯಿ ಪ್ರಾಂತ್ಯದಲ್ಲಿರತಕ್ಕಂಥ ಕನ್ನಡ ಪ್ರದೇಶವೆಲ್ಲಾ ಮೈಸೂರಿಗೆ ಸೇರಬೇಕೆಂದು ಹೇಳುತ್ತಿರುವ ಕಾರಣವಾದರೂ ಏನು ? ಆ ಪ್ರದೇಶಗಳು ಆ ಸರ್ಕಾರದ ಆಡಳಿತದಲ್ಲಿರುವುದರಿಂದ ಆ ಜನರಿಗೇನೂ ಲಾಭವಾಗುತ್ತಿಲ್ಲ. ಆ ಸರ್ಕಾರ ಅವರನ್ನು ಕಡೆಗಣ್ಣಿನಿಂದ ನೋಡುತ್ತಿದೆ ; ಆದುದರಿಂದ ಆ ಜನರು ನಮ್ಮ ಮೈಸೂರಿನ ಆಡಳಿತಕ್ಕೊಳಪಟ್ಟರೆ ಅವರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಿರುವಾಗ ಆ ಜನರು ಇಲ್ಲಿಗೆ ಬರುತ್ತಿರುವುದು ಆ ಲಾಭದ ದೃಷ್ಟಿಯಿಂದಲೇ ಎಂದೂ, ಅಲ್ಲಿರುವುದು ನಷ್ಟ ದೃಷ್ಟಿಯಿಂದ ಬೇಡ ಎಂದೂ ಹೇಳಿದಹಾಗಾಯಿತು. ಈ ರೀತಿಯಾಗಿ ಅವರು ಇಲ್ಲಿಗೆ ಬಂದು ಸೇರುತ್ತಿರುವಾಗ ನಾವು ಇದನ್ನು ಲಾಭ-ನಷ್ಟಗಳ ದೃಷ್ಟಿಯಿಂದ ಮಾತನಾಡುವುದು ಬೇಡ ಎಂದು ಹೇಳುತ್ತಾರೆ. ಇದು......

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ಪ್ರಶ್ನೆಯನ್ನು ಲಾಭ-ನಷ್ಟಗಳ ದೃಷ್ಟಿಯಿಂದ ಅವರು ನೋಡಿದರೂ ತಪ್ಪೇ, ನಾವು ನೋಡಿದರೂ ತಪ್ಪೇ ಈ ಪ್ರಶ್ನೆಯನ್ನು ಎಲ್ಲರೂ ಇಡೀ ರಾಷ್ಟ್ರಾಭಿವೃದ್ಧಿಯ ದೃಷ್ಟಿಯಿಂದ ನೋಡಬೇಕಾಗಿದೆ ಎಂದು ನಾನು ಹೇಳಿದೆ. ಈ ಪ್ರಶ್ನೆಯನ್ನು ಯಾರೇ ನೋಡಲಿ ಇದನ್ನು ಲಾಭ-ನಷ್ಟಗಳ ದೃಷ್ಟಿಯಿಂದ ನೋಡಿದರೆ ಅದು ತಪ್ಪಾಗುತ್ತದೆ ಎನ್ನುವುದೇ ನನ್ನ ಗುರಿ.

ಶ್ರೀ ಡಿ. ದೇವರಾಜ ಅರಸ್.—ರಾಷ್ಟ್ರದ ಹಿತ ಬೇರೆ ಇಲ್ಲ, ಎಲ್ಲಾ ಹಿತಗಳೂ ಈ ಆಧಾರದ ಮೇಲೇ ನಿಂತಿರುತ್ತವೆ.—ಹೀಗೆ ಈ ಪ್ರಶ್ನೆಯನ್ನು ಈ ಲಾಭ-ನಷ್ಟಗಳ ದೃಷ್ಟಿಯಿಂದ ನೋಡುವುದು ಬೇಕಾಗಿಲ್ಲ ಎಂದು ಹೇಳುವುದರ ಜೊತೆಗೆ ಮತ್ತೆ

(ಶ್ರೀ ಡಿ. ದೇವರಾಜ ಅರಸ್.)

ಏನೇನು ವಿಚಾರಗಳನ್ನು ಈಗ ಮಾತನಾಡಿರತಕ್ಕಂಥ ಮಾನ್ಯ ಸದಸ್ಯರುಗಳು ಹೇಳಿದ್ದಾರೆ ಎಂದರೆ: ಈ ನಮ್ಮ ಮೈಸೂರಿನ ಸಮಸ್ತ ಜನತೆಯೂ ಅಖಂಡ ಕರ್ಣಾಟಕ ಸ್ಥಾಪನೆಯಾಗತಕ್ಕದ್ದನ್ನು ಸ್ವಾಗತಿಸುತ್ತಿದೆಯೆಂದೂ, ಇದರಿಂದ ಭಾವಿ ಮೈಸೂರಿಗೆ ಬಹಳ ಅನುಕೂಲವಾಗುತ್ತದೆಯೆಂದೂ, ಈಗ ಈ ಭೂಲೋಕ ಸ್ವರ್ಗಲೋಕವಾಗಿಲ್ಲ, ಈಗ ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಈ ಭೂಲೋಕವೆಲ್ಲಾ ಸ್ವರ್ಗಲೋಕವಾಗುತ್ತದೆ ಎನ್ನುವಹಾಗೆ ಅವರು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಆದರೆ ಈ ದಿವಸ ಈ ನಮ್ಮ ಮೈಸೂರಿನ ಒಂದು ವಿಶೇಷ ವೈಶಿಷ್ಟ್ಯವೇನಿರುತ್ತದೆ ಎನ್ನುವುದರ ಬಗ್ಗೆ ಈ ಮೈಸೂರನ್ನು ಇತರ ಪ್ರಾಂತ್ಯಗಳಿಗೆ ಹೋಲಿಸಿ ನೋಡಿದರೆ ಈ ನಮ್ಮ ಮೈಸೂರಿನ ಜನತೆ ಹೆಚ್ಚು ಅಭಿವೃದ್ಧಿ ಹೊಂದಿದೆ. ನಮ್ಮ ಆಡಳಿತ ಒಂದು ಸುವ್ಯವಸ್ಥೆಯಿಂದ ನಡೆದುಕೊಂಡು ಬರುತ್ತಿದೆ. ಈ ವಿಷಯಗಳನ್ನು ನಾವು ಹೇಳುವುದು ಬೇಡ, ಅನೇಕ ದೊಡ್ಡ ದೊಡ್ಡ ಮಹನೀಯರುಗಳೇ ಹೇಳಿದ್ದಾರೆ.

ಒಂದು ವೇಳೆ ಇವೊತ್ತಿನ ದಿವಸ ಕರ್ಣಾಟಕ ಪ್ರಾಂತ್ಯ ಆಗಬೇಕು ಎನ್ನುವ ದೃಷ್ಟಿಯಿಂದ ನಮ್ಮನ್ನು ನಾವೇ ತೆಗಳಿಕೊಳ್ಳುವುದಾದರೆ ಅಂಥವರಿಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಹೊರಗಿನಿಂದ ಬಂದ ಎಲ್ಲಾ ದೊಡ್ಡ ಮನುಷ್ಯರೂ ಮೈಸೂರು ದೇಶದ ಆಡಳಿತ ಎಲ್ಲಾ ಪ್ರಾಂತಗಳಿಗಿಂತಲೂ ಸುವ್ಯವಸ್ಥಿತವಾಗಿ ನಡೆದುಕೊಂಡು ಬಂದಿದೆ, ಇಲ್ಲಿ ಎಲ್ಲಾ ವಿಚಾರಗಳಲ್ಲೂ ಆಗಿರುವ ಪ್ರಗತಿಯನ್ನು ಬೇರೆ ದೇಶಗಳಿಗೆ ಹೋಲಿಸಿ ನೋಡಿದರೆ ಮೈಸೂರು ಬಹಳ ಮುಂದುವರಿದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನಲ್ಲಿ ಏನು ವೈಶಿಷ್ಟ್ಯವಿದೆ ಎಂದು ಕೆಲವರು ಪ್ರಶ್ನೆಮಾಡಿದರು. ನಾನು ಹೇಳುತ್ತೇನೆ, ಮೈಸೂರಿನಲ್ಲಿ ಒಂದು ವೈಶಿಷ್ಟ್ಯವಿದೆ. ಅದೇನೆಂದರೆ ಭಾಷೆಗಳ ಮೇಲೆ ಪ್ರಾಂತಗಳು ಪುನರ್ವಿಂಗಡನೆಯಾಗಬೇಕು ಎಂದು ಹೇಳತಕ್ಕಂಥ ಕಾಲದಲ್ಲಿ ಬೊಂಬಾಯಿಯಲ್ಲಿರತಕ್ಕಂಥ ಜನರು, ಮಧರಾಸಿನಲ್ಲಿರತಕ್ಕಂಥ ಜನರು, ಅಥವಾ ಹೈದರಾಬಾದಿನಲ್ಲಿರತಕ್ಕಂಥ ಜನರು ನೂರಾರು ವರ್ಷಗಳಿಂದ ಇದ್ದಂಥ ಪ್ರಾಂತಗಳಲ್ಲಿರುವುದಕ್ಕೆ ತಯಾರಾಗಿಲ್ಲದೆ ಅಲ್ಲಿ ಬಹಳ ಕಷ್ಟಪಡುತ್ತಿದ್ದು ಮತ್ತು ಅಲ್ಲಿಯ ಸರ್ಕಾರದವರು ಅವರನ್ನು ಕಡೆಗಣ್ಣಿನಲ್ಲಿ ನೋಡುತ್ತಿರುವುದರಿಂದ ಅವರು ಬೇರೆ ಪ್ರಾಂತಕ್ಕೆ ಸೇರಬೇಕು ಎನ್ನುತ್ತಿದ್ದಾರೆ. ಮೈಸೂರಿನಲ್ಲಿ ಕನ್ನಡಿಗರೂ ಅಲ್ಲದೆ, ಬೇರೆ ಭಾಷೆ ಮಾತನಾಡತಕ್ಕ ಅಂದರೆ ತಮಿಳರೂ, ತೆಲುಗರೂ ಇದ್ದಾರೆ. ಅವರು ಮೈಸೂರು ದೇಶದಲ್ಲಿರುವುದಕ್ಕೆ ಕಷ್ಟವಾಗಿದೆ, ಈ ದೇಶವನ್ನು ಬಿಟ್ಟು ಹೋಗುತ್ತೇವೆ ಎಂದು ಹೇಳುತ್ತಾರೆಯೇ? ತೆಲುಗರು ಆಂಧ್ರಪ್ರಾಂತವಾಗಿದೆ, ಅಲ್ಲಿಗೆ ಹೋಗುತ್ತೇವೆ ಎಂದು ಹೇಳುತ್ತಾರೆಯೇ? ಇಲ್ಲ. ಅದೇ ವೈಶಿಷ್ಟ್ಯ ಇಲ್ಲಿರುವುದು. ಆ ವೈಶಿಷ್ಟ್ಯ ಇಲ್ಲದೇಹೋದ ಪಕ್ಷದಲ್ಲಿ ಆಂಧ್ರಪ್ರಾಂತರಚನೆಯಾದ ಕಾಲದಲ್ಲಿ ಇಲ್ಲಿ ತೆಲುಗು ಮಾತನಾಡತಕ್ಕ ಜನರು ಆಂಧ್ರಕ್ಕೆ ಹೋಗುತ್ತೇವೆ ಎಂದೆ ಹೇಳಬಹುದಾಗಿತ್ತು. ಮೈಸೂರು ಇದ್ದಹಾಗೆ ಇದ್ದಿದ್ದರೆ ಅವರು ಕನ್ನಡಿಗರಾಗಿಲ್ಲದೆ ಹೋದರೂ, ಮಾತೃಭಾಷೆ ತೆಲುಗು ಆಗಿದ್ದರೂ ಆಂಧ್ರರಿಗೆ ಬೇರೆ ರಾಜ್ಯ ಮಾಡಿದರೂ ಕೂಡ ಇಲ್ಲಿ ಅಂತಹ ವೈಶಿಷ್ಟ್ಯವಿರುವುದರಿಂದ ಆ ವೈಶಿಷ್ಟ್ಯಕ್ಕೆ ಮಾರುಹೋಗಿ ಇಲ್ಲಿಯೇ ಇರುತ್ತೇವೆಂದು ಹೇಳುವುದೇ ಇಲ್ಲಿಯ ವೈಶಿಷ್ಟ್ಯ. ಭಾಷೆಯ ಆಧಾರದ ಮೇಲೆ ಕನ್ನಡ ಭಾಗಗಳೆಲ್ಲಾ ಒಂದಾಗಿ ಸೇರುವುದಾದರೆ ಆಗ ಶ್ರೀ ಮುಲ್ಕ ಗೋವಿಂದ ರೆಡ್ಡಿಯವರು ಹೋಗುತ್ತಾರೆ. ಇಲ್ಲದಿದ್ದರೆ ಇಲ್ಲ. ನನಗೆ ತಿಳಿದಮಟ್ಟಿಗೆ ಇದುವರೆಗೆ ಅವರು ಬಿಟ್ಟುಹೋಗುತ್ತೇನೆಂದು ಹೇಳಿಲ್ಲ. ಸ್ವಾಮಿ. ನಮ್ಮ ಮೈಸೂರು ದೇಶದ ವೈಶಿಷ್ಟ್ಯ ಈ ರೀತಿಯಾಗಿದೆ. ನಮ್ಮ ಪ್ರಾಂತದಲ್ಲಿ ಇಲ್ಲದೇ ಇರುವ ಜನರನ್ನು ಸಹೋದರರೆಂದು ಪ್ರೀತಿಸಬೇಕು ಎಂದು ಕೆಲವರು ವಾದಮಾಡಿದ್ದಾರೆ. ಆದರೆ ಇಲ್ಲಿ ಇರುವ ಸಹೋದರರನ್ನು ಪ್ರೀತಿಸಿ ಇಲ್ಲಿರುವ ಹಾಗೆ ಮಾಡಬೇಕಾದರೆ ನಾವು ಯಾವ ರೀತಿ ಮುಂದುವರಿಯಬೇಕು, ಎಂದು ಹೇಳತಕ್ಕಂಥಾದ್ದು ತಮ್ಮ ಮುಂದಿರುವ ಪ್ರಶ್ನೆ. ಸ್ವಾಮಿ, ಶ್ರೀಮಾನ್ ಗೋಪಾಲಗೌಡರು ಮಾತನಾಡುತ್ತಾ ನಾವು ಕರ್ಣಾಟಕಪ್ರಾಂತ ಮಾಡತಕ್ಕ ಕಾಲದಲ್ಲಿ ತೆಲುಗರು ಮತ್ತು ತಮಿಳರು ಬೇರೆಯಾಗಿ ಹೋಗುವುದಕ್ಕೆ ಇಚ್ಛೆಪಟ್ಟರೆ ಬಿಟ್ಟುಹೋಗುವುದಕ್ಕೆ ಅವಕಾಶ ಕೊಡೋಣ, ಹೋದರೂಹೋಗಲಿ ಎನ್ನುವ ತರಹ ಹೇಳಿದರು. ಕರ್ಣಾಟಕ ಪ್ರಾಂತ ಬೇಡ ಎನ್ನತಕ್ಕಂಥ ಜನರು ಬಹಳ ಸಂಕುಚಿತ ಮನೋಭಾವದಿಂದ ಹಾಗೆ ಮಾತನಾಡುತ್ತಾರೆ ಎಂಬುದಾಗಿ ಅವರು ಬಹಳ ಸ್ವಾರ್ಥಪರತೆಯಿಂದ ಹೇಳಿದರು. ಇದು ಕೂಡದು. ಬಹಳ ದೂರದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡಬೇಕು ಎಂದು ಅವರೇ ವಾದಮಾಡಿದ್ದಾರೆ. ನೂರಾರು ವರ್ಷಗಳಿಂದ ಬಂದಿರತಕ್ಕಂಥ ನಮ್ಮ ಸ್ನೇಹಿತರು ನಮ್ಮನ್ನು ಬಿಟ್ಟು ಹೊರಟು ಹೋಗುತ್ತಾರೆಂದು ಹೇಳಿದರೆ ನಾವು ಸುಲಭವಾಗಿ ಒಪ್ಪಿಕೊಂಡುಬಿಡೋಣ. ಇದುವರೆಗೆ ನಮ್ಮ ಜೊತೆಯಲ್ಲಿ ಬೆಳೆದು ನಮ್ಮ ಕಷ್ಟಸುಖಗಳನ್ನು ಅನುಭವಿಸಿ ದೇಶವು ಒಂದು ಪ್ರಗತಿ ಮಟ್ಟವನ್ನು ಮುಟ್ಟುವುದಕ್ಕೆ ಮತ್ತು ಅಭಿವೃದ್ಧಿಗೆ ಬರುವುದಕ್ಕೆ ಭಾಗಿಗಳಾದ ಸಹೋದರರನ್ನು ಬಿಟ್ಟುಬಿಡಬೇಕೆಂಬ ಮನೋಭಾವವುಳ್ಳ ಜನರು ಕನ್ನಡ ಪ್ರಾಂತ್ಯ ಬೇಡ ಎಂದು ಹೇಳುವವರು ಸಂಕುಚಿತ ಮನೋಭಾವದಿಂದ ಕೂಡಿದ್ದಾರೆಂದು ಹೇಳಿದರೆ ನನಗೆ ಅರ್ಥವಾಗುವುದಿಲ್ಲ. ಮೈಸೂರು identity ಯನ್ನು ಕಳೆದುಕೊಂಡು ಬಿಡುತ್ತದೆ, ಈ ರೀತಿಯಾಗಿ ಭಾಷಾವಾರು ಪ್ರಾಂತಗಳು ಆಗಬಾರದು ಎಂದು ಹೇಳಿದರೆ, ಕೆಲವು ಮಾನ್ಯ ಸದಸ್ಯರು ಯಾವ ರೀತಿಯಾಗಿ identity ಕಳೆದುಕೊಳ್ಳುತ್ತದೆಯೆಂದು ಕೇಳಿದರು. ಭಾಷೆಗಳ ಆಧಾರದ ಮೇಲೆ ಪ್ರಾಂತಗಳು ರಚನೆಯಾಗಬೇಕಾದರೆ, ಒಂದು ಭಾಷೆ ಮಾತನಾಡತಕ್ಕಂಥ ಜನರು ಒಂದೇ ಪ್ರಾಂತದಲ್ಲಿರಬೇಕೆಂದು ಹೇಳುವುದಾದರೆ ನಮ್ಮ constitutionನಲ್ಲಿ ನಮೂದುಮಾಡಿರತಕ್ಕಂಥ 14 ಭಾಷೆಗಳಿಗೆ ತಕ್ಕ ಹಾಗೆ 14 ಪ್ರಾಂತಗಳು ಆಗಬೇಕಾಗಿವೆ. ಈಗ ಸದ್ಯದಲ್ಲಿ ಈ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಎಲ್ಲರೂ ಒಪ್ಪಬೇಕಾಗಿದೆ. ಅದನ್ನು ಒಪ್ಪುವಹಾಗಿದ್ದರೆ ಇಂಡಿಯಾ ದೇಶದಲ್ಲಿ ಅದೇ ರೀತಿ ಮಾಡುತ್ತಿದ್ದರು. ದೊಡ್ಡ ಪ್ರಾಂತವನ್ನು ಚಿಕ್ಕದಾಗಿ ಮಾಡಬೇಕು ಎಂದು ವಾದಮಾಡುತ್ತಿರು. ವಾಗ ಹಿಂದೀ ಮಾತನಾಡುವ ಜನರು ಎಲ್ಲರೂ ಒಂದೇ ಪ್ರಾಂತ್ಯದಲ್ಲಿರುವುದಕ್ಕೆ ಸಾಧ್ಯವೇ? ಒಂದೇ ಭಾಷೆ ಮಾತನಾಡತಕ್ಕಂಥ ಜನರು ಒಂದು ಪ್ರಾಂತ್ಯಕ್ಕಿಂತ ಹೆಚ್ಚಾಗಿ ಇದ್ದೇ ಇರಬಹುದು. ಅದಕ್ಕೆ ಏನೂ ಅಡ್ಡಿ ಇಲ್ಲ. ಈ ವರದಿಯಲ್ಲಿ ಕೊನೆಯದಾಗಿ ಒಂದು ಭೂಪಟವನ್ನು ಕೊಟ್ಟಿದ್ದಾರೆ. ಈ ಭೂಪಟವನ್ನು ನೋಡಿದರೆ ನಾವು ಕರ್ಣಾಟಕ ಪ್ರಾಂತವನ್ನು ಭಾಷೆಯ ಆಧಾರದ ಮೇಲೆ ರಚಿಸುವಾಗ ಮೈಸೂರು ಈಗ ಇರತಕ್ಕಂಥ ಅಸ್ತಿತ್ವವನ್ನು ಉಳಿಸಿಕೊಳ್ಳಬಹುದು ಮತ್ತು ಬೇರೆ

ಇನ್ನೊಂದು ಕರ್ಣಾಟಕ ಪ್ರಾಂತ ಆಗುವುದಕ್ಕೂ ಕೂಡ ಅವಕಾಶವಿದೆ ಎಂದು ಗೊತ್ತಾಗುತ್ತದೆ. ಹೈದರಾಬಾದಿನಲ್ಲಿ ಕರ್ಣಾಟಕಕ್ಕೆ ಸೇರಿದಂಥ ಡಿಸ್ಟ್ರಿಕ್ಟುಗಳೆಲ್ಲವೂ ಸೇರಿ ತುಂಗಭದ್ರಾ ನದಿಯಿಂದ ಆಚೆಗೆ ಇರುವ ಪ್ರದೇಶಗಳನ್ನು ಒಂದು ಕರ್ಣಾಟಕ ಪ್ರಾಂತವಾಗಿ ಮಾಡಬಹುದು. ಮತ್ತು ತುಂಗಭದ್ರಾನದಿಯಿಂದ ಈಚೆಗೆ ಇರುವ ಪ್ರದೇಶಗಳನ್ನು ಇನ್ನೊಂದು ಕರ್ಣಾಟಕ ಪ್ರಾಂತವನ್ನಾಗಿ ಬೇರೆಡನೆ ಮಾಡಬಹುದು. ಭೌಗೋಳಿಕವಾಗಿ ಕೆಲವು ಭಾಗಗಳು ಮೈಸೂರಿಗೆ ಸೇರುವುದಕ್ಕೆ ಅನುಕೂಲತೆ ಇದೆ. ಅವುಗಳನ್ನೂ ಕೂಡ ಬಣ್ಣಹಾಕಿ ತೋರಿಸಿದ್ದಾರೆ, ಅಂದರೆ, ದಕ್ಷಿಣ ಕನ್ನಡ, ಕೊಡಗು, ಕೊಳ್ಳೇಗಾಲ, ಈ ಪ್ರಾಂತಗಳು ಮೈಸೂರಿಗೆ ಭೌಗೋಳಿಕವಾಗಿ ಸೇರಬಹುದು. ಆಗ ಶ್ರೀಮಾನ್ ಕೆ. ಪಟ್ಟಾಭಿರಾಮರ್‌ರವರು "ನಮ್ಮ ದೇಶದ ವ್ಯಾಪಾರದ ಅಭಿವೃದ್ಧಿಗೆ ಧಕ್ಕೆಯಾಗಿದೆ, ತೊಂದರೆಯಾಗಿದೆ, ಆದ್ದರಿಂದ ಬಂದರು ಬರುವುದರಿಂದ ಮೈಸೂರಿಗೆ ಬೇಕಾದಷ್ಟು ಅನುಕೂಲವಾಗುತ್ತದೆ" ಎಂದು ವಾದಮಾಡಿರುವುದಕ್ಕೆ ಈ ಪ್ರದೇಶಗಳನ್ನು ಸೇರಿಸಿಕೊಳ್ಳುವುದರಿಂದ ಸಮರ್ಥನೆ ದೊರೆತಹಾಗಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಸೇರುವುದರಿಂದ ಮಂಗಳೂರು ಬಂದರೂ ಕೂಡ ನಮ್ಮ ರಾಜ್ಯಕ್ಕೆ ಸಿಕ್ಕುತ್ತದೆ. ಈ ರೀತಿಯಾಗಿ ಎರಡು ಕರ್ಣಾಟಕಗಳನ್ನು ಮಾಡುವುದಕ್ಕೆ ಅವಕಾಶವಿದೆಯೆಂದು ಶ್ರೀಮಾನ್ ವೀರಣ್ಣಗೌಡರು ಏನು ಸೂಚನೆ ಮಾಡಿದ್ದಾರೋ ಅದನ್ನು ನಾನು ಸ್ಪಷ್ಟೀಕರಿಸುತ್ತೇನೆ. ಕನ್ನಡ ಭಾಷೆ ಮಾತನಾಡುವವರು ಒಂದೇ ಪ್ರಾಂತದಲ್ಲಿರಬೇಕು, ಎರಡು ಪ್ರಾಂತಗಳು ಆಗಕೂಡದು. ಹಾಗೆ ಮಾಡಿದರೆ ಇದನ್ನು ಒಡೆದುಹಾಕಿದ ಹಾಗೆ ಆಗುತ್ತದೆ ಎಂದು ಹೇಳುವುದು ವಿಚಿತ್ರವಾದ ವಾದ. "ಶಾಂತಂ ಪಾಪಂ" ಎಂದು ಕಿವಿಮುಚ್ಚಿಕೊಳ್ಳಬೇಕು ಎಂದು ಯಾರೂ ತಿಳಿಯಬೇಕಾಗಿಲ್ಲ. ಇದು ಹೊಸದು ಅಲ್ಲ. ಕನ್ನಡ ಪ್ರಾಂತಗಳು ಆಗಬೇಕೆಂದು ಯಾವ ಯಾವ ಮುಖಂಡರು ಹೇಳುತ್ತಿದ್ದಾರೋ ಅವರೇ ಎರಡು ಪ್ರಾಂತಗಳಾದರೂ ಆಗಬಹುದೆಂದು ಹೇಳಿರುವುದನ್ನು ತಮ್ಮ ಮುಂದೆ ಉದಹರಿಸುತ್ತೇನೆ. "Replies and Memorandum to the Linguistic Provinces Commission by Representatives and Associations of Madras Karnataka ಎಂಬುದು ಒಂದು ಪುಸ್ತಕವಿದೆ. ಮದ್ರಾಸ್ ಕರ್ಣಾಟಕದಲ್ಲಿ ಒಂದು questionnaire ಕಳುಹಿಸಿ ಕರ್ಣಾಟಕ ಯಾವ ರೀತಿಯಾಗಬೇಕು ಎಂದು ಹತ್ತಾರು ಪ್ರಶ್ನೆಗಳನ್ನು ಕೇಳಿದ್ದಕ್ಕೆ ಉತ್ತರವಾಗಿ ಒಂದು ಕಡೆ ಶ್ರೀಮಾನ್ ಕೆ. ಆರ್. ಕಾರಂತ್‌ರವರು ಈ ರೀತಿ ಹೇಳಿದ್ದಾರೆ :

> "But with or without Mysore, United Karnataka must have a new province. Otherwise, its people cannot have any decent existence. With Mysore, Bangalore will be the capital and without Mysore Hubli or Dharwar. If the former, not much extra capital need be spent. With the latter also the smallest capital need be spent. Some portion of the cost should be met from the reserve funds and contributions of Madras and Bombay Governments. The rest by a loan. Anyway not much should or need be spent."

ಆ ಮೇಲೆ ಇನ್ನೊಂದು ವಾದ ಏನು ಇದೆ ಎಂದರೆ...

ಶ್ರೀ ಇಜಾರಿ ಸಿರಿಸಪ್ಪ (ಹರಪನಹಳ್ಳಿ).—It gives a wrong opinion. ಮೈಸೂರು ಸಂಸ್ಥಾನದಲ್ಲಿರುವವರು ಒಪ್ಪದೆ ಬೇರೆ ಸರ್ಕಾರದಲ್ಲಿರುವವರು ಬರುವುದಕ್ಕೆ ಸಾಧ್ಯವಿಲ್ಲ, ಮೈಸೂರು ಮುಂದೆ ಬಂದಾಗ ಸೇರಿಸಿಕೊಳ್ಳೋಣ ಎಂದು ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅವರು ಹತ್ತಾರು ಪ್ರಶ್ನೆಗಳನ್ನು ಕೇಳಿದ್ದಾರೆ. ಒಂದು ವೇಳೆ ಮೈಸೂರು ಸೇರದೆ ಹೋದರೆ, ಹೈದರಾಬಾದ್ ಸೇರದೆ ಹೋದರೆ ಹೀಗಾದರೂ ಮಾಡೋಣ ಎಂದು ಹೇಳಿದ್ದಾರೆ. ನಾನು ಬೇರೆ ತರಹ quote ಮಾಡಿಲ್ಲ. ಶ್ರೀಮಾನ್ ಕಾರಂತ್‌ರವರು ಏನು ಹೇಳಿದ್ದಾರೋ ಅದನ್ನೇ ತಮ್ಮ ಮುಂದೆ ಇಟ್ಟಿದ್ದೇನೆ. ನಾವು ಎರಡು ಕರ್ಣಾಟಕ ಪ್ರಾಂತಗಳನ್ನು ಮಾಡುವುದಕ್ಕೆ ಹೋದರೆ ಚಿಕ್ಕದಾಗುತ್ತದೆ. ಮತ್ತು ಆಡಳಿತ ದೃಷ್ಟಿಯಿಂದ ನೋಡಿದರೆ ಬಹಳ ತೊಂದರೆಯಾಗುತ್ತದೆ. ಚಿಕ್ಕದಾಗಿರಬಾರದು, ವಿಶಾಲವಾಗಿರಬೇಕು. ಸಾವಿರಮೈಲಿ ಉದ್ದವಿರಬೇಕು, ಎಂಬುದಾಗಿ ಹೇಳಿದರು. ಅವರೇ ಒಂದು ಮಾತನ್ನು ಹೀಗೆ ಹೇಳಿದ್ದಾರೆ. "Close and intensive development in a smaller province will mean more progress."

Sri L. C. Pais, B.A. B.L., M.L.A., Ex-Parliamentary Secretary, Local Administration, Government of Madras and Elected Chairman of the Mangalore Municipality, ಅವರು ಇದೇ ತರಹ ಪ್ರಶ್ನೆಗೆ ಹೀಗೆ ಉತ್ತರವನ್ನು ಕೊಟ್ಟಿದ್ದಾರೆ :

> "Even if the States do not join, the creation of the Province cannot be put off. The States may come in later. ...The cost of the creation of a new capital could be met from out of the capital allocations that are bound to be made to the new Province by the parent States."

ಶ್ರೀ ಪಾಂಗಾಳ್ ಲಕ್ಷ್ಮೀನಾರಾಯಣ ನಾಯಕ್, ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ, ಸೌತ್ ಕೆನರಾರವರು ಹೀಗೆ ಹೇಳಿದ್ದಾರೆ :

> "As far as we know the Revenue calculated on the basis of 1945–46 basis comes to Rs. 10·15 crores and the expenses to Rs. 8·7 crores in the British Karnatak alone, leaving a surplus of 1·8 crores. The only two remaining States are Mysore and Hyderabad. Even if these two States are not willing to join the new province, the revenue, population and size of the remaining portion still warrant the creation of a new province."

ಆದ್ದರಿಂದ, ಎರಡು ಕರ್ಣಾಟಕವಾಗಬೇಕೆಂದು ಹೇಳತಕ್ಕುದು ವಿಚಿತ್ರವೂ ಅಲ್ಲ; ಹೊಸದೂ ಅಲ್ಲ. ಹಿಂದಿನಿಂದಲೂ, ಇದು ಸಾಧ್ಯವಿಲ್ಲದೇ ಹೋದರೆ,

(ಶ್ರೀ ಡಿ. ದೇವರಾಜ ಅರಸ್.)

ಅಥವಾ ಒಂದು ಪ್ರಾಂತ್ಯ ಮಾಡಿಕೊಳ್ಳಬೇಕೆಂದು ಹೇಳಿ ಕರ್ಣಾಟಕ ಪ್ರಾಂತ ಮುಖಂಡರನೇಕರು ಆ ವಾದವನ್ನೇ ಎತ್ತಿ ಹೇಳಿದ್ದಾರೆ.

4 P.M.

ಒಬ್ಬ ಸದಸ್ಯರು.—ಆಗದೇಹೋದರೆ ತಾನೆ!

ಶ್ರೀ ಡಿ. ದೇವರಾಜ ಅರಸ್.—ಹೌದು, ಮತ್ತು ಅದಕ್ಕೆ ಸಮರ್ಥನೆಯಾಗಿ ಅಂಕಿ ಅಂಶಗಳನ್ನೂ ಬೇಕಾದರೆ ಕೊಡುತ್ತೇನೆ.

Sri J. MOHAMED IMAM (Jagalur).—On a point of clarification. United Karnataka was one of the issues included in the Congress Manifesto last time. I will show you if you want.

ಶ್ರೀ ಡಿ. ದೇವರಾಜ ಅರಸ್.—ಸರಿ, ಸ್ವಾಮಿ; ಮೈಸೂರಿನಲ್ಲಿರತಕ್ಕ ಜನರೆಲ್ಲರೂ ಕೂಡ ಅವರನ್ನು ಸೇರಿಸಿಕೊಳ್ಳೋಣ ಎಂದು ಅಪೇಕ್ಷೆಪಟ್ಟರೆ ಸೇರೋಣ. ಈ ಮಾನ್ಯ ಸಭೆಗೆ ಗೊತ್ತಿರುವಂತೆ, ಅದು ಸಾಧುವಲ್ಲ, ಅದರಿಂದ ನಮಗೆ ತೊಂದರೆಯಾದೀತು, ಅಲ್ಲದೆ, ನಮ್ಮ ಸ್ನೇಹಿತರಾದ ತೆಲುಗರು ಬೇರೆ ಪ್ರಾಂತ್ಯಕ್ಕೆ ಹೋಗುತ್ತೇವೆಂದು ಹೇಳಿ ಷುರು ಮಾಡಿದರೆ ಬಹಳ ಕಷ್ಟವಾಗುತ್ತದೆ, ಎಂದು ಅನೇಕರು ಹೇಳಿದ್ದಾರೆ. ಆದ್ದರಿಂದ ಬೇರೆ ಪ್ರಾಂತ್ಯ ಮಾಡಲೆಂದು ಹೇಳುವುದು ವಿಚಿತ್ರವಲ್ಲವೆಂದು ಹೇಳುತ್ತೇನೆ. ವಿಸ್ತೀರ್ಣ ತೆಗೆದುಕೊಂಡರೂ, ಹಾಲಿ ನಮ್ಮಲ್ಲಿರುವುದು 32,000 ಚದರ ಮೈಲಿ, ಇದರ ಜೊತೆಗೆ ಹೊಸದಾಗಿ ಬರುವ ಭಾಗವನ್ನು ತೆಗೆದುಕೊಂಡರೆ ಇನ್ನೂ 42,000 ಚದರ ಮೈಲಿ ಸೇರಿಸಿದಂತಾಗುತ್ತದೆ. ಇದಿಷ್ಟು ಒಟ್ಟಿಗೆ ಇರುವ ಬದಲು, ಈಗಿರುವ 32,000 ಚದರ ಮೈಲಿಗಳ ಜೊತೆಗೆ ಮಂಗಳೂರು, ದಕ್ಷಿಣ ಕನ್ನಡ, ಕೊಡಗು, ಕೊಳ್ಳೇಗಾಲ-ಇವುಗಳನ್ನು ಮಾತ್ರ ಸೇರಿಸುವುದಾದರೆ ಇನ್ನು 4-5 ಸಾವಿರ ಚದರ ಮೈಲಿಗಳು ಸೇರಿದಂತಾಗುತ್ತದೆ. ಅಲ್ಲಿಗೆ ಇನ್ನೊಂದು ಪ್ರಾಂತ್ಯದಲ್ಲೂ ಹೆಚ್ಚು ಕಡಮೆ 38,000 ಚದರ ಮೈಲಿಗಳು ಉಳಿಯುತ್ತವೆ. ಜನಸಂದಣಿ ತೆಗೆದುಕೊಂಡರೂ ಇಲ್ಲಿಯೂ ಒಂದು ಕೋಟಿ ಜನ ಇರುತ್ತಾರೆ; ಅಲ್ಲಿಯೂ 90 ಲಕ್ಷ ಜನಸಂದಣಿಯಿದ್ದು ಸಾಕಷ್ಟಾಗುತ್ತದೆ. ಈ ರೀತಿಯಾಗಿ ಕರ್ಣಾಟಕವೆಂಬ ಹೊಸ ಪ್ರಾಂತ್ಯ ನಿರ್ಮಾಣ ಮಾಡುವುದರಿಂದ ತಪ್ಪೇನೂ ಆಗುವುದಿಲ್ಲ. ಅದು ಸಾಧುವಾದ ಮಾರ್ಗವೆಂದು ನಾನು ಭಾವಿಸುತ್ತೇನೆ. ಶ್ರೀಮಾನ್ ಇಮಾಂರವರು 'ನೀವು ಒಪ್ಪದೇ ಹೋದರೆ' ಎಂದು ಒಂದು ಅನುಮಾನ ಹೇಳಿದರು. ಈಗ, ಒಪ್ಪುವುದಿಲ್ಲವೆಂಬುದು ತಮಗೆಲ್ಲಾ ಕಣ್ಣೆದುರಿಗೆ ಕಾಣುತ್ತಲೇ ಇದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾರು ಹೇಳಿದ್ದಾರೆ?

ಶ್ರೀ ಡಿ. ದೇವರಾಜ ಅರಸ್.—ಅದು ಸ್ವಯಂ ವಿದಿತವಾದ ಮಾತು. ಸುಮ್ಮನೆ ಎಲ್ಲರೂ ಒಪ್ಪುತ್ತಾರೆಂದು' ಹೇಳಿಕೊಂಡರೆ ಏನಾದೀತು? 'ಬಹುಭಾಗದ ಜನರು ಒಪ್ಪುತ್ತಾರೆ, ಕೆಲವರು ಮಾತ್ರ ಒಪ್ಪುತ್ತಿಲ್ಲ' ಎಂದು ಅನೇಕರು ಹೇಳುತ್ತಿದ್ದಾರೆ. 'ಬಹುಭಾಗ ಜನ ಒಪ್ಪುತ್ತಿಲ್ಲ, ಕೆಲವರು ಮಾತ್ರ ಒಪ್ಪುತ್ತಾರೆ' ಎಂದು ನಾನು ಹೇಳುತ್ತೇನೆ. ಈ ಎರಡು ವಾದಗಳನ್ನೂ ತೀರ್ಮಾನಮಾಡುವವರು ಯಾರು? ಇದಕ್ಕೆ ಸಂಬಂಧಪಟ್ಟ ಜನರು ತೀರ್ಮಾನಿಸಬೇಕು ಅಷ್ಟೆ; ಹೈಪವರ್ ಕಮಿಷನ್ನಿನವರಲ್ಲ. ಫ್ಯಾಕ್ಟ್ ಫೈಂಡಿಂಗ್ ಕಮಿಟಿಯಲ್ಲ. ಹತ್ತು ಜನರು ಹೋಗಿ 'ಬೇಕು' ಎಂದು ಹೇಳುವುದು, ಇನ್ನೂ ಹತ್ತು ಜನರು ಹೋಗಿ 'ಬೇಡ' ಎಂದು ಹೇಳುವುದು ಸರಿಯಲ್ಲ. ಯಾರಿಗೆ ಇದು ಅನ್ಯಾಯಸುತ್ತದೆಯೋ, ಯಾರಿಗೆ ತೊಂದರೆಯಾಗುತ್ತದೆಯೋ ಅವರನ್ನೇ ಕೇಳೋಣ. ರೆಫೆರಂಡಂ ಇಲ್ಲದಿದ್ದರೆ, ಈ Issue ಮೇಲೆ ನಾಳೆ ಚುನಾವಣೆಗೆ ನಿಲ್ಲೋಣ.

Sri J. MOHAMED IMAM.—On a point of clarification.

ಹಿಂದೆಲ್ಲಾ ಮೊದಲಿನಿಂದಲೂ ಕಾಂಗ್ರೆಸ್ಸಿನವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಅಖಂಡ ಕರ್ಣಾಟಕ ಪ್ರಶ್ನೆಯನ್ನು ಸೇರಿಸಿಕೊಂಡೇ ಬಂದಿದ್ದಾರೆ. 1946ನೆಯ ಇಸವಿಯಿಂದಲೂ ಅದನ್ನು ಕಾಣಬಹುದು.

ಶ್ರೀ ಡಿ. ದೇವರಾಜ ಅರಸ್.—ಇನ್ನೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಮಾತನಾಡಬೇಕಾಯಿತು. ಕರ್ಣಾಟಕ ವಾದಿಗಳಾದಂಥ ಮಾನ್ಯ ಸ್ನೇಹಿತರನೇಕರು ಈ ವಿಚಾರವನ್ನು ನನ್ನಲ್ಲಿ ಪ್ರಸ್ತಾಪಮಾಡಿದ್ದಾರೆ. ನಾನೂ ಕೂಡ ಅವರೊಡನೆ ಚರ್ಚೆಮಾಡಿದ್ದೇನೆ. ಇಂಥ ಒಂದು ಬಿಕ್ಕಟ್ಟು ದೇಶದಲ್ಲಿರುವಾಗ ಯಾವ ಜನರಿಗೆ ಒಳ್ಳೆಯದಾಗುತ್ತದೆಂದು ಹೇಳುತ್ತೀವೆಯೋ ಅವರನ್ನೇ ನೇರವಾಗಿ ಕೇಳೋಣ ಎಂದು ನಾನು ಸೂಚನೆ ಕೊಟ್ಟಾಗಲೆಲ್ಲಾ ಅವರು, ಬಿಡಿಬಿಡಿ, ಅದು ಮಾತ್ರ ಕೂಡದು ಎಂದು ಹೇಳುತ್ತಲಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಯಾರು ಹೇಳಿದರು?

ಶ್ರೀ ಡಿ. ದೇವರಾಜ ಅರಸ್.—ನೀವೇ ಸಾಕ್ಷಿ. ನೀವೆ ಈಗ ಒಪ್ಪಿಕೊಳ್ಳುತ್ತಿಲ್ಲವಲ್ಲ. ಯಾವಾಗಲೂ ಮೈಸೂರು ದೇಶದಲ್ಲಿ ಚುನಾವಣೆ ನಡೆದಾಗ ಕರ್ಣಾಟಕ ಪ್ರಾಂತ್ಯ ಮಾಡುತ್ತೇವೆ ಅಥವಾ ಮೈಸೂರನ್ನೂ ಬಾಕಿ ಕನ್ನಡ ಪ್ರಾಂತ್ಯಗಳನ್ನೂ ಸೇರಿಸಿ ಈ ಪ್ರಾಂತ್ಯವನ್ನು ದ್ವಿಗುಣ ಮಾಡುತ್ತೇವೆಂದು ಹೇಳಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—Include ಆಗಿದೆ.

ಶ್ರೀ ಡಿ. ದೇವರಾಜ ಅರಸ್.—Include ಆಗಿದ್ದರೂ ಆಗಿರಬಹುದು. ಆದರೆ ನಮ್ಮ ನಮ್ಮ constituency ಯೊಳಗೆ 'ಹೇಳಿದ್ದೇವೆಂದು' ಹೇಳಲಿ, ನೋಡೋಣ. ವಾಸ್ತವಾಂಶ ಹೀಗಿರುವಾಗ, ಬಹುಭಾಗದ ಜನ ಒಪ್ಪದಿರುವಾಗ........

MEMBERS.—Question Question !!!

ಶ್ರೀ ಡಿ. ದೇವರಾಜ ಅರಸ್.—ನಾನು challenge ಮಾಡುತ್ತೇನೆ. ಯಾರು ಮುಂದೆ ಬಂದು ಹೇಳುತ್ತಾರೆ ನೋಡೋಣ!

Sri M. LINGANNA (Nanjangud).—I rise to a point of privilege, Sir. ಮಾನ್ಯ ಅರಸ್ ರವರು ಅಷ್ಟು ಬಿರುಸಾಗಿ ಮಾತನಾಡುವುದು ಪಾರ್ಲಿಮೆಂಟರಿ ಸಂಪ್ರದಾಯಕ್ಕನುಗುಣವಾಗಿಲ್ಲ. There are rulings and precedents in the Parliment to the effect that even gestures or challenges have been construed as threats and it would be unparliamentary; and of course we can reply in a jocular manner. To say "I will give a challenge" to the member showing a fist like this is unparlimentary.

ಶ್ರೀ ಡಿ. ದೇವರಾಜೇ ಅರಸ್.—ಹೌದು, ಶ್ರೀ ಲಿಂಗಣ್ಣನವರ ಹಾಗೆ 'ಪಿಸ್ ಪಿಸ್' ಎಂದು ಮಾತನಾಡುವುದಕ್ಕೆ ನನಗೆ ಬರುವುದಿಲ್ಲ. ಯಾವಾಗಲೂ ಗಟ್ಟಿ

ಯಾಗಿಯೇ ಮಾತನಾಡುವುದು ನಮ್ಮ ಸ್ವಭಾವ. ಆದರೆ, ಅವರು ನಮ್ಮ ಹಳ್ಳಿಯ ಜನರ ಮನಃಪರಿವರ್ತನೆಯಾಗಬೇಕೆಂದು ಹೇಳಿದರು. ಹಳ್ಳಿಯ ಜನರ ಮನಃಪರಿವರ್ತನೆಯಿಂದ ಇದು ಆಗುವುದಾದರೆ ಮಾಡಬಹುದು. ಈಗಂತೂ ಮನಃಪರಿವರ್ತನೆಯಾಗಿಲ್ಲ. ಮಹಾತ್ಮಾಗಾಂಧಿಯವರೇ ಭಾಷಾವಾರು ಪ್ರಾಂತ್ಯವಾಗಬೇಕೆಂದು ಹೇಳುತ್ತಿದ್ದರು, ಅವರ ತತ್ವವನ್ನೇ ಇವರು ಪ್ರತಿಪಾದಿಸುತ್ತಿಲ್ಲ, ಅದಕ್ಕೆ ವಿರೋಧವಾಗಿ ಕಾಂಗ್ರೆಸ್ಸಿನವರು ಹೋಗುತ್ತಿದ್ದಾರೆ ಎಂದು ಕೆಲವರು ಹೇಳಿದರು. ಭಾಷಾವಾರು ಪ್ರಾಂತ್ಯವೇ ಆಗಲಿ ಯಾವುದೇ ಆಗಲಿ ಜನರು ಒಪ್ಪದೆ ಇದ್ದಾಗ ಮಾಡಬೇಡಿ ಎಂದು ಮಹಾತ್ಮಾಗಾಂಧಿಯವರೇ ಹೇಳಿದ್ದಾರೆ. ಅವರು, ಯಾವುದನ್ನೂ ಅಹಿಂಸೆಯಿಂದಲೇ ಸಾಧನೆಮಾಡಬೇಕೆಂದು ಕೂಡ ಬೋಧನೆಮಾಡಿದ್ದಾರೆ. ಹೀಗಿರುವಾಗ, ಜನರು ಒಪ್ಪಲಿ ಬಿಡಲಿ ಒಪ್ಪಿದ್ದಾರೆಂದು ಹೇಳಿಕೊಂಡು ಮಾಡಬೇಕೆಂದು ಅವರು ಎಂದೂ ಹೇಳಲಿಲ್ಲ. ಮೈಸೂರು ದೇಶದಲ್ಲಿ, ಕಾರಣ ಏನೇ ಇರಲಿ, ಒಂದು ಭಾಗದ ಜನಕ್ಕೆ ಒಂದು ಶಂಕೆ, ಒಂದು ಅನುಮಾನ, ಇದರಿಂದ ತೊಂದರೆಯಾಗುತ್ತದೆ ಎಂಬ ಮನೋಭಾವ ಇರತಕ್ಕ ಕಾಲದಲ್ಲಿ ಏನಾದರೂ ಆಗಲಿ ಎಲ್ಲರೂ ಒಪ್ಪಾಗಬೇಕು ಎಂದು ಅವರ ಮೇಲೆ impose ಮಾಡಬೇಕೆಂದು ಹೇಳುವ ಮನೋಭಾವ ಸರಿಯಲ್ಲ. ಜನಗಳ ಮನಸ್ಸಿನಲ್ಲಿರುವ ಈ ಶಂಕೆ ನಿವಾರಣೆಯಾದಾಗ ಮಾತ್ರ ಎಲ್ಲಾ ಪ್ರಾಂತ್ಯಗಳನ್ನೂ ಒಂದುಗೂಡಿಸುವುದಕ್ಕೆ ಸಾಧ್ಯವೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ. ಅವರ ಮನೋಭಿಪ್ರಾಯವನ್ನೂ ಅರಿತುಕೊಳ್ಳಬೇಕು. ಅದು ಬಿಟ್ಟು ಏನೇ ಆಗಲಿ, ಕೋಲಾರ ಡಿಸ್ಟ್ರಿಕ್ಟೇ ಹೋಗಲಿ ಬೆಂಗಳೂರು ಡಿಸ್ಟ್ರಿಕ್ಟು, ತುಮಕೂರು ಡಿಸ್ಟ್ರಿಕ್ಟಿನ ಕೆಲವು ಭಾಗ ಇಲ್ಲದಿದ್ದರೂ ಪರವಾಗಿಲ್ಲ, ನಾವೆಲ್ಲ ಒಂದಾಗೋಣವೆಂದರೆ ನನಗೆ ಇನ್ನೂ ಅನುಮಾನ ಜಾಸ್ತಿಯಾಗುತ್ತದೆ.

ಒಬ್ಬ ಸದಸ್ಯರು.—ಯಾರೂ ಹಾಗೆ ಹೇಳಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಭಾಷೆಯ ಮೇಲೆ ಆಗಬೇಕೆಂದು ಹೇಳಿದರೆ ಆಗ ಹಾಗೆಯೇ ಆಗುತ್ತದೆ. ಭಾಷೆಯ ಪ್ರಕಾರ ಹೋಗುವುದಾದರೆ ತೆಲುಗು ಮಾತನಾಡುವವರಿಗೂ ಬೇರೆಯಾಗುವುದಕ್ಕೆ ಅವಕಾಶಕೊಟ್ಟು ಕೊಡಬೇಕಾಗುತ್ತದೆ. ಆ ಜನಗಳು ಹೋಗುವುದಕ್ಕೆ ಇಷ್ಟಪಟ್ಟರೆ ಬಿಟ್ಟುಬಿಡೋಣ ಎಂದು ಹೇಳುವುದರಲ್ಲಿ ಅರ್ಥವೇನು ?

ಅಧ್ಯಕ್ಷರು.—ಯಾರೂ ಹೇಳಲಿಲ್ಲವೆಂದು ಹೇಳುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಭಾಷೆಯ ಆಧಾರದ ಮೇಲೆ ಏಕೀಕರಣವಾಗಬೇಕೆಂದು ಹೇಳಿದರೆ, ಈ ಸಮಸ್ಯೆ ಉದ್ಭವಿಸಿಯೇ ಉದ್ಭವಿಸುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ನಾವೆಲ್ಲಾ ಹೇಳಿದ್ದೇವೆ, ಒಂದು ಭಾಷೆಯ ಆಧಾರದ ಮೇಲೆ ರಾಜ್ಯಕಟ್ಟಬೇಕೆಂದು ಹೇಳುವಾಗ ನಾವು ಇಲ್ಲಿರತಕ್ಕುದು ನ್ಯಾಯವೂ ಅಲ್ಲ, ನಾವು ಇರುವುದೂ ಇಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಈ ರೀತಿಯ ಮಾತು ಹೊರಗಡೆಯೂ ಬಂದಿದೆ. ಆಂಧ್ರ ಬಿಲ್ಲನ್ನು ಚರ್ಚೆ ಮಾಡುವಾಗ ಕೂಡ ಇದನ್ನು ಹೇಳಿದ್ದಾರೆ. ಇದರಿಂದ ತೊಂದರೆಯಾಗುತ್ತದೆಂದು ನನ್ನ ಭಾವನೆ.

ಕೊನೆಯದಾಗಿ ಹೇಳುವುದಾದರೆ, ಭಾಷೆಯ ಆಧಾರದ ಮೇಲೆ ಪ್ರಾಂತ್ಯವನ್ನು ಮಾಡುವುದರಿಂದ ಮುಂದೇನೋ ಒಳ್ಳೆಯದಾಗುತ್ತದೆಂದು ಹೇಳಿದರು. ಬೇರೆ ಬೇರೆ ಭಾಷೆಯನ್ನಾಡತಕ್ಕ ಅನೇಕ ಜನರಿದ್ದು, ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಮೈಸೂರು ದೇಶ ಒಂದು Composite State ಆಗಿದೆ. ಹೀಗೆ Composite State ಆಗಿರುವುದರಿಂದ ನಮಗೆ ಆಗಿರತಕ್ಕ ತೊಂದರೆಯೇನು ? Composite State ಹೋಗಿ ಏಕ ಭಾಷೆಯ-ದೇಶವಾದರೆ ಬರತಕ್ಕ ಒಳ್ಳೆಯದೇನು ? ಈಗ ನಮ್ಮ ಮುಂದೆ ದೊಡ್ಡ ವಿಧಾನ ಸೌಧ ಕಟ್ಟುತ್ತಿದ್ದೇವೆ. ಹೀಗೆಯೇ ಇನ್ನೂ ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ಕೈಕೊಂಡು ನಡೆಸುತ್ತಿದ್ದೇವೆ. ಎಲ್ಲೆಲ್ಲಿ ಹೋಗಿ ನೋಡಲಿ ತಮಿಳರು ತೆಲುಗರೇ ಆ ಕೆಲಸ ಕಾರ್ಯಗಳಲ್ಲಿ ಹೆಚ್ಚುಭಾಗ ಮಾಡುತ್ತಿರುತ್ತಾರೆ. ಇಂಥ ಸಮಯದಲ್ಲಿ ಪ್ರಾಂತ್ಯಗಳನ್ನು ಭಾಷೆಯ ಮೇಲೆ ಕಟ್ಟಬೇಕೆಂದು ಹೇಳಿ ಅವರೆಲ್ಲರೂ ಹೊರಟು ಹೋದರೆ ಹೋಗಲಿ ಎಂದು ಹೇಳುವುದು ನನಗರ್ಥವಾಗುವುದಿಲ್ಲ. ಹಿಂದಿನಿಂದ ಬಂದ ಸಹೋದರರನ್ನು ಉಳಿಸಿಕೊಳ್ಳುವುದಕ್ಕಾದರೂ ಇದ್ದದ್ದು ಹಾಗೆಯೇ ಇರಲಿ. ಒಂದು ವೇಳೆ ಇರತಕ್ಕ ಪ್ರಾಂತ್ಯವನ್ನು ಸ್ವಲ್ಪ ಜಾಸ್ತಿ ಮಾಡುವುದು ಅಖಿಲ ಭಾರತ ದೃಷ್ಟಿಯಿಂದ ಸರಿಯೆಂದು ತೋರುವುದಾದರೆ ಆ ರೀತಿ ಪ್ರಾಂತ್ಯಗಳನ್ನು ಸೇರಿಸುವುದರಿಂದ ಅಭ್ಯಂತರವೇನಿಲ್ಲ. ಅದೇ ಪ್ರಕಾರ ಹಿಂದೆ ಕಾನ್‌ಸ್ಟಿಟ್ಯುಯಂಟ್ ಅಸೆಂಬ್ಲಿಯಲ್ಲಿ ಒಂದು ನಿರ್ಣಯವನ್ನು ಕೂಡ ಮಾಡಿತ್ತು. ಆದ್ದರಿಂದ ಆ ರೀತಿ ಮಾಡುವುದು ಆ ನಿರ್ಣಯಕ್ಕೂ ಅನುಗುಣವಾಗಿರುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಈ ಸಭೆಯ ಮುಂದಿರತಕ್ಕ ಕರ್ಣಾಟಕ ಪ್ರಾಂತ್ಯರಚನೆ ಅಥವಾ State Re-organisation ಸಂಬಂಧವಾಗಿ ಇರತಕ್ಕ ಅಂಕಿ ಅಂಶಗಳ ಮೇಲೆ ಮಾತನಾಡುವುದಕ್ಕೆ ಮುಂಚೆ ಒಂದು ಗಮನಾರ್ಹವಾದ ವಿಷಯವನ್ನು ನಾನು ಸೂಚಿಸಬೇಕಾಗಿದೆ. ನಾವು ಈ ಸಂದರ್ಭದಲ್ಲಿ ಮೈಸೂರಿಗೆ ಸಂಬಂಧಪಟ್ಟಂತೆ ಮಾತ್ರವಾಗಿ ಚರ್ಚೆ ನಡೆಸಿದರೆ ನಮ್ಮ ಚರ್ಚೆ ಅಷ್ಟು ವಿಶಾಲ ಭಾವನೆಯಿಂದ ಕೂಡಿದ ಚರ್ಚೆಯಾಗಲಾರದು. ಆದ್ದರಿಂದ ಮೈಸೂರಿನ ಸೌಖ್ಯವನ್ನು ಮಾತ್ರ ನಾವು ಪರಿಗಣಿಸುವುದು ಒಳ್ಳೆಯದಲ್ಲ. ಕೆಲವರು ಹೇಳಿದರು, ಹಾಗಿದ್ದರೆ ಪ್ಲೆಬಿಸೈಟ್ ತೆಗೆದುಕೊಳ್ಳಿ ; ಭಾಷಾವಾರು ರೀತ್ಯಾ ಪ್ರಾಂತ್ಯ ರಚನೆಯಾಗಬೇಕೇ ಎಂಬುದನ್ನು ಆ ಮೂಲಕ ನಿರ್ಧರಿಸಿ ಎಂದು. ಆದರೆ, ಆ ರೀತಿಯಲ್ಲಿ ಮೈಸೂರಿನಲ್ಲಿ ಮಾತ್ರ ಪ್ಲೆಬಿಸೈಟ್ ತೆಗೆದುಕೊಳ್ಳಬೇಕೇ ಅಥವಾ ಕರ್ಣಾಟಕ ಪ್ರಾಂತ್ಯಕ್ಕೆ ಸೇರಿದ ಎಲ್ಲ ಪ್ರಾಂತ್ಯದಲ್ಲೂ ಪ್ಲೆಬಿಸೈಟ್ ತೆಗೆದುಕೊಳ್ಳಬೇಕೇ ಎಂಬುದು ಪಾರ್ಲಿಮೆಂಟಿಗೆ ಸಂಬಂಧಪಟ್ಟ ವಿಷಯ. ಪಾರ್ಲಿಮೆಂಟಿನವರು, ನಿಜವಾಗಿಯೂ ಆ ದಿಕ್ಕಿನಲ್ಲಿ ಯೋಚನೆ ಮಾಡುವುದಾದರೆ, ಅಥವಾ ಕೇಂದ್ರ ಸರ್ಕಾರದವರು ಪ್ಲೆಬಿಸೈಟ್ ತೆಗೆದುಕೊಳ್ಳುವುದರಿಂದ ಈ ಪ್ರಶ್ನೆಯನ್ನು ಬಗೆಹರಿಸಬೇಕೆಂದು ಇಂಡಿಯಾ ದೇಶದ ಪ್ರಜೆಗಳ ಹಿತದೃಷ್ಟಿಯಿಂದ ಯೋಚನೆ ಮಾಡುವುದಾದರೆ, ಆಗ್ಗೆ ಕನ್ನಡ ಪ್ರಾಂತ್ಯದ ಎಲ್ಲ ಭಾಗದಲ್ಲೂ ಪ್ಲೆಬಿಸೈಟ್ ತೆಗೆದುಕೊಂಡರೆ ಈ ವಿಷಯದಲ್ಲಿ ಒಂದು ಮೆಜಾರಿಟಿ ಬರುತ್ತದೆಂದು ನನ್ನ ಭಾವನೆ. ಹಾಗಿಲ್ಲದೆ ಮೈಸೂರಿನಲ್ಲಿ ಮಾತ್ರ ಪ್ಲೆಬಿಸೈಟ್ ತೆಗೆದುಕೊಳ್ಳಬೇಕೆನ್ನುವುದು ನ್ಯಾಯವಲ್ಲವೆಂದು ನಾನು ಒತ್ತಿ ಹೇಳುತ್ತೇನೆ.

ಇಷ್ಟು ಹೇಳಿದ ಮೇಲೆ, ನಾನು ಭಾಷೆಗೆ ಪ್ರಾಧಾನ್ಯ ಕೊಡುವ ವಿಷಯದಲ್ಲಿ ಒಂದು ಮಾತ್ರ ಹೇಳುತ್ತೇನೆ. ಭಾಷೆಯ ಆಧಾರದ ಮೇಲೆ ಭಾಷಾವಾರು ಪ್ರಾಂತ್ಯವಾಗುವುದು ಬೇಡ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಈ ಪ್ರಶ್ನೆಯನ್ನು ಸಾಮಾಜಿಕ, ರಾಜಕೀಯ, ಆರ್ಥಿಕದೃಷ್ಟಿಯಿಂದ ಮಾಡಬೇಕೆಂದು

(ಶ್ರೀ ಯು. ಎಂ. ಮಾದಪ್ಪ.)

ಹೇಳಿದರೂ ಭಾಷೆಗೆ ಪ್ರಾಧಾನ್ಯ ಇರಲೇಬೇಕು. ಅಂದರೆ ನಾನಾದರೂ ಈ ಭಾಷೆಯೊಂದರ ಪ್ರಾಧಾನ್ಯತೆಯ ಮೇಲೆ ಇದನ್ನು ಮಾಡಬೇಕೆಂದು ಹೇಳುತ್ತಿಲ್ಲ. ಇದನ್ನು ನಾನಾ ದೃಷ್ಟಿಯಿಂದ ಪರಿಶೀಲಿಸಿ ಇದರಿಂದ ತುಂಬ ಅನುಕೂಲವಿದೆಯೆಂದು ನಾನೀಗ ಇದನ್ನು ಪ್ರತಿಪಾದಿಸುತ್ತಿದ್ದೇನೆ. ಪ್ರತಿಯೊಂದು ರಾಜಕೀಯ ಪಕ್ಷಗಳೂ ಭಾಷಾವಾರು ಪ್ರಾಂತ್ಯರಚನೆಯ ವಿಚಾರದಲ್ಲಿ ರೆಸಲ್ಯೂಷನ್‌ಗಳನ್ನು ಪಾಸ್‌ಮಾಡಿ ಅವುಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ನಮ್ಮ ಭಾರತದಲ್ಲಿ ಹದಿನಾಲ್ಕು ಮುಖ್ಯ ಭಾಷೆಗಳಿರುತ್ತವೆ ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅದಕ್ಕನುಸಾರವಾಗಿಯೇ ನಾವೆಲ್ಲರೂ ಭಾಷಾವಾರು ಪ್ರಾಂತ್ಯಗಳು ರಚನೆಯಾಗಬೇಕೆಂದು ಹೇಳುತ್ತಿದ್ದೇವೆ. ಈ ರೀತಿ ರಾಜ್ಯಗಳ ಪುನರ್ವಿಂಗಡಣೆ ಆಗಲೇಬೇಕೆಂಬ ವಿಚಾರವನ್ನು ನಮ್ಮ ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯವರು ಬಹಳ ಹಿಂದೆಯೇ ಹೇಳಿದ್ದಾರೆ. ಅಷ್ಟೇ ಅಲ್ಲದೆ ಮೊನ್ನೆ ತಾನೆ ನಡೆದ ಜನರಲ್ ಎಲೆಕ್ಷನ್ ಸಂಬಂಧದಲ್ಲಿ ಕಾಂಗ್ರೆಸ್ ಎಲೆಕ್ಷನ್ ಮ್ಯಾನಿಫೆಸ್ಟೋ ಪ್ಯಾರಾ 28ರಲ್ಲಿ ಹೀಗೆ ಹೇಳಿದ್ದಾರೆ:

Para 28 of the Congress Election Manifesto, 1952:

"A demand for redistribution of Provinces on a linguistic basis has been persistently made in the South and the rest of India. The Congress expressed itself in favour of linguistic provinces many years ago. A decision on this question ultimately depends upon the wishes of the people concerned. While linguistic regions have undoubtedly a certain cultural and other importance, there are other factors also, such as economic, administrative and financial, which have to be taken into consideration."

Sri G. A. THIMMAPPA GOWDA (Arkalgud).—It depends upon the wishes of the people.

Sri U. M. MADAPPA.—Yes.

"Where such a demand represents the agreed views of the people concerned, necessary steps prescribed by the Constitution including the appointment of a Boundary Commission should be taken."

ಇನ್ನು ಈ ವಿಚಾರದಲ್ಲಿ ಜನರ ಅಭಿಪ್ರಾಯವೇನಿದೆ ಅದನ್ನು ಎಷ್ಟರಮಟ್ಟಿಗೆ ಶೇಖರಣೆಮಾಡಬಹುದು ಅನ್ನತಕ್ಕ ವಿಚಾರದಲ್ಲಿ ನನ್ನ ಅಭಿಪ್ರಾಯವೇನಿದೆಯೆಂಬುದನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಈಗಾಗಲೇ ಕಾಂಗ್ರೆಸ್ ಸಂಸ್ಥೆಯವರು ಅನೇಕ ವೇಳೆ ಭಾಷಾವಾರು ಪ್ರಾಂತ್ಯ ರಚನೆ ವಿಚಾರವಾಗಿ ರೆಸಲ್ಯೂಷನ್‌ಗಳನ್ನು ಪಾಸ್‌ಮಾಡಿದ್ದಾರೆ. ಅದರ ಜೊತೆಗೆ ಕಳೆದ ಮಹಾಚುನಾವಣೆ ಸಂಬಂಧದಲ್ಲಿ ಕಾಂಗ್ರೆಸ್ ಪಕ್ಷದ ಧೋರಣೆ ಭಾಷಾವಾರು ಪ್ರಾಂತ್ಯಗಳ ನಿರ್ಮಾಣ ಮಾಡುವುದರಲ್ಲಿ ಯಾವ ರೀತಿ ಇದೆ ಎನ್ನತಕ್ಕದ್ದನ್ನು ಕೂಡ ಎಲೆಕ್ಷನ್ ಮ್ಯಾನಿಫೆಸ್ಟೋ 28ನೆ ಪ್ಯಾರಾದಲ್ಲಿ ತಿಳಿಸಿ, ಜನರಿಂದ ಮತವನ್ನು ಗಳಿಸಿಕೊಂಡು, ಚುನಾಯಿತರಾಗಿ ಬಂದು ಇಲ್ಲಿ ಕುಳಿತಿರುವಂಥ ನೀವುಗಳು ಈ ದಿವಸ ಭಾಷಾವಾರು ಪ್ರಾಂತ್ಯವಾಗಲೇಬೇಕೆಂಬ ಅಭಿಪ್ರಾಯವಿದೆ ಎಂದು ಹೇಳುವುದಕ್ಕೆ ಸಾಕಷ್ಟು ಎವಿಡೆನ್ಸ್ ಇದೆಯೆಂಬುದು ನಿರ್ವಿವಾದವಾದಂಥ ವಿಷಯ. ಈ ವಿಚಾರದಲ್ಲಿ ಮದ್ರಾಸ್ ಕಾಂಗ್ರೆಸ್‌ನವರೊಂದು ರೆಸಲ್ಯೂಷನ್ನನ್ನು ತಾ॥ 28-3-1938ರಲ್ಲಿ ಪಾಸ್‌ಮಾಡಿದ್ದಾರೆ. ಅದೇ ರೀತಿಯಾಗಿ ಬೊಂಬಾಯಿ ಪ್ರಾಂತ್ಯದ ಕಾಂಗ್ರೆಸ್‌ನವರೂ ಸಹ ತಾ॥ 5-4-1938ರಲ್ಲಿ ಒಂದು ರೆಸಲ್ಯೂಷನ್ ಪಾಸ್‌ಮಾಡಿದ್ದಾರೆ. ಪುನಃ ಮದ್ರಾಸ್ ಲೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ತಾ॥ 1-4-1941ರಲ್ಲಿ ಒಂದು ನಿರ್ಣಯವನ್ನು ಈ ವಿಚಾರದಲ್ಲಿ ತಂದು ಅದನ್ನು ಆಗ ಅಂಗೀಕಾರಮಾಡಿದ್ದಾರೆ. ಮತ್ತೊಮ್ಮೆ ಮದ್ರಾಸ್ ಪ್ರಾಂತ್ಯದ ಜನರು ಈ ಭಾಷಾವಾರು ಪ್ರಾಂತ್ಯ ನಿರ್ಮಾಣ ಬೇಗ ಆಗಲೇಬೇಕೆಂದು ತಾ॥ 22-4-1949ರಲ್ಲಿ ಒತ್ತಾಯಮಾಡಿದ್ದಾರೆ. ಅಂದ ಮೇಲೆ ಅಲ್ಲಿಯ ಜನರು ಪ್ರಾಂತ್ಯ ಪುನರ್ವಿಂಗಡಣೆಯು ಭಾಷಾವಾರು ಆಧಾರದ ಮೇಲೆಯೇ ಆಗಬೇಕೆಂದು ಹೇಳುವುದನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದಾರೆಂದಾಯಿತು. ಇನ್ನು ಮೈಸೂರು ದೇಶದ ಜನರ ವಿಚಾರ ಈ ಬಗ್ಗೆ ಯಾವ ರೀತಿಯಿದೆ ಅನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಮೈಸೂರಿನಲ್ಲಿ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯಿದ್ದಾಗ ಆ ಸಭೆಯವರೂ ಮತ್ತು ಇದೇ ಸಭೆಯವರೆಲ್ಲರೂ ಏಕೀಕರಣವಾಗಲೇಬೇಕೆಂದೂ, ಗ್ರೇಟರ್ ಮೈಸೂರು ಆಗಬೇಕೆಂದೂ ನಿರ್ಣಯವನ್ನು ತಂದು ಪಾಸ್ ಮಾಡಿದ್ದಾರೆ. ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣ ಸಾಧುವಾದದ್ದು ಮತ್ತು ಅನುಕೂಲವಾದದ್ದು ಎನ್ನುವುದನ್ನು ಅನೇಕ ತತ್ವಜ್ಞಾನಿಗಳೂ ಮತ್ತು ರಾಜಕಾರಣಿಗಳೂ ಒಪ್ಪಿಕೊಂಡಿದ್ದಾರೆ.

K.P.C.C.ಯವರು ಪ್ರಾಂತ್ಯ ಪುನರ್ವಿಂಗಡಣಾ ಸಮಿತಿಗೆ ಒಪ್ಪಿಸಿರುವ ಮೆಮೋರಾಂಡದಲ್ಲಿ 11ನೇ ಪುಟದಲ್ಲಿ ಈ ಕೆಳಗೆ ಕಂಡಂತೆ ಹೇಳಿದ್ದಾರೆ:—

"In 1948, the Constituent Assembly of Mysore passed the Aims and Objectives Resolution wherein it was clearly stated that 'there shall be provision in the Constitution for the integration of the neighbouring areas with Mysore in such manner as may be mutually agreed upon between the areas concerned and Mysore, in accordance with the provisions that may be laid down by the Constitution for India in this behalf. The State in matters lying within the sphere of its own jurisdiction shall be free to agree according to its own discretion with the neighbouring State units in matters of common interest."

Indian Constitution ಅಲ್ಲಿ Article 3 ರಲ್ಲಿ ಹೀಗೆ ಹೇಳಿದ್ದಾರೆ :

"Parliament may by law—

(*a*) form a new State by separation of territory from any State or by uniting two or more states or part of states or by uniting any territory to a part of any State;

(*b*) increase the area of any state;

(*c*) diminish the area of any state;

(*d*) alter the boundaries of any state;

(*c*) alter the name of any state."

ಈ ವಿಚಾರವನ್ನು ಈಗಾಗಲೇ ಶ್ರೀಮಾನ್ ಎಚ್. ಎಂ. ಚೆನ್ನಬಸಪ್ಪನವರೂ ಈ ಸಭೆಯ ಗಮನಕ್ಕೆ ತಂದಿದ್ದಾರೆ. ಈ ಅಂಶವನ್ನು ಇಂಡಿಯಾ ಸರ್ಕಾರದವರು ಅಂಗೀಕಾರ ಮಾಡುವುದಕ್ಕೆ ಅವರಿಗೆ ಸಂಪೂರ್ಣ ಅಧಿಕಾರವಿದೆ. ಆದಾಗ್ಯೂ ಈ ಸಭೆಯ ಅಭಿಪ್ರಾಯವೇನಿದೆ ಎನ್ನುವುದನ್ನು ಕೇಳಿದ್ದರೂ, ನಮ್ಮಗಳ ಅಭಿಪ್ರಾಯವನ್ನು ಕೇಳದೇನೇ ಇದನ್ನು ಅಂಗೀಕಾರಮಾಡುವಂಥ ಅಧಿಕಾರ ಈ ದಿವಸ ಆ ಪಾರ್ಲಿಮೆಂಟಿಗೆ ಸೇರಿದೆ ಎನ್ನತಕ್ಕಂಥಾ ವಿಚಾರವನ್ನು ನಾನೀಗ ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮೈಸೂರು, ಬೊಂಬಾಯಿ, ಮದ್ರಾಸ್ ಇತ್ಯಾದಿ ಪ್ರಾಂತ್ಯಗಳಲ್ಲಿರುವ ಎಲ್ಲಾ ಕನ್ನಡಿಗರ ಅಭಿಪ್ರಾಯವೂ ಒಂದೇ ಪ್ರಾಂತ್ಯದಲ್ಲಿ ವಾಸಮಾಡಬೇಕೆಂಬುದಾಗಿದೆ. ಸಂಬಂಧಪಟ್ಟ ಸರ್ಕಾರಗಳೂ ಕೂಡ ಇದಕ್ಕೆ ಒಪ್ಪಿವೆ. ಈ ಪ್ರಶ್ನೆ ಕೇವಲ ಕರ್ಣಾಟಕ ಪ್ರಾಂತ್ಯ ನಿರ್ಮಾಣ ಒಂದಕ್ಕೇ ಸಂಬಂಧಪಟ್ಟಿರುವುದಿಲ್ಲ ಇಡೀ ಭಾರತಕ್ಕೇ ಸಂಬಂಧಿಸತಕ್ಕ ಪ್ರಶ್ನೆಯಾಗಿದೆ. ಈ ಹಿಂದೆ ರಾಜಕೀಯ ಕ್ರಾಂತಿಗಳುಂಟಾದಮೇಲೆ ದೇಶಕ್ಕೆ ಸ್ವಾತಂತ್ರ್ಯ ಬಂದೊಡನೆಯೇ ಆ ಹೋರಾಟದಲ್ಲಿ ಭಾಗಿಗಳಾಗಿದ್ದಂಥ ಪ್ರತಿಯೊಬ್ಬ ಮುಖಂಡರೂ ಭಾಷಾವಾರು ಪ್ರಾಂತ್ಯಗಳನ್ನು ನಿರ್ಮಾಣಮಾಡುವುದಾಗಿ ಹೇಳಿರುತ್ತಾರೆ. ಈಗಾಗಲೇ ಉತ್ತರ ಇಂಡಿಯಾದಲ್ಲಿ ಈ ಭಾಷಾವಾರು ಪ್ರಾಂತ್ಯಗಳ ಪ್ರಶ್ನೆ ಪೂರೈಸಿದೆ. ಅಲ್ಲಿ ಅದರ ಹವ್ಯಾಸವಿರುವುದಿಲ್ಲ. ಒರಿಸ್ಸಾ, ಉತ್ತರಪ್ರದೇಶ, ಬಂಗಾಳ, ಬೀಹಾರ್—ಇತ್ಯಾದಿ ಪ್ರಾವಿನ್ಸುಗಳೆಲ್ಲವೂ ಈ ಭಾಷಾವಾರು ತಳಹದಿಯ ಮೇಲೆ ನಿರ್ಮಾಣವಾಗಿರುತ್ತವೆ ಅಲ್ಲಿ ಹಾಗೆ ಮಾಡಿರುವಾಗ ದಕ್ಷಿಣ ಇಂಡಿಯಾದಲ್ಲಿ ಆ ರೀತಿ ಮಾಡುವುದಕ್ಕೆ ಅಡ್ಡಿ ಇರುವುದಿಲ್ಲ. ಕೇಂದ್ರ ಸರ್ಕಾರ ಉತ್ತರ ಇಂಡಿಯಾಕ್ಕೇ ಒಂದು ರೀತಿ ನೀತಿಯನ್ನೂ, ದಕ್ಷಿಣ ಭಾರತಕ್ಕೇ ಬೇರೆ ರೀತಿ ನೀತಿಯನ್ನೂ ಅನುಸರಿಸುತ್ತಿರುವುದರಿಂದ ತುಂಬಾ ವ್ಯತ್ಯಾಸ ಉಂಟಾಗಿದೆ. ಉತ್ತರ ಇಂಡಿಯಾದಲ್ಲಿ ಭಾಷಾವಾರು ಪ್ರಾಂತ್ಯಗಳ ನಿರ್ಮಾಣಕ್ಕೆ ಅವಕಾಶ ಕೊಟ್ಟು, ದಕ್ಷಿಣ ಭಾರತಕ್ಕೆ ಅದೇ ರೀತಿಯ ಅವಕಾಶಕೊಡದಿರುವುದೇ ಇಷ್ಟೆಲ್ಲಾ ಗೊಂದಲಕ್ಕೆ ಕಾರಣವಾಗಿದೆಯೆಂದು ಹೇಳುತ್ತೇನೆ. ಭಾಷಾವಾರು ಆಧಾರದ ಮೇಲೆಯೇ ಆಂಧ್ರ ಪ್ರಾಂತ್ಯವನ್ನು ನಿರ್ಮಾಣಮಾಡಿದರು. ಆಗ ಅಲ್ಲಿ ಉಳಿದ ಕನ್ನಡ ಪ್ರದೇಶಗಳನ್ನೆಲ್ಲಾ ಮೈಸೂರಿಗೆ ಸೇರಿಸಿದರು. ಆಗ ಪಾರ್ಲಿಯಮೆಂಟಿನ ಮುಂದೆ ಕೇಂದ್ರ ಸರ್ಕಾರದವರು ತಂದಿದ್ದ ಮಸೂದೆಯಲ್ಲಿ ಭಾಷಾವಾರು ಪ್ರಾಂತ್ಯಗಳ ನಿರ್ಮಾಣವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀ ನೆಹರು ಅವರು ಈ ರೀತಿ ಹೇಳಿದ್ದಾರೆ :

"Prime Minister Nehru referring to the appointment of the States Reorganization Commission in Parliament said that the language and culture of an area have an undoubted importance, that they present a matter of living, which is common to that area."

ಭಾಷೆಗೆ ಅಷ್ಟು ಪ್ರಾಧಾನ್ಯತೆ ಕೊಡುವುದು ಬೇಡ ಎಂದು ಕೆಲವರು ಹೇಳುತ್ತಿರುವುದರಿಂದ ಈ ವಿಷಯಗಳನ್ನೆಲ್ಲಾ ತಿಳಿಸುತ್ತಿದ್ದೇನೆ. ಆದರೆ ಭಾಷಾವಾರು ಪ್ರಾಂತ್ಯ ನಿರ್ಮಾಣವಾಗಬೇಕೆಂದು ಹೇಳಿದರೆ ಅದು ಏಕಭಾಷಾ ರಾಜ್ಯವಾಗಿಯೇ ಇರಬೇಕೆಂದಲ್ಲ ಎನ್ನುವುದನ್ನು ತಾವೆಲ್ಲರೂ ಗಮನದಲ್ಲಿಡಬೇಕು. ಏಕ ಭಾಷೆಯನ್ನೇ ಆರಿಸಿ ರಾಜ್ಯ ಮಾಡುತ್ತಾರೆಂದು ಯಾರೂ ತಿಳಿದುಕೊಳ್ಳಬಾರದು. ಹಾಗೂ ಅದೇ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದಾದರೆ ಅದು ಅವರ ತಪ್ಪು ಭಾವನೆಯಾಗುತ್ತದೆಂದು ಹೇಳುತ್ತೇನೆ. ಇಷ್ಟೆಲ್ಲವನ್ನು ಹೇಳಿದ ಮೇಲೆ ನಾನೊಂದು ಮಾತನ್ನು ಹೇಳಬಯಸುತ್ತೇನೆ. ಭಾಷೆ ಮಾನವನನ್ನು ಪ್ರಾಣಿವರ್ಗದಿಂದ ಬೇರೆ ಮಾಡತಕ್ಕಂಥ ಒಂದು ಸಾಧನ. ಭಾಷೆ ಒಬ್ಬರ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಮತ್ತೊಬ್ಬರಿಗೆ ತಿಳಿಸುವ ಒಂದು ಸಾಧನ.

Hobbes ಕಾಲದಲ್ಲಿ ಜನಗಳ ಪರಿಸ್ಥಿತಿ ಈ ಕೆಳಗೆ ಕಂಡಂತಿತ್ತು:

"Man is essentially selfish, is moved to action not by his int lle t or reason but by his aptitudes, desires and passions. Th life of man is solitary, poor and nasty."

ಭಾಷೆಗೆ ಪ್ರಾಮುಖ್ಯತೆ ಇಲ್ಲದ ಕಾಲವಿದು. ಆ ಕಾಲದಲ್ಲಿ ಅಷ್ಟೊಂದು ದುರಂತಗಳು ಆಗಿದ್ದಾಗ್ಯೂ ಈ ಹೊತ್ತು ಕೆಲವರು ಆ ಭಾಷೆ ಆಧಾರದ ಮೇಲೆ ನಾವು ರಾಜ್ಯಗಳನ್ನು ನಿರ್ಮಾಣಮಾಡಬೇಕಾಗಿಲ್ಲವೆಂದು ಹೇಳುತ್ತಿರುವುದು ನನಗೆ ಬಹಳ ಆಶ್ಚರ್ಯವನ್ನುಂಟುಮಾಡಿದೆ. ರೂಸೋ ಕಾಲಕ್ಕೆ ಬಂದರೆ ಅವರು ಹೀಗೆ ಹೇಳಿದ್ದಾರೆ:

"It emonstrates once and for all that the will is the source of the bas s of the State, that Government depends upon the consent of the gov rned"

ಅಂದರೆ, ಜನರ ಅಭಿಪ್ರಾಯದ ಮೇಲೆ ರಚಿಸಲ್ಪಡುವಂಥ ರಾಜ್ಯಗಳೇ ಬಹಳ ಶ್ರೇಷ್ಠವಾದಂಥವುಗಳು ಎಂದು ಹೇಳಿದ ಹಾಗಾಯಿತು.

4-30 P.M.

ಆಯಾ ಪ್ರಾಂತ್ಯದಲ್ಲಿರತಕ್ಕ ಜನರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಭಾಷೆಯೇ ಸಾಧನ. ಹಾಗೆ ಅವರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಭಾಷೆಯೇ ಸಾಧನ. ಇದನ್ನು ಒಂದು ಉದಾಹರಣೆ ಮೂಲಕ ಹೇಳಿದರೆ ಅರ್ಥವಾಗುತ್ತದೆ. ಈಗ ಇಲ್ಲಿ ಕುಳಿತಿರತಕ್ಕಂಥ ಸದಸ್ಯರೆಲ್ಲರೂ ಪ್ರಜಾ ಪ್ರಭು

(ಶ್ರೀ ಯು. ಎಂ. ಮಾದಪ್ಪ.)

ಶ್ಯದ ತಳಹದಿಯಮೇಲೆ ಚುನಾವಣೆಯಾಗಿ ಬಂದಿರುವವರು. ನಾವೆಲ್ಲರೂ ಬೇರೆ ಬೇರೆ ಭಾಷೆಗಳನ್ನು ಆಡುವವರಾಗಿದ್ದ ಪಕ್ಷದಲ್ಲಿ ಈ ಸಭೆ ಒಂದು ಪ್ರಾಣಿ ಪ್ರದರ್ಶನಾಲಯವಾಗುತ್ತಿರಲಿಲ್ಲವೇ? ಒಬ್ಬರ ಭಾಷೆ ಮತ್ತೊಬ್ಬರಿಗೆ ಅರ್ಥವಾಗದೆ ಹೋಗುತ್ತಿತ್ತು. ಹಿಂದೆ ಮದ್ರಾಸ್ ಅಸೆಂಬ್ಲಿಯೊಳಗೆ ತಮಿಳರು, ತೆಲುಗರು, ಕನ್ನಡಿಗರು ಹೀಗೆ ಮೂರು ಭಾಷೆಗಳನ್ನು ಆಡುವ ಸದಸ್ಯರು ಸೇರಿ ಒಂದು ಪ್ರಾಣಿ ಪ್ರದರ್ಶನಾಲಯದಂತಿತ್ತು. ಆದ್ದರಿಂದ ರೊಸೋ ಹೇಳಿರುವ 'General will' ಕಾರ್ಯಗತವಾಗಬೇಕಾಗಿದ್ದರೆ, ಪ್ರಜಾಪ್ರಭುತ್ವ ನಡೆಯಬೇಕಾಗಿದ್ದರೆ, ಭಾಷೆಯ ಆಧಾರದ ಮೇಲೆ ನಡೆಯಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಾದರೆ House of the People ಒಂದು ಮೃಗಾಲಯವೇ ?

ಶ್ರೀ ಯು. ಎಂ. ಮಾದಪ್ಪ.—ಒಂದು nation ಆಗಬೇಕಾಗಿದ್ದರೆ common language ಬೇಕು, common history ಬೇಕು, common culture ಬೇಕು ಎಂದು ತಾವು ಓದಿರಬಹುದು. ಅವಕ್ಕಾಗಿಯೇ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡಲು ಭಾರತ ಸರ್ಕಾರ ಪ್ರಯತ್ನಪಡುತ್ತಿರುವುದು. ಆಡಳಿತ ದೃಷ್ಟಿಯಿಂದ ಮಾಡುತ್ತಿಲ್ಲವೆಂದು ಕೆಲವರು ಗೊಣಗುಟ್ಟುತ್ತಿದ್ದಾರೆ. ಆದರೆ ಇದು ಆಡಳಿತಕ್ಕೆ ಯೋಗ್ಯವಾದ ರಾಜ್ಯವೆಂದು ಹೇಳುತ್ತಾರೆ. ಕನ್ನಡ ಮಾತನಾಡತಕ್ಕ ಪ್ರದೇಶಗಳೆಲ್ಲವನ್ನೂ ಒಟ್ಟುಗೂಡಿಸಿ ಅದನ್ನು ಕರ್ಣಾಟಕವೆಂದೇ ಕರೆಯಲಿ ಅಥವಾ ಮೈಸೂರು ಎಂದೇ ಕರೆಯಲಿ ಯಾವ ಹೆಸರಲ್ಲಾದರೂ ಕರೆದು ಒಂದು ಪ್ರಾಂತವನ್ನು ಮಾಡಿ ಅದಕ್ಕೆ ಒಂದು ಆಡಳಿತ ಯಂತ್ರವನ್ನು ನಿರ್ಮಿಸಿದ್ದೇ ಆದರೆ ಅದು ಆಡಳಿತಕ್ಕೆ ಯೋಗ್ಯವಾದ ರಾಷ್ಟ್ರವಾಗುತ್ತದೆಂದು ಪ್ರತಿಪಾದಿಸಲು ಸಿದ್ಧನಾಗಿದ್ದೇನೆ. ಸಾಮಾನ್ಯವಾಗಿ ಕರ್ನಾಟಕ ಪ್ರಾಂತವು ತಾವುಗಳೆಲ್ಲರೂ ತಿಳಿದಂತೆ ಸುಮಾರು ಎರಡು ಕೋಟಿ ಜನಸಂಖ್ಯೆಯಿಂದ ಕೂಡಿದ ಪ್ರದೇಶವಾಗುತ್ತದೆ. ಈಗಿನ ಹೈದರಾಬಾದ್ ಸ್ಟೇಟ್‌ಗಿಂತ ಸ್ವಲ್ಪ ಜಾಸ್ತಿಯಾಗಬಹುದು. ಅಥವಾ ಬೊಂಬಾಯಿ ಸಂಸ್ಥಾನಕ್ಕಿಂತ ಸ್ವಲ್ಪ ಕಡಿಮೆಯಾಗಬಹುದು. ಆದ್ದರಿಂದ ಇದು ಆಡಳಿತಕ್ಕೆ ಯೋಗ್ಯವಾಗುತ್ತದೆ. ಉತ್ತರಪ್ರದೇಶವನ್ನು ತೆಗೆದುಕೊಳ್ಳಿ; ಎಲ್ಲರಿಗೂ ಗೊತ್ತಿರುವಂತೆ ಪಾರ್ಲಿಮೆಂಟಿನಲ್ಲಿ ಬಹುಸಂಖ್ಯಾ ಪ್ರತಿನಿಧಿಗಳನ್ನು ಹೊಂದಿರತಕ್ಕಂಥ ರಾಜ್ಯ. ಸಾಮಾನ್ಯವಾಗಿ ಪಾರ್ಲಿಮೆಂಟಿನಲ್ಲಿ ಯಾವ ಕಾನೂನು ಪಾಸಾದರೂ ಅದು ಯು. ಪಿ. ಪ್ರತಿನಿಧಿಗಳಿಂದ ಪಾಸ್‌ಮಾಡಿದ ಕಾನೂನು ಎಂದು ಹೇಳಿದರೆ ತಪ್ಪಾಗಲಾರದು. ಅವರು ಬಹುಮತದಿಂದ ಅಲ್ಲಿರುವುದರಿಂದ ಏನು ಕಾನೂನು ಪಾಸುಮಾಡಿದರೂ ಆ ಪ್ರಾಂತದ ಪ್ರತಿನಿಧಿಗಳು ಒಪ್ಪಿದ ಕಾನೂನು ಆಗುತ್ತದೆ.

Sri V. VENKATAPPA (Channapatna).—How can you prevent it ?

ಶ್ರೀ ಯು. ಎಂ. ಮಾದಪ್ಪ.—ಸ್ವಲ್ಪ ನಿಧಾನಿಸಿ, ನಾನು ಹೇಳುವುದನ್ನು ಕೇಳಿದರೆ ಅರ್ಥವಾಗುತ್ತದೆ. ಕರ್ಣಾಟಕ ಪ್ರಾಂತ ರಚನೆಯಾದ ಪಕ್ಷದಲ್ಲಿ ಯು. ಪಿ. ಯನ್ನು ಬಿಟ್ಟರೆ ಮುಂದೆ ಅದು ಎರಡನೇ ವಿಶಾಲವಾದ ಪ್ರಾಂತವಾಗುತ್ತದೆ ಎಂದು ಹೇಳುತ್ತೇನೆ. ಆಂಧ್ರ ಪ್ರಾಂತವನ್ನು ರಚನೆಮಾಡುವಾಗ ಆಡಳಿತ ಯಂತ್ರವನ್ನು ನಿರ್ಮಿಸಿದಂತೆ ಇಲ್ಲಿ ನಿರ್ಮಿಸಬೇಕಾದ ಅಗತ್ಯವಿಲ್ಲ. ಮೈಸೂರಿನಲ್ಲಿ ಆಡಳಿತ ಯಂತ್ರವಿದೆ. ಮೈಸೂರಿನಲ್ಲಿ ಒಂದು ಯೂನಿವರ್ಸಿಟಿ ಇದೆ, ಕರ್ಣಾಟಕದಲ್ಲೂ ಒಂದು ಯೂನಿವರ್ಸಿಟಿ ಇದೆ. ಇವೆರಡೂ ಸೇರಿದರೆ ಒಂದು ಯೂನಿವರ್ಸಿಟಿ ಆಗುತ್ತದೆ. ಹೆಚ್ಚಿಗೆ ಬದಲಾವಣೆಗಳನ್ನು ಮಾಡಬೇಕಾಗಿಲ್ಲ. ಬಳ್ಳಾರಿ ಯಾವರೀತಿ ನಮ್ಮ ಮೈಸೂರಿನ ಕೈಸೇರಿತೋ ಅದೇ ರೀತಿ ಉಳಿದ ಕನ್ನಡ ಭಾಗಗಳು ಮೈಸೂರಿನ ಕೈಸೇರುವುದರಲ್ಲಿ ಏನೂ ಅನುಮಾನವಿಲ್ಲ. ಆದ್ದರಿಂದ ಇದು ಆಡಳಿತಕ್ಕೆ ಯೋಗ್ಯವಾದ ಒಂದು ಪ್ರಾಂತವಾಗುತ್ತದೆ ಎಂಬುದಾಗಿ ನಾನು ನಿಸ್ಸಂದೇಹವಾಗಿ ಹೇಳಬಲ್ಲೆ. ಇಷ್ಟಾದನಂತರ ಈ ಕಮಿಟಿಯನ್ನು ಸರ್ಕಾರದವರು ರಚಿಸಿದಾಗಲೇ, ಸರ್ಕಾರದವರು ಹೊರಡಿಸಿದ ಆಜ್ಞೆಯನ್ನು ನೋಡಿದರೆ ಈ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವೇನಿತ್ತು ಎಂಬುದು ಅರ್ಥವಾಗುತ್ತದೆ. ಭಾಷೆಯ ಆಧಾರದಮೇಲೆ ಪ್ರಾಂತ ರಚನೆ ಆಗಬೇಕು ಎಂಬುದು ಅದರಲ್ಲಿ ಸ್ಪಷ್ಟವಾಗಿದೆ. ಅವರು ಅದನ್ನು ಒಪ್ಪಿಕೊಂಡಿದ್ದಾರೆ. ಭಾಷೆ ಆಧಾರದಮೇಲೆ ಅವರ ವರದಿಯು ತಯಾರು ಆಗಬೇಕೆಂದು ಅವರು Term of referenceನಲ್ಲಿ ತಿಳಿಸಿದ್ದಾರೆ. ಮೊಟ್ಟ ಮೊದಲನೆಯದು terms of reference ನಲ್ಲಿ ಸರ್ಕಾರದ ಉದ್ದೇಶ ಹೀಗೆ ಇದೆಯೆಂದು ಕಾಣುತ್ತದೆ. ಮುಂದೆ ಇತರ ಕನ್ನಡ ಭಾಗಗಳು ಸೇರುವಾಗ ತಾವು ಮಾಡತಕ್ಕ ಕೆಲಸಗಳೇನೆಂಬುದನ್ನು ತಿಳಿದುಕೊಳ್ಳಬೇಕೆಂದು ಅವರು ಹೇಳಿದ್ದಾರೆಯೇ ವಿನಾ ಅದನ್ನು ವಿರೋಧಿಸಬೇಕು ಎನ್ನುವ ಪ್ರಶ್ನೆ ಸರ್ಕಾರದವರಲ್ಲಿ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. Terms of referenceನ್ನು ತಾವು ಗಮನಿಸಬೇಕು. ಕನ್ನಡಭಾಷೆ ಮಾತನಾಡತಕ್ಕ ಪ್ರದೇಶದ ವಿಷಯವನ್ನು ಮತ್ತು development relating to education, medical, public health, rural development, industries, irrigation and power, ಈ ವಿಚಾರ ಕೇಳಿದ್ದಾರೆ. ಅದೂ ಅಲ್ಲದೆ availability of natural resources"ನ್ನೂ ಕೇಳಿದ್ದಾರೆ. ಅವರು ಹೀಗೆ ಕೇಳುವಾಗ ನಾವು ಬರೀ development ವಿಷಯ ಒಂದನ್ನೇ ಗಮನಕ್ಕೆ ತೆಗೆದುಕೊಳ್ಳಬಾರದು. ನಮ್ಮ ಸಂಸ್ಥಾನದಲ್ಲಿ ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಆದ development ನ್ನು ತೆಗೆದುಕೊಳ್ಳುವುದಾದರೆ ಅದು ಅಲ್ಲಿ ಆವ ರೀತಿಯಲ್ಲಿ ಇದೆ; ಒಂದೊಂದು ಡಿಸ್ಟ್ರಿಕ್ಟನ್ನು ಹೀಗೆ ಕೈಬಿಡುವುದಕ್ಕೆ ಎಷ್ಟೋ ಕಾರಣಗಳಿವೆ. ಉದಾಹರಣೆಗೆ ನಮ್ಮ ಸಂಸ್ಥಾನದಲ್ಲಿ percentage of literacy ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ಮತ್ತು ತಾಲ್ಲೂಕಿನಲ್ಲೂ ಇಷ್ಟೇ ಇದೆ ಎಂಬುದನ್ನು ತೆಗೆದುಕೊಂಡರೆ ಅಲ್ಲಿಗಿಂತ ಕನಿಷ್ಠಪಕ್ಷ ನಮ್ಮಲ್ಲೂ ಕಾಣಬಹುದೋ ಏನೋ ! ನಮ್ಮ ಚಾಮರಾಜನಗರ ತಾಲ್ಲೂಕನ್ನೇ ತೆಗೆದುಕೊಳ್ಳಿ; ಅಲ್ಲಿ ಸುಮಾರು 140ಸಾವಿರ ಜಾನುವಾರುಗಳು ಇವೆ. ಅಷ್ಟು ಜಾನುವಾರುಗಳಿಗೆ ಎರಡೇ Veterinary ಆಸ್ಪತ್ರೆಗಳಿವೆ. ಆದ್ದರಿಂದ ನಾವು ಹಿಂದುಳಿದಿರುವುದರಲ್ಲಿ ಕಡಿಮೆಯಿಲ್ಲ. ನಮ್ಮಲ್ಲೂ ಆ ರೀತಿ ಇದೆ. ಈ ಒಂದು ಪ್ರದೇಶವನ್ನು ತೆಗೆದುಕೊಳ್ಳುವುದಾದರೆ ಸರ್ವತೋಮುಖವಾದ ಬೆಳವಣಿಗೆ ಯಾವ ಸಂಸ್ಥಾನದಲ್ಲೂ ಮತ್ತು ಯಾವ ಪ್ರದೇಶದಲ್ಲೂ ಇದೇ ರೀತಿಯಾಗಿಲ್ಲ. ಆ ರೀತಿ ಸರ್ವತೋಮುಖವಾದ ಬೆಳವಣಿಗೆ ಆಗಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಪಾಂಚವಾರ್ಷಿಕ ಯೋಜನೆಗಳನ್ನು ಅದಕ್ಕಾಗಿ ಮಾಡುತ್ತಿದ್ದಾರೆ. ಎರಡನೇ ಪಾಂಚವಾರ್ಷಿಕ ಯೋಜನೆಯನ್ನು ಮಾಡುವುದರಲ್ಲಿದ್ದಾರೆ. National Extension Scheme Development Blocks,

Community Projects ಇವೆಲ್ಲಾ ತೆಗೆದುಕೊಂಡು ಕೆಲಸಮಾಡುತ್ತಿದ್ದಾರೆ. ಹೀಗೆಲ್ಲಾ ಇದ್ದರೂ ವರದಿಯಲ್ಲಿ ಬರೀ ರೆವಿನ್ಯೂ ಮತ್ತು expenditure ವಿಷಯ ಮಾತ್ರ ಹೇಳಿಬಿಟ್ಟು ತಾತ್ಕಾಲಿಕವಾಗಿ ನಡೆಯುವ ಬೆಳವಣಿಗೆಯನ್ನು ಪಾಂಚವಾರ್ಷಿಕ ಯೋಜನೆಯ ಶಿರೋನಾಮೆಯಲ್ಲಿ ಬೇರೆ ಹೇಳಿದ್ದಾರೆ. ಈಗ ಪಾಂಚವಾರ್ಷಿಕ ಯೋಜನೆಯಲ್ಲಿ ನಡೆದಿರುವ ಅಭಿವೃದ್ಧಿಯನ್ನು ತೆಗೆದು ನೋಡುವುದಾದರೆ ಆಗದೆ ಇರುವ ಅಭಿವೃದ್ಧಿ ಆಗಿದೆಯೋ ಎಂಬುದನ್ನು ಕಾಣಬಹುದು. Revenue ಮತ್ತು Expendi ure ವಿಷಯವನ್ನು ತೆಗೆದುಕೊಳ್ಳುವುದಾದರೂ ಹೈದರಾಬಾದ್ ಕನ್ನಡ ಪ್ರದೇಶದಲ್ಲಿ surplus ಇದೆ, ಬೊಂಬಾಯಿ ಕನ್ನಡ ಪ್ರದೇಶದಲ್ಲಿ deficit ಇದೆ ಎಂದು ಹೇಳಿದ್ದಾರೆ. South Canaraದಲ್ಲಿ ಲೆಕ್ಕಪತ್ರಗಳು ಸಿಕ್ಕದೇ ಇರುವುದರಿಂದ ಅಲ್ಲಿ ಹೇಗೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ. ಅಲ್ಲದೆ ಕೊಡಗಿನಲ್ಲಿ ಸುಮಾರು 23 ಸಾವಿರ ರೂಪಾಯಿಗಳು surplus ಇದೆಯೆಂದು ಒಪ್ಪಿಕೊಂಡಿದ್ದಾರೆ. ಅಲ್ಲಿಗೆ ಮೈಸೂರನ್ನು ಬಿಟ್ಟುಬಿಟ್ಟು ಒಟ್ಟು deficit ಸುಮಾರು ಒಂದು ಕೋಟಿ ಎಂಟು ಲಕ್ಷ ಎಂದು ಒಪ್ಪಿಕೊಂಡಿದ್ದಾರೆ. ಇದು 1951-52 ಮತ್ತು 1952-53 ಇಸವಿಗಳ ಲೆಕ್ಕದ ಪ್ರಕಾರ.

Sri J. MOHAMED IMAM.—Now it is a surplus Budget.

ಶ್ರೀ ಯು. ಎಂ. ಮಾದಪ್ಪ.—ಆದರೆ ನಮ್ಮ ಬಡ್ಜೆಟ್ ನೋಡುವುದಾದರೆ ನಮ್ಮ ಪೋತಾ ಎಷ್ಟಿದೆಯೆಂಬುದು ತಮಗೇ ಗೊತ್ತು. 4½ ಕೋಟಿ ಡಿಫಿಸಿಟ್ ಇದೆ. ಇಷ್ಟು ಕಾರಣಗಳಿಂದ ನಮ್ಮ ಬಡ್ಜೆಟ್ಟಿಗಿಂತ ಅವರದು sound ಆಗಿದೆಯೆಂದೇ ಹೇಳಬಹುದು. ಆಮೇಲೆ ನಮ್ಮಲ್ಲಿರತಕ್ಕ Capital Expenditure ನ್ನೂ ಅವರಲ್ಲಿರತಕ್ಕ Capital Expenditure ನ್ನೂ ಹೋಲಿಸಿ ನೋಡಿ. ಅಲ್ಲಿ Capital Expenditure ಬೇಕಾದಷ್ಟು ಆಗುತ್ತಿದೆ. ದೊಡ್ಡದೊಡ್ಡ ಪ್ರಾಜೆಕ್ಟುಗಳಾದ ತುಂಗಭದ್ರಾ, ಘಟಪ್ರಭ, ಮಲಪ್ರಭ ಮುಂತಾದುವುಗಳು ಭರದಿಂದ ಸಾಗುತ್ತಿವೆ. ಇದಕ್ಕಾಗಿ 15 ಕೋಟಿಗಳಷ್ಟು ಹಣ ಖರ್ಚಾಗಲಿದೆ. ಅವುಗಳೆಲ್ಲಾ ನಮಗೆ ಸೇರಿದರೆ ನಾವೆಷ್ಟು ಉನ್ನತಿಯ ಪ್ರಾಂತವಾಗುತ್ತೇವೆಂಬುದನ್ನು ನೋಡಬಹುದು. ಅಲ್ಲದೆ, ಕೆ. ಪಿ. ಸಿ. ಸಿ. ಯವರು ಕೊಟ್ಟಿರುವ ರಿಪೋರ್ಟನ್ನೂ ಸ್ವಲ್ಪ ನೋಡುವುದಾದರೆ, ಅವರು financial aspectನ ವಿಚಾರದಲ್ಲಿ ಹೇಳಿರುವುದು ಗಮನಾರ್ಹವಾಗಿದೆ.

As early as 1928, the. Nehru Committee observed :

> "Financially the position of Karnataka is very strong and even at present there is a considerable surplus in the British part of Karnataka. In 1948 again, presenting the case of Karnataka State before the Linguistic Provinces Commission, Dr. V.K.R V. Rao has stated with full facts and figures that the Karnataka State would have a substantial surplus in the absence of complete prohibition and would have a small surplus even if total prohibition were imposed"

ಎಂದು ಹೇಳಿದ್ದಾರೆ. ಹೀಗಿರುವುದರಿಂದ ಇನ್ನು ಮುಂದೆ ಆಗತಕ್ಕ ಭವ್ಯ ಕರ್ಣಾಟಕ ಪ್ರಾಂತ್ಯದಲ್ಲಿ ಡಿಫಿಸಿಟ್ ಆಗಲಾರದೆಂದು ನಾನು ಹೇಳಬಲ್ಲೆ. ಅಲ್ಲದೆ, ನಮ್ಮಲ್ಲೀಗ ಏನು ತೆರಿಗೆ ಹಾಕಿದ್ದೇರಿ ಮತ್ತು ಏನು ಉತ್ಪತ್ತಿ ಬರುತ್ತಿದೆ ಹಾಗೂ ಅಲ್ಲಿ ಏನು ಉತ್ಪತ್ತಿ ಬರುತ್ತದೆ ಎಂಬುದನ್ನು ಈ ವರದಿಯಲ್ಲಿ ಹೇಳಿಲ್ಲ. ಸಾಲದ್ದಕ್ಕೆ ಅರಣ್ಯದಿಂದ ಬರತಕ್ಕ ಉತ್ಪತ್ತಿ ಬಹಳ ಹೆಚ್ಚಿನದಾಗಿತ್ತದೆಂದು ಹೇಳಬಹುದು. ನಮ್ಮಲ್ಲಿ standard forest area ಎಷ್ಟಿರಬೇಕೆಂದು ಕ್ಲುಪ್ತವಾಗಿದೆಯೋ ಅದಕ್ಕಿಂತ ಬಹಳ ಕಡಮೆ ಇದೆ. ಹೀಗಿರುವಾಗ ಆ ಪ್ರದೇಶವೂ ನಮಗೆ ಸೇರಿದರೆ, ಎಷ್ಟು ಪ್ರದೇಶ ಕಾಡಿರಬೇಕೋ ಅಷ್ಟು ಪ್ರದೇಶವನ್ನು ನಾವು ಇಟ್ಟುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಇವೆಲ್ಲದರಿಂದಾಗಿ ಮುಂದೆ ರಚಿತವಾಗುವ ಪ್ರಾಂತ್ಯಕ್ಕೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ಅಲ್ಲಿನ ವಾಯುಗುಣ, ಪ್ರಕೃತಿ ಸಂಪತ್ತು ನೋಡುವುದಾದರೆ, ಇದೇ ರಿಪೋರ್ಟಿನಲ್ಲಿ ಹೇಳಿದ್ದಾರೆ:

> "In respect of climate, topography, hydrocology and geological phenomena, there is hardly a region in India, possessing such a totality of favourable circumstances. In point of variety and abundance and superior quality, some of her resources, more particularly her food resources and commercial crops, are among the best in our country. Her power resources too, situated just where the modern industrialist would have liked them to be, are second to none in the whole of India"

ಇವುಗಳನ್ನು ಆ ಪ್ರಾಂತ್ಯದವರು ಇನ್ನೂ ಉಪಯೋಗಿಸಿಕೊಳ್ಳದಿರುವುದರಿಂದ ಆ ಪ್ರಾಂತ್ಯದವರು ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶವಾಗಿಲ್ಲ.

ಇನ್ನೊಂದು ಅಂಶವಿದೆ: ನಮ್ಮ ಸಂಸ್ಥಾನದಲ್ಲಿ ತಾವೆಲ್ಲರೂ ಹೇಳುತ್ತಿರುವ ಹಾಗೆ ಕೈಗಾರಿಕೆಗಳು ಮುಂದುವರಿದಿವೆ. ರಾಷ್ಟ್ರಾಡಳಿತ ನಡೆಸುವುದಕ್ಕೆ ಬಹಳ ಯೋಗ್ಯರು ಇಲ್ಲಿದ್ದು ಆಡಳಿತ ಸೂತ್ರವನ್ನು ಚೆನ್ನಾಗಿ ನಡೆಸಿಕೊಂಡು ಬಂದದ್ದರಿಂದ ಮೈಸೂರು ಸಂಸ್ಥಾನ ಇಷ್ಟು ಉನ್ನತ ಸ್ಥಿತಿಗೆ ಬಂದಿದೆಯೆಂದು ನಾವೇ ಹೇಳುತ್ತಿದ್ದೇವೆ. ಇಂಥ ದಕ್ಷರಿದ್ದು ದೊಡ್ಡ ಪ್ರಾಂತ್ಯವನ್ನು ಆಳುವುದಕ್ಕೆ ಶಕ್ತರಾಗಿದ್ದೇವೆಂದು ಹೇಳಿಕೊಳ್ಳುವಾಗ, ನಾವು ಇನ್ನೂ ಸ್ವಲ್ಪ ದೊಡ್ಡ ಪ್ರಾಂತ್ಯ ಮಾಡಿಕೊಂಡರೆ ಆಳಲಾರವೆಂದು ಹೇಳಿಕೊಳ್ಳುವಂಥ ಹೇಡಿಗಳೇಕಾಗಬೇಕು? ಯಾವ ಪ್ರಾಂತ್ಯವಾದರೇನು, ಪ್ರಾಂತ್ಯವನ್ನು ಉನ್ನತ ಮಟ್ಟಕ್ಕೆ ತರುವುದು ಆಡಳಿತಗಾರನ ಕುರುಹು. ಕನ್ನಡಿಗರಲ್ಲಿ ಇಷ್ಟು ಹೇಡಿಯಾಗಿದ್ದವರು ಯಾರೂ ಇಲ್ಲ! ಎಂಥೆಂಥ ಕವಿಗಳು ಇಲ್ಲಿದ್ದರು! ನಮ್ಮ ಜನಗಳು, ಕನ್ನಡಿಗರು ಬಹಳ ವೀರರು; ನಾವಿಂದು ಕನ್ನಡ ಪ್ರಾಂತ್ಯ ಕಟ್ಟಬೇಕೆಂದಿದ್ದರೆ ಕರ್ಣಾಟಕದ ಸಾಹಿತ್ಯವನ್ನನುಸರಿಸಿ ಕಟ್ಟಬೇಕಾಗಿದೆ. ವಿದ್ಯಾರಣ್ಯ ಕವಿಗಳು ಇದ್ದ ನಾಡಿದು. ಅವರಿಗೆ ಗೌರವ ಸಲ್ಲಿಸುವುದಕ್ಕಾದರೂ

(ಶ್ರೀ ಯು. ಎಂ. ಮಾದಪ್ಪ.)

ಈ ಪ್ರಾಂತ್ಯವನ್ನು ನಾವು ಕಟ್ಟಬೇಕಾಗಿದೆ. ಕೃಷ್ಣದೇವರಾಯನು ಆಂಧ್ರ ಮತ್ತು ಕನ್ನಡ ನಾಡನ್ನು ಒಟ್ಟುಗೂಡಿಸಿ ಚಿರಕಾಲ ರಾಜ್ಯಭಾರ ನಡೆಸಿದ ನಾಡಿದು. ಅವರಲ್ಲಿ ಅನ್ಯೋನ್ಯ ಮನೋಭಾವನೆಯನ್ನು ಬೆಳೆಸಿದ ನಾಡಿದು. ಹೀಗಿರುವಾಗ ಒಂದು ಪ್ರಶ್ನೆಯನ್ನೆತ್ತಿ, ಕರ್ಣಾಟಕ ಪ್ರಾಂತ್ಯವಾದರೆ ಕೋಲಾರವೇನಾದರೂ ಹೊರಗೆಹೋಗುತ್ತದೆಯೇ? ಅವರ ಮನಸ್ಸು ಪರಿವರ್ತನೆಯಾಗುತ್ತದೆಯೇ? ಎಂದು ಕೇಳುವುದಕ್ಕೆ ಅವಕಾಶವಿಲ್ಲ. ನಮ್ಮ ಕನ್ನಡಿಗರು ವಿಶಾಲಮನೋಭಾವದವರು. ಆದ್ದರಿಂದ ಅವರಿಂದ ಯಾವ ಕಿರುಕುಳಗಳೂ ಒದಗುತ್ತವೆಂದು ಭಾವಿಸಕೂಡದು. ಹಿಂದೆ ಪುಲಿಕೇಶಿಯ ಕಾಲ ತೆಗೆದುಕೊಳ್ಳಿ. ಅವರು ಕನ್ನಡನಾಡನ್ನು ಎಷ್ಟು ಮುಂದಕ್ಕೆ ತಂದಿದ್ದರೆಂಬುದು ಗೊತ್ತಾಗುತ್ತದೆ. ಹೀಗಿರುವಾಗ ಕನ್ನಡ ಪ್ರಾಂತ್ಯ ಬೇಡ ಎಂದು ಹೇಳುವುದಕ್ಕೆ ಆಧಾರವೇ ಇಲ್ಲ. ಕನ್ನಡ ಪ್ರಾಂತ್ಯದ ಅಗತ್ಯವಿದೆಯೆಂದು ಒತ್ತಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ (ಶಿವಮೊಗ್ಗ).—ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ಮಾತನಾಡಿದ ವಾದವನ್ನು ಕೇಳಿದ್ದೇನೆ. ಬೊಂಬಾಯಿ, ಹೈದರಾಬಾದು, ಮದ್ರಾಸು ಪ್ರಾಂತ್ಯಗಳಲ್ಲಿರತಕ್ಕ ಕನ್ನಡಿಗರು ತಾವೊಂದು ರಾಷ್ಟ್ರವನ್ನು ಮಾಡಿಕೊಳ್ಳುವುದಕ್ಕೆ ಮೈಸೂರಿನ ಜನರನ್ನು ಪ್ರಚೋದನೆ ಮಾಡುವುದಕ್ಕೇನು ಕಾರಣವೋ ನನಗರ್ಥವಾಗುವುದಿಲ್ಲ. ಅಲ್ಲಿರತಕ್ಕ ಜನರು ತಮಗೆ ಬೇಕಾದ ಪ್ರಾಂತ್ಯ ನಿರ್ಮಾಣ ಮಾಡಿಕೊಳ್ಳುವುದರಲ್ಲಿ ಮೈಸೂರಿನ ಜನತೆಯನ್ನು ಇಬ್ಭಾಗ ಮಾಡಿ ತಮಾಷೆ ಮಾಡುತ್ತಿರುವಂತೆ ಕಾಣುತ್ತಿದೆ. ಮೈಸೂರಿನಲ್ಲಿ ಭಿನ್ನಾಭಿಪ್ರಾಯವಿದೆಯೆಂದಮೇಲೆ, ಅವರೇ ತಮಗೆ ಬೇಕಾದಂಥ ಒಂದು ಪ್ರಾಂತ್ಯನಿರ್ಮಾಣ ಮಾಡಿಕೊಳ್ಳುವುದಕ್ಕೆ ಸರಿಯೇ? ಅಥವಾ ಅವರೂ ನಮ್ಮ ಜೊತೆಯಲ್ಲಿ ಸೇರಿಕೊಂಡು ಒಂದಾಗೋಣ ಎನ್ನುವುದು ಸರಿಯೇ? ಕರ್ಣಾಟಕ ಪ್ರಾಂತ್ಯ ರಚನೆ ಮಾಡಬೇಕೆಂದು ಹೇಳಿ ಮೈಸೂರಿನವರು ಮದರಾಸ್ ಬೊಂಬಾಯಿನವರ ಜೊತೆಯಲ್ಲಿ ಸೇರಿಕೊಂಡು ಹೈದರಾಬಾದ್ ಸರ್ಕಾರದವರೊಡನೆ ಹೋರಾಡಿ ದೇಶ ಸಂಪಾದನೆ ಮಾಡುವುದಕ್ಕೆ ಕಾರಣಕರ್ತರೇಕಾಗಬೇಕು? ಬೇರೆ ಆಡಳಿತಕ್ಕೊಳಪಟ್ಟು ಒಂದೊಂದು ರೀತಿಯಲ್ಲಿ ಸರಿಯಾಗಿರುವ ಕಾಲದಲ್ಲಿ ನಾವು ಅಲ್ಲಿರತಕ್ಕ ಕನ್ನಡಿಗರನ್ನು ತಮ್ಮ ಪ್ರಾಂತದಿಂದ ಬೇರೆಯಾಗಲಿ, ನಮ್ಮ ಪ್ರಾಂತ್ಯಕ್ಕೆ ಸೇರಲಿ ಎಂದು ಹೇಳುವ ವಾದ ವಿಚಿತ್ರವಾಗಿದೆ. ಅವರು ಒಂದು ಸಂಸಾರ ಮಾಡಿಕೊಂಡಿರುವಾಗ, ಅವರು ತಮ್ಮ ಸುಖಕ್ಕಾಗಿ ತಾವು ಬೊಂಬಾಯಿಯಲ್ಲಿರುವುದಿಲ್ಲ ಎಂದು ನಿಂತುಕೊಂಡರೆ ನಾವು ಪರಿಶೀಲಿಸಬಹುದೇ ಹೊರತು, ಅವರು ಸಂಸಾರ ಚೆನ್ನಾಗಿ ನಡೆಸುತ್ತಿರುವಾಗ, ನಾವು ಹೋಗಿ ಅವರನ್ನು ಕುರಿತು 'ನೀವು ಬಿಟ್ಟುಬಿಡಿ' ಎಂದು ಹೇಳುವುದೇ? 'ಗಂಡ ಬೇಡ' ಎಂದು ಹೆಂಡತಿ ಹೇಳಿ ತಾನು ಬೇರೆ ಸಂಸಾರ ಮಾಡುತ್ತೇನೆ ಎಂದು ಸೋಡು ಚೀಟಿ ಕೊಟ್ಟರೆ ಆಗ ಮಾತ್ರ ನಾವು ಆಲೋಚಿಸಬಹುದು ಅಷ್ಟೆ. ಆ ಜನಾಂಗ ಬೊಂಬಾಯಿ ಶಾಸನ ಸಭೆಯಲ್ಲಿ ತಾವು ಪ್ರತ್ಯೇಕ ಪ್ರಾಂತ್ಯ ರಚನೆ ಮಾಡುತ್ತೇವೆಂದು ಹೋರಾಟ ಮಾಡಿದಾಗ ನಾವು ಪರಿಶೀಲನೆ ಮಾಡಬಹುದಾಗಿದೆಯೇ ಹೊರತು ಅದಕ್ಕೆ ಮುಂಚೆ ಅಲ್ಲಿನ ಜನರನ್ನು ನಾವೇಕೆ ಪ್ರಚೋದನೆ ಮಾಡಬೇಕೆಂಬ ಅಂಶವನ್ನು ನಾವು ಮನಗಾಣಬೇಕು. ಹಿಂದೆ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಈ ಸಂಬಂಧದಲ್ಲಿ ಠರಾವುಗಳಾಗಿವೆ, ಕಾಂಗ್ರೆಸ್ಸಿನವರು ಹಿಂದೆಯೇ ಒಪ್ಪಿದ್ದಾರೆ ಎನ್ನುವುದು ಸರಿಯಲ್ಲ. ಮೈಸೂರು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಆಗಿದ್ದ ಠರಾವುಗಳು ರದ್ದಾಗಿ ಹಿಂದೂಸ್ಥಾನದ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಿಂದ ಕರಡು ಬಂದು ಅದು ಪಾಸಾಗಿದೆಯೇ ಹೊರತು ಇಲ್ಲಿನ ಅಸೆಂಬ್ಲಿಯಲ್ಲಿ ತಯಾರಾದ ಒಂದು ನಿರ್ಣಯವೂ ಅಂಗೀಕೃತವಾಗಲಿಲ್ಲವೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಹೀಗಿರುವಾಗ ರದ್ದಾಗಿರುವ ಮೈಸೂರು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯ ಕರಡು ಪ್ರತಿಯನ್ನಿಟ್ಟುಕೊಂಡು ನಾವೀಗ ಏಕೆ ಒದ್ದಾಡಬೇಕೋ ಗೊತ್ತಿಲ್ಲ.

ಆದುದರಿಂದ ಈ ವಿಚಾರದಲ್ಲಿ ಭಾರತರಾಜ್ಯಾಂಗದಲ್ಲಿ ನಡೆದಿರತಕ್ಕಂಥ ಘಟನಾವಳಿಗಳನ್ನು ನೋಡದೆ ನಮ್ಮ ಮೈಸೂರು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯ ಪ್ರೊಸೀಡಿಂಗ್ಸನ್ನು ಪರಿಶೀಲನೆ ಮಾಡಿ ನೋಡಿದರೆ ಅದು ಹೇಗೆ ಗೊತ್ತಾಗುತ್ತದೆ? ಮೈಸೂರು ದೇಶದಲ್ಲಿ ಈಗ ಸುಮಾರು ನಾನಾ ಭಾಷೆಗಳನ್ನಾಡತಕ್ಕಂಥ ಜನರೂ ಸಹ ಅಧಿಕಸಂಖ್ಯೆಯಲ್ಲಿರುತ್ತಾರೆ. ನಮ್ಮ ಮೈಸೂರಿನಲ್ಲಿ ಈ ದಿವಸ ತಮಿಳು ಮಾತನಾಡತಕ್ಕಂಥ ಜನರು 20 ಲಕ್ಷಕ್ಕೂ ಜಾಸ್ತಿಯಾಗಿದ್ದಾರೆ ಎಂದರೆ ಅದು ತಪ್ಪಾಗಲಾರದು. ಅದೇ ರೀತಿ ತೆಲುಗು ಮಾತನಾಡತಕ್ಕವರೂ ಸಹ ಸುಮಾರು 20 ಲಕ್ಷ ಜನರಿರಬಹುದು. 1951ರ ಸೆನ್ಸಸ್ ಪ್ರಕಾರ ಇತ್ತೀಚೆಗೆ ನೋಡಿದರೆ ಈ ತಮಿಳರ ಸಂಖ್ಯೆ 17 ಲಕ್ಷಕ್ಕೆ ಬಂದಿದೆ. ಅನಂತರ ಈ ನಾಲ್ಕು ವರ್ಷಗಳಲ್ಲಿ ಬಂದಿರುವ ಜನ, ಈಗಿನ ಸೆನ್ಸಸ್‌ವರದಿ ಪ್ರಕಾರ ಸೇರಿದರೆ 20 ಲಕ್ಷವಾಗುತ್ತದೆ. ಪ್ರತಿಯೊಂದು ಜನಸಂಖ್ಯೆಯೂ ಶೇಕಡ 10ರಂತೆ ಜಾಸ್ತಿಯಾಗಿರುತ್ತದೆ. ಅಂದರೆ ಅಲ್ಲಿಗೆ ಈ ತಮಿಳರು ಮತ್ತು ತೆಲುಗರು ಈ ಜನಾಂಗಗಳ ಸಂಖ್ಯೆ ಹೊರಗಡೆಯಿಂದ ಬರದೆ ಇದ್ದಿದ್ದರೆ ನಮ್ಮ ಮೈಸೂರಿನ ಜನಸಂಖ್ಯೆ 92 ಲಕ್ಷಕ್ಕೆ ಹೇಗೆ ಬರುತ್ತಿತ್ತು?

Mr. SPEAKER.—According to 1941 Census it is 73·8 lakhs.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಅದಕ್ಕೆ 7 ಲಕ್ಷ ಸೇರಿಸಿದರೆ 79–80 ಲಕ್ಷ ಆಗುತ್ತದೆ. 1941ಕ್ಕೆ ಬಂದವರ ಸಂಖ್ಯೆ 5 ಲಕ್ಷಗಳು, 1951ಕ್ಕೆ 12 ಲಕ್ಷ ಜನರು ಬಂದಿದ್ದಾರೆ. ಹೀಗೆ ವರ್ಷಂಪ್ರತಿ ಹೊರಗಡೆಯಿಂದ ಬರತಕ್ಕವರನ್ನು ತಲೆಹಿಡಿದು ತಳ್ಳುವುದಕ್ಕಾಗುತ್ತದೆಯೆ? ಆದರೆ ಹಾಗೆ ಆಗುವುದಿಲ್ಲ. ಈ ತೊಂದರೆಗಳೆಲ್ಲಾ ಇರುವುದರಿಂದಲೇ ಈ ದಿವಸ ನಮ್ಮ ಮೈಸೂರಿನಲ್ಲಿ ಸುಮಾರು ಶೇಕಡ 30ರಷ್ಟು ತಮಿಳರೂ, ಶೇಕಡ 20ರಷ್ಟು ತೆಲುಗರೂ, ಹೀಗೆ ಈ ಎರಡು ಜನಾಂಗಗಳೇ ನಮ್ಮ ದೇಶದ ಜನಸಂಖ್ಯೆಯಲ್ಲಿ ಶೇಕಡ 50ರಷ್ಟಾಗುತ್ತವೆ. ಕನ್ನಡ ಮಾತನಾಡತಕ್ಕಂಥ ಜನರೆಲ್ಲಾ ಶೇಕಡ 32ರಷ್ಟಾಗುತ್ತಾರೆ. ಹೀಗಿರುವುದರಿಂದ ಈ ದಿವಸ ಈ ಮೈಸೂರು ರಾಜ್ಯವನ್ನು ಭಾಷಾಧಾರದ ಮೇಲೆ ನಿರ್ಧರಿಸುವುದಕ್ಕಾಗುವುದಿಲ್ಲ. ಈಗಿರತಕ್ಕಂಥ ನಮ್ಮ ಮೈಸೂರು ರಾಜ್ಯ ಬಹಳ ಅಡಕವಾಗಿದೆ. ಇದನ್ನು ದೊಡ್ಡದು ಮಾಡಲು ಅವಕಾಶವೇ ಇಲ್ಲ. ಆ ನಮ್ಮ ಒಂದು ಗಡಿಯಲ್ಲಿ ಚಂದ್ರಗುತ್ತಿ ಹೋಬಳಿ ಗುಡ್ಡಗಾಡು ಪ್ರದೇಶ. ಇದೇರೀತಿ ಇಲ್ಲಿಂದ ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳವರೆಗೂ ಗುಡ್ಡಗಾಡುಗಳಿರುತ್ತವೆ. ನಮ್ಮ ಸಂಸ್ಥಾನದ ಉತ್ತರ ಮತ್ತು ಪಶ್ಚಿಮದ ಗಡಿಗಳೆರಡೂ ಗುಡ್ಡಗಾಡುಗಳ ಪ್ರದೇಶವಾಗಿರುತ್ತವೆ. ಹೀಗಿರುವುದರಿಂದಲೇ ಈ ಹಿಂದೆ ಗುಡ್ಡದಮೇಲಿರತಕ್ಕ ರಾಜ್ಯಕ್ಕೇ ಒಂದು ಆಡಳಿತವನ್ನೂ ಮತ್ತು ಗುಡ್ಡದ ಕೆಳಗಿನ ದೇಶಕ್ಕೇ ಒಂದು ಆಡಳಿತವನ್ನೂ ಇಡುವುದು ಸರಿಯಾದದ್ದೆಂದು ಮಾಡಿಟ್ಟಿದ್ದಾರೆ. ಹೀಗೆ ಆಡಳಿತಕ್ಕೆ ಪ್ರದೇಶಗಳನ್ನು ವಿಂಗಡಿಸದೆ ಇದ್ದಿದ್ದರೆ ಗುಡ್ಡದ ಕೆಳಗಿನ ಜನರು ಗುಡ್ಡದಮೇಲಕ್ಕೆ ಬರಲು ಬಹಳ ಕಷ್ಟವಾಗು

ತ್ತಿತ್ತು. ಅದೇ ರೀತಿ ಗುಡ್ಡದಮೇಲಿನ ಜನರಿಗೆ ಗುಡ್ಡದ ಕೆಳಗೆ ಹೋಗುವುದಕ್ಕೂ ಬಹಳ ಕಷ್ಟವಾಗುತ್ತಿತ್ತು. ಆದರೆ ತಾವು ಈ ದಿವಸ ಆ ಗುಡ್ಡದ ಕೆಳಗಿರತಕ್ಕಂಥ ಪ್ರದೇಶಗಳನ್ನೂ ಮತ್ತು ಗುಡ್ಡದ ಮೇಲಿರತಕ್ಕಂಥ ಪ್ರದೇಶಗಳನ್ನೂ ಒಂದೇ ಆಡಳಿತಕ್ಕೆ ತರುತ್ತೇವೆಂದು ನಮ್ಮ ಮೈಸೂರಿನ ಆಡಳಿತಕ್ಕೆ ಒಳಪಡಿಸಿದ ಭಾಗದಲ್ಲಿ ನಮ್ಮ ಮೈಸೂರಿನ ಆಡಳಿತ ಸರಿಯಾಗಿರಲಾರದು. ಹೀಗೆ ಯಾವ ಒಂದು ಅಡಚಣೆಗಳನ್ನೂ ಮನಸ್ಸಿಗೆ ಹಾಕಿಕೊಳ್ಳದೆ ಈ ರಾಜ್ಯಗಳನ್ನು ಬದಲಾವಣೆಮಾಡುವ ಪಕ್ಷಕ್ಕೆ ವಲ್ಲಭಭಾಯ್ ಪಟೇಲ್‌ರವರು ಈ ನಮ್ಮ ಮೈಸೂರನ್ನೂ ಆ ಮದ್ರಾಸಿಗೆ ಸೇರಿಸಿಬಿಡಿ ಎಂದು ಹೇಳಿದ್ದರೆ ಆಗಿಹೋಗುತ್ತಿತ್ತು. ಆದರೆ ಅವರು ಮೊದಲಿಂದಲೂ ನಮ್ಮ ಮೈಸೂರಿನ ರಾಜಮನೆತನದವರಿಗೆ ತುಂಬ ಗೌರವವನ್ನು ಕೊಟ್ಟುಕೊಂಡು ಇವರ ಇಷ್ಟದ ಪ್ರಕಾರವೇ ಈ ದೇಶದ ಆಡಳಿತ ನಡೆಸಿಕೊಂಡುಹೋಗುವುದಕ್ಕೆ ಅವಕಾಶ ಕೊಟ್ಟಿದ್ದರು. ಇನ್ನುಳಿದಂಥ ದೇಶದಲ್ಲಿದ್ದ ರಾಜಮನೆತನಗಳವರ ವಿಚಾರದಲ್ಲಿ ಅವರು ಸೂಕ್ತ ಕಾರ್ಯಕ್ರಮಗಳನ್ನು ಆಗಲೇ ಕೈಗೊಂಡಿರುತ್ತಾರೆ. ನಮ್ಮ ಭಾರತದಲ್ಲಿ ಸುಮಾರು 650 ಚಿಕ್ಕದು ಮತ್ತು ದೊಡ್ಡದಾದಂಥ ಸಂಸ್ಥಾನಗಳಿದ್ದವು. ಅವುಗಳ ಪೈಕಿ ಅನೇಕ ಸಂಸ್ಥಾನಗಳನ್ನು ತೆಗೆದುಹಾಕಿ ಅವುಗಳನ್ನು ಅಕ್ಕಪಕ್ಕದಲ್ಲಿದ್ದಂಥ ಪ್ರಾಂತ್ಯಗಳಿಗೆ ಸೇರಿಸಿಬಿಟ್ಟರು. ಅವರು ನಮ್ಮ ಮಹಾರಾಜರಿಗೆ ಕೊಟ್ಟಿದ್ದ ಸ್ಥಾನವೇ ಬೇರೆ. ಇತರ ರಾಜಮಹಾರಾಜರುಗಳಂತೆ ಇವರೇನೂ ಲಂಡನ್ ಇತ್ಯಾದಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಗಿ ಅಲ್ಲಿ ರೇಸ್ ಇತ್ಯಾದಿ ಜೂಜಾಟವಾಡಿಕೊಂಡು ಆಡಳಿತದಲ್ಲಿ ಅಶ್ರದ್ಧೆಯನ್ನೇನೂ ತೋರಿಸಿರಲಿಲ್ಲ. ನಮ್ಮ ಮೈಸೂರಿನ ವಿಚಾರವೂ ಕೂಡ ಒಂದುವೇಳೆ ಹಾಗೇ ಇದ್ದಿದ್ದರೆ, ಆಗ ಈ ಮೈಸೂರು ಜನರ ಅಭಿಪ್ರಾಯ ಬದಲಾಗಿ ಬೇರೆ ಪ್ರಾಂತದೊಡನೆ ಸೇರುತ್ತಿದ್ದೆವು. ಈಗ ನಾವು ಈ ಅಂಶವನ್ನೇ ತಲೆಗೆ ಹಚ್ಚಿಕೊಂಡು ನಾವೆಲ್ಲ ಹುಚ್ಚರಾಗುತ್ತೇವೆಂದು ನನಗೆ ಗೊತ್ತಾಗುತ್ತದೆ. ಆದರೆ ಈ ದಿವಸ ಇಲ್ಲಿ ಚರ್ಚೆಗಳಾಗುತ್ತಿರುವುದನ್ನು ನೋಡಿದರೆ ನೀಲಗಿರಿ, ಕೊಳ್ಳೇಗಾಲ ಇತ್ಯಾದಿ ಪ್ರಾಂತ್ಯಗಳೆಲ್ಲಾ ನಮ್ಮ ಮೈಸೂರಿಗೇ ಸೇರಬೇಕೆಂದು ವಾದಮಾಡುತ್ತಿರುವುದನ್ನು ನೋಡಿದರೆ, ಅಲ್ಲಿ ಮರಾಠಿ-ಕನ್ನಡ ಎಂದು ಹೋರಾಟ ನಡೆಯುತ್ತಿದೆ. ಕನ್ನಡ ಬೋರ್ಡು ಹಾಕುವುದು ಕಷ್ಟವಾಗಿದೆ. ಬೊಂಬಾಯಿ ಪ್ರಾಂತ್ಯದಿಂದ ಕನ್ನಡಿಗರು ಬೇರೆಯಾಗಲು ಸಹ ತೊಂದರೆಗಳಿವೆ. ಆದರೆ ಹೀಗೆ ಮಾಡಲು ಮೈಸೂರಿನಲ್ಲಿರತಕ್ಕ ಎಲ್ಲಾ ಜನಗಳ ಸಹಕಾರವಿದೆಯೇ, ಆ ಪ್ರದೇಶಗಳೆಲ್ಲಾ ಕನ್ನಡ ಜನರಿರತಕ್ಕಂಥ ಪ್ರದೇಶಗಳು ಹೌದೇ ಅಥವಾ ಅಲ್ಲವೇ ಎನ್ನತಕ್ಕಂಥ ಪ್ರಶ್ನೆಗಳೆಲ್ಲಾ ಒಂದು ಕಡೆಗೆ ಇರಲಿ; ಈಗ ನಾವು ಆ ಪ್ರಾಂತ್ಯಗಳನ್ನು ನಮ್ಮ ಮೈಸೂರಿಗೆ ಸೇರಿಸಿಕೊಳ್ಳಬೇಕೇ ಅಥವಾ ಮೈಸೂರೇ ಆ ಪ್ರಾಂತ್ಯಗಳಿಗೆ ಸೇರಬೇಕೇ ಎನ್ನುವ ವಿಚಾರವೊಂದು ಬೇರೆ ಇದೆ. ಹಿಂದೆ ಮಹಾತ್ಮ ಗಾಂಧಿಯವರು ಮಹಾರಾಷ್ಟ್ರ ಮತ್ತು ಗುಜರಾತ್ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಕಮಿಟಿಗಳನ್ನು ರಚನೆ ಮಾಡತಕ್ಕಂಥ ಕಾಲದಲ್ಲಿ ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣದ ವಿಚಾರ ಮಾತನಾಡಿ ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತ್ಯ ನಿರ್ಮಾಣಗಳ ವಿಚಾರ ಹೇಳಿದ್ದರು. ಅಂದರೆ ಆ ದಿವಸ ಅವರು ಬ್ರಿಟಿಷರನ್ನು ನಮ್ಮ ಇಂಡಿಯಾ ದೇಶದಿಂದ ಬಿಟ್ಟು ಹೊರಡುವಂತೆ ಮಾಡಬೇಕೆಂಬ ಉದ್ದೇಶದಿಂದ ಹಾಗೆ ಒಂದು ಅಭಿಪ್ರಾಯವನ್ನು ಸೂಚಿಸಿದ್ದರು. ಹೀಗೆ ಆ ಬ್ರಿಟಿಷರನ್ನು ದೇಶದಿಂದ ಹೊರಗೆ ಓಡಿಸುವಂಥ ಸಂದರ್ಭದಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಕೂಡ ಮಾಡಿದರು. ಉಪ್ಪಿನ ಮೇಲೆ ತೆರಿಗೆ ಹಾಕಬಾರದೆಂದು ಹೇಳಿದರು. ಅಂದರೆ ಆ ದಿವಸ ಹಾಗೆ ಹೇಳಿದ್ದರು ಎನ್ನತಕ್ಕಂಥ ಒಂದು ಕಾರಣದ ಮೇಲೆ ಈ ದಿವಸ ಈ ಉಪ್ಪಿನ ಮೇಲಿನ ತೆರಿಗೆ ಹಾಕುವುದನ್ನು ತಪ್ಪಿಸುವುದಕ್ಕೆ ಆಗುತ್ತದೆಯೇನು? ಆ ದಿವಸ ಹಾಗೆ ಅವರು ಹೇಳಿರತಕ್ಕದ್ದೆಲ್ಲಾ ಈಗ ಒಂದು ಕಾರಣವಾಗುತ್ತದೆಯೇನು? ಈ ಹಿಂದೆ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಬೆಟರ್‌ಮೆಂಟ್ ಟ್ಯಾಕ್ಸನ್ನು ಹಾಕಬೇಕೆಂದು ಹೇಳಿದ್ದರು. ಆದರೆ ಈಗ ಅದನ್ನು ಹಾಕಬೇಕೆಂಬ ವಾದವೂ ಇದೆ, ಹಾಕಬಾರದೆಂಬ ವಾದವೂ ಇದೆ. ಈ ಕರ್ನಾಟಕಪ್ರಾಂತ್ಯ ನಿರ್ಮಾಣದ ವಿಚಾರದಲ್ಲಿ 1947ಕ್ಕೆ ಹಿಂದೆಯೇ ಠರಾವುಗಳು ಪಾಸಾಗಿವೆ ಎಂದು ಹೇಳುತ್ತಿದ್ದಾರೆ. ಆದರೆ 1947ಕ್ಕೆ ಹಿಂದೆ ಯಾರು ಈ ಕರ್ನಾಟಕವಾಗಬೇಕೆಂದು ಹೇಳುತ್ತಿದ್ದರೋ ಅವರೇ ಈಚೆಗೆ ಕರ್ನಾಟಕ ಪ್ರಾಂತ್ಯ ಆಗುವುದು ಬೇಡ ಎಂದು ಹೇಳಿದ್ದಾರೆ. ಹಿಂದೆ ಯಾರು ಬೇಡವೆಂದು ಹೇಳಿದ್ದರೋ ಅವರೇ ಈಗ ಕರ್ನಾಟಕ ಆಗಬೇಕೆಂದು ಹೇಳುತ್ತಿರುವವರು. ಇದು ಹಿಂದೆ ಹೇಳತಕ್ಕದ್ದೇ ಒಂದು ರೀತಿ ಈ ದಿವಸ ಹೇಳುತ್ತಿರುವುದೇ ಒಂದು ರೀತಿಯಾಗಿದೆ. ಆದರೆ ಕಾಲ ಬದಲಾವಣೆಯಾದ ಹಾಗೆಲ್ಲಾ ಜನರ ವೈಯಕ್ತಿಕ ಅಭಿಪ್ರಾಯಗಳೂ ಕೂಡ ಬದಲಾವಣೆ ಆಗುತ್ತದೆ. ಅದಕ್ಕೆ ನಾವು ಅವರನ್ನು ಒತ್ತಾಯಪಡಿಸುವುದಕ್ಕಾಗುವುದಿಲ್ಲ. ಈಗ ನಮ್ಮ ದೇಶದ ಆದಾಯದಲ್ಲಿ ಶೇಕಡ 37ರಷ್ಟು ಎಕ್ಸೈಜ್ ರೆವಿನ್ಯೂನಿಂದ ಉತ್ಪತ್ತಿಯಾಗುತ್ತಿದೆ. ಭೂಕಂದಾಯದಿಂದ ಶೇಕಡ 17ರಷ್ಟು ವರಮಾನ ಬರುತ್ತಿದೆ. ಆದರೆ ಈ ಎಕ್ಸೈಜ್ ವರಮಾನವನ್ನು ರದ್ದುಪಡಿಸಿದನಂತರ ಆ ವರಮಾನವನ್ನು ಸರಿತೂಗಿಸಲು ಬೇರೆ ವರಮಾನ ಮಾರ್ಗಗಳೇ ಇಲ್ಲ. ಈ ಹಿಂದಿನ ಪಾಂಚವಾರ್ಷಿಕ ವರದಿಯಲ್ಲಿ ಹೇಳಿರುವ ಪ್ರಕಾರ ಬೊಂಬಾಯಿ ಮತ್ತು ಮದರಾಸ್ ಪ್ರಾಂತ್ಯಗಳ ಕನ್ನಡ ಪ್ರದೇಶಗಳಲ್ಲಿ ಅಷ್ಟೇನೂ ಹೆಚ್ಚಿನ ಹಣವನ್ನು ಖರ್ಚುಮಾಡಿರುವಹಾಗಿಲ್ಲ. ಆದರೆ ಇತ್ತೀಚೆಗೆ ತುಂಗಭದ್ರಾ ಯೋಜನೆಯ ಬಗ್ಗೆ ತಗುಲಿದ ಖರ್ಚು ವೆಚ್ಚಗಳ ಸಂಬಂಧದಲ್ಲಿ ನಮ್ಮ ಮೈಸೂರಿನ ಮೇಲೆ 35 ಕೋಟಿ ರೂಪಾಯಿಗಳ ಸಾಲವನ್ನು ಹೇರಿದ್ದಾರೆ. ಆದರೆ ಆ ನೀರಿನ ಉಪಯೋಗದಲ್ಲಿ ಅರ್ಧಕ್ಕೆ ಜಾಸ್ತಿಯಾಗಿ ಬೇರೆ ಪ್ರಾಂತ್ಯಗಳಿಗೆ ಹೋಗುತ್ತಿದೆ..............

(ಸಭೆಯಲ್ಲಿ ಗಲಾಟೆ)

ಹೀಗಿರುವಾಗ ಈ ಕನ್ನಡ ನಾಡನ್ನೆಲ್ಲಾ ಒಟ್ಟಾಗಿ ಸೇರಿಸಬೇಕೆಂದು ಹೇಳುವುದಕ್ಕೆ ಪ್ರತಿಯಾಗಿ ಎರಡು ಕನ್ನಡನಾಡುಗಳಾದರೆ ಏನು ಬಾಧಕ ಉಂಟಾಗುತ್ತದೆಯೋ ಅದು ನನಗೆ ಗೊತ್ತಾಗುತ್ತಿಲ್ಲ. ಆ ಜನರೆಲ್ಲರೂ ನಮ್ಮ ಮೈಸೂರಿಗೆ ಬಂದು ಸೇರಿದರೆ ಆ ಬಳಿಕ ನಮ್ಮ ದೇಶದ ಜನರು ಹೆಚ್ಚಿನ ಅನುಕೂಲ ಪಡೆಯುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಈ ದಿವಸ ನಾವಾಗಿಯೇ ಈ ಪ್ರಾಂತ್ಯಗಳನ್ನೆಲ್ಲಾ ನಮಗೆ ಸೇರಿಸಿಕೊಡಬೇಕೆಂದು ಆ ಕೇಂದ್ರಕ್ಕೆ ಒತ್ತಾಯಪಡಿಸಿದ ನಂತರ ಆ ಪ್ರದೇಶಗಳೆಲ್ಲಾ ಬಹಳ ಹಿಂದುಳಿದಿರುತ್ತವೆ, ಅವುಗಳ ಅಭಿವೃದ್ಧಿಗಾಗಿ ಹೆಚ್ಚಿಗೆ ಹಣಸಹಾಯಮಾಡಿ ಎಂದು ಕೇಂದ್ರ ಸರ್ಕಾರವನ್ನು ಕೇಳಿದರೆ ಅವರು ನೀವೇ ಸೇರಿಸಿಕೊಂಡಿದ್ದೀರಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಅದಕ್ಕಾಗಿ ನಾವು ಈಗ ಎರಡು ಕರ್ನಾಟಕಪ್ರಾಂತ್ಯಗಳನ್ನು ನಿರ್ಮಾಣ ಮಾಡಿದರೆ ಆಗ ಕೇಂದ್ರಸರ್ಕಾರದವರೇ ಹಣವನ್ನು ಖರ್ಚುಮಾಡಿ ಆ ಪ್ರದೇಶಗಳನ್ನೆಲ್ಲಾ ಅಭಿವೃದ್ಧಿಗೆ ತರುವುದಕ್ಕೆ ಅವಕಾಶವಿರುತ್ತದೆ.

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

5 P.M.

ಪಕ್ಕದ ಪ್ರಾಂತ್ಯದಲ್ಲಿ ಏನೇನು development works ಆಗಿವೆ ಎಂಬುದನ್ನು ನೋಡಿಕೊಂಡು ಅವರಂತೆ ಮಾಡಲು ಅವರು ಒಂದು ಪ್ರತ್ಯೇಕ ಸರ್ಕಾರವನ್ನು ರಚನೆಮಾಡಿಕೊಂಡು ಅವರ ಪ್ರದೇಶವನ್ನು ಅಭಿವೃದ್ಧಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಅದಲ್ಲದೆ ಪಕ್ಕದ ಪ್ರಾಂತ್ಯಕ್ಕೆ ಸೇರಿದರೆ ಅವರ ಪ್ರದೇಶದಲ್ಲಿ development works ಆಗುತ್ತವೆಯೆಂದು ನಂಬುವುದಕ್ಕೆ ಸಾಧ್ಯವಾಗುವುದಿಲ್ಲ. ನಾಳೆ ದಿವಸ ಒಂದು ಕರ್ನಾಟಕ ಪ್ರಾಂತ ಆಗುವುದಕ್ಕೆ ಅಭ್ಯಂತರ ಇಲ್ಲವೆಂದು ಒಪ್ಪುವುದಾದರೆ ಮೈಸೂರಿನ ಹೊರಗಡೆಯಿಂದ ಬಂದ 100 ಜನ ಸದಸ್ಯರು ಮೈಸೂರು ದೇಶದಲ್ಲಿರುವ 100 ಜನ ಸದಸ್ಯರ ಜೊತೆಗೆ ಸೇರಿ ಮಂತ್ರಿಮಂಡಳ ರಚಿಸುವುದಕ್ಕೆ ಏನೂ ತೊಂದರೆಯಾಗುವುದಿಲ್ಲ, Mysoreans ಮತ್ತು Non-Mysoreans ಎಂದು ಈ ರೀತಿ ಹೋರಾಟ ನಡೆದರೆ ಸರ್ಕಾರ ಹೀಗೆ ಎರಡುಗುಂಪುಗಳಾಗಿ ಮೈಸೂರಿನ ಜನ ಉದ್ಧಾರವಾದ ಹಾಗೆ ಎಂದು ತಿಳಿದುಕೊಳ್ಳೋಣವೆ? ಆದ್ದರಿಂದ ಈ ರೀತಿಯಾದಂಥ ಭಿನ್ನಾಭಿಪ್ರಾಯವುಳ್ಳ ಜನರ ಜೊತೆಯಲ್ಲಿ ಸೇರಿಕೊಂಡು ಕ್ಷೇಮವಾದಂಥ ಸರ್ಕಾರ ಮೈಸೂರಿನಲ್ಲಿ ನಡೆಯುತ್ತದೆಯೆ? ಮುಂದಿನ ಜನರಿಗೆ ಇಂತಹ ವ್ಯಾಜ್ಯವು ಹುಟ್ಟುವಂತೆ ಮಾಡುವುದು ಸರಿಯಲ್ಲ. ಈಗ ಬೊಂಬಾಯಿ ನಗರದೊಳಗೆ statistics ಪ್ರಕಾರ ಐದು ಲಕ್ಷ ಕನ್ನಡಿಗರು ಇದ್ದಾರೆ ಎಂಬುದನ್ನು ನೋಡಿದ್ದೇನೆ. ಕನ್ನಡ ಪ್ರಾಂತ್ಯವಾದರೆ ಈ ಐದು ಲಕ್ಷ ಜನರ ಹಿತದೃಷ್ಟಿಯಿಂದ ಬೊಂಬಾಯಿನಗರದ ಸ್ವಲ್ಪ ಭಾಗವನ್ನು ಕರ್ನಾಟಕಕ್ಕೆ ಸೇರಿಸುವುದು ಆಗುವುದೇ? ನಾವು ಬಂಗಾಳದಲ್ಲಿರತಕ್ಕಂಥ ಜನರನ್ನು ನೋಡಿದರೆ ಯಾವ ಪ್ರಾಂತದಲ್ಲೂ ಇಲ್ಲದಷ್ಟು Provincialism ಇದೆ, Non-Bengaleseನ್ನು ಯಾವ ಕಾರಣದಿಂದಲೂ encourage ಮಾಡುವುದಿಲ್ಲ. ಮಹಾರಾಷ್ಟ್ರದವನು ಮಹಾರಾಷ್ಟ್ರದವನಲ್ಲದವನನ್ನು encourage ಮಾಡುವುದಿಲ್ಲ. ಅಲ್ಲಿಯೂ Provincialism ಇದೆ. ಅಂತಹ ಸಂದರ್ಭವಿರುವಾಗ ಇಲ್ಲಿಯೂ ಈ ರೀತಿ ಭಾವನೆ ಬಂದರೆ Mysoreans ಇತರ ಪ್ರಾಂತಗಳಿಗೆ ಹೋಗಿ ಕೆಲಸ ಮಾಡತಕ್ಕಂಥ ಸಂದರ್ಭಗಳು ಖಂಡಿತವಾಗಿಯೂ ಕಡಿಮೆಯಾಗುತ್ತವೆ. ಮೈಸೂರು ಸ್ಟೇಟ್‌ನಲ್ಲಿ ಬೇರೆ ಪ್ರಾಂತಗಳಿಂದ ಬಂದು Contract ವ್ಯಾಪಾರ, ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಈ ರೀತಿ ಕರ್ನಾಟಕ ಪ್ರಾಂತವಾದರೆ ಇವರು ಕನ್ನಡ ದೇಶದ ಜನ, ಇವರು ಕನ್ನಡ ದೇಶದ ಜನರಲ್ಲ ಎಂಬ ಭಾವನೆ ಬಂದು ತಿಕ್ಕಾಟಗಳು ಬೆಳೆಯುವುದಕ್ಕೆ ಅವಕಾಶವಾಗಿ ಮೈಸೂರಿನವರಿಗೆ ಬೇರೆ ದೇಶದಲ್ಲಿ ಅನುಕೂಲಗಳು ಸಿಕ್ಕಲಾರದೆಂದು ಹೇಳುತ್ತೇನೆ. ಶ್ರೀಮಾನ್ ಚೆನ್ನಬಸಪ್ಪನವರು, ಸಂಪತ್ತು ಎಲ್ಲಾ ಪ್ರಾಂತಗಳಿಗೂ ಸಮನಾಗಿರುವಂತೆ ಆಡಳಿತ ಅನುಕೂಲತೆಗಳಿಗೆ ಅನುಗುಣವಾಗಿ ಪ್ರಾಂತ ವಿಂಗಡನೆ ಮಾಡಬೇಕು, ಪ್ರತಿಷ್ಠೆ ಕಾರ್ಯಗಳಿಗಾಗಿ ಪ್ರಾಂತವಿಂಗಡನೆ ಮಾಡಬೇಕಾಗಿಲ್ಲ ಎಂದು ಹೇಳಿದರು ಆಡಳಿತ ದೃಷ್ಟಿಯಿಂದ ಫಸಲಾಲಿ ಸಮಿತಿಯವರು ಮತ್ತು ಕೇಂದ್ರ ಸರ್ಕಾರದವರ ಖುದ್ದು ಯಾವ ಯಾವ ಪ್ರಾಂತಗಳನ್ನು ಮಾಡಬೇಕು ಎಂಬ ವಿಚಾರದಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿ ಈ ರೀತಿ ಆಗಬೇಕೆಂದು ಸಲಹೆ ಕೊಟ್ಟರೆ ಅದನ್ನು ಶಿರಸಾವಹಿಸಿ ಅಂತೆಯೇ ಮಾಡೋಣ; ಬೇಡ ಎಂದು ಹೇಳುವುದಿಲ್ಲ. ವಾಸ್ತವವಾಗಿ ಈ ಪ್ರಶ್ನೆ ಕನ್ನಡನಾಡಿಗೆ ಮಾತ್ರ ಅನ್ವಯಿಸುವುದಿಲ್ಲ. ಗುಜರಾತಿ ಮಹಾರಾಷ್ಟ್ರ, ಬಂಗಾಳ, ಪಂಜಾಬು ಇತ್ಯಾದಿ ಎಲ್ಲಾ ಪ್ರಾಂತ್ಯಗಳಿಗೂ ಅನ್ವಯಿಸುತ್ತದೆ. ಅವೆಲ್ಲಕ್ಕಿಂತಲೂ ಮುಂಚೆಯಾಗಿ ವಿಶಾಲ ಮೈಸೂರನ್ನು ಮಾಡುತ್ತೇವೆಂದು ಹೇಳಿ ಹೋದರೆ ಅದರಲ್ಲಿ ಅರ್ಥವಿಲ್ಲ. ಫಸಲಾಲಿ ಸಮಿತಿಯವರು ಮತ್ತು ಕೇಂದ್ರ ಸರ್ಕಾರದವರು ಹೀಗೆ ಆಗಬೇಕೆಂದು ಮಾಡುವಾಗ ಮೈಸೂರಿನ ಎಲ್ಲಾ ಜನರು ಅದಕ್ಕೆ ವಿರೋಧಮಾಡಿ ಅದಕ್ಕೆ ಅಡ್ಡಿ ಆತಂಕಗಳನ್ನು ತಂದೊಡ್ಡುವುದಕ್ಕೆ ಆಗುವುದಿಲ್ಲವೆಂದು ಕಂಡು ಬರುತ್ತದೆ. ಪಾಕೀಸ್ತಾನದ ಆಡಳಿತವನ್ನು ನೋಡುವುದಾದರೆ ಅವರು ಬಂಗಾಳದಲ್ಲಿ ಭಾಷೆಗೋಸ್ಕರ ಹೋರಾಟ ಮಾಡುತ್ತಿದ್ದಾರೆ. ಅತ್ತಕಡೆ ಎಲ್ಲಾ Provinceಗಳನ್ನೂ ಸೇರಿಸಿ ಒಂದೇ Province ಮಾಡಬೇಕೆಂದು ಹೇಳುತ್ತಿದ್ದಾರೆ. ಈ ತರಹ ಆಡಳಿತವನ್ನು ಹೆಚ್ಚು ಕಡಿಮೆ ಮಾಡಿ ಒಂದುಕಡೆಯಿಂದ ತೆಗೆದು ಇನ್ನೊಂದು ಕಡೆ ಸೇರಿಸಿ ಈ ರೀತಿ ಏರುಪೇರುಗಳನ್ನು ಖಂಡಿತವಾಗಿಯೂ ಮಾಡಕೂಡದೆಂದು ಹೇಳುತ್ತೇನೆ. ಶ್ರೀ ಎಸ್. ಕೆ. ಪಾಟೀಲ್‌ರವರು ಒಂದು ಸಂಸ್ಥೆಯನ್ನು ಮಾಡಿ ಈ ಭಾಷಾವಾರುವಿಂಗಡಣೆಯನ್ನು 20ವರ್ಷಗಳ ಕಾಲ ಮುಂದಕ್ಕೆ ತಳ್ಳಬೇಕು, ದೇಶದ ಹಿತದೃಷ್ಟಿಯಿಂದ ಕಾದಾಡಬಾರದು, ಬೌಂಡರಿಗಳನ್ನು ಇವೊತ್ತೇ ನಿಷ್ಕರ್ಷೆ ಮಾಡುವುದಕ್ಕೆ ಹೋಗಬಾರದು, ದೇಶದ ಹಿತದೃಷ್ಟಿಯಿಂದ 15—20 ವರ್ಷಗಳ ಕಾಲ ಈಗ ಇರುವಂತೆ ಇರಬೇಕು—ಎಂದು ಬಹಳ ಚೆನ್ನಾಗಿ ಫಸಲಾಲಿ ಸಮಿತಿಯವರ ಮುಂದೆ ವಾದಮಾಡಿದ್ದಾರೆ. ಈ ರೀತಿಯಾಗಿ ಪಕ್ಕದ ನೆರೆಹೊರೆಯ ಪ್ರಾಂತ್ಯಗಳಲ್ಲಿ ಅಶಾಂತಿ ಹುಟ್ಟಿ ಜನಗಳಲ್ಲಿ ತಿಕ್ಕಾಟವಾಗುವಂತೆ ಮಾಡುವುದು ಮತ್ತು ವೈಷಮ್ಯ ಹೆಚ್ಚುವಂತೆ ಮಾಡುವುದು ವ್ಯವಹಾರವಲ್ಲ. ದೇಶದ ಹಿತ ದೃಷ್ಟಿಯಿಂದ ಇನ್ನೂ ಕೆಲವುಕಾಲ ಇದೇ ಸ್ಥಿತಿ ಇದ್ದುಕೊಂಡು ಒಂದು ಬಲವಾದ ರಾಜ್ಯವಾಗಿ ಆರ್ಥಿಕ ದೃಷ್ಟಿಯಿಂದಲೂ ಉತ್ತಮ ಸ್ಥಿತಿ ಏರ್ಪಡಬೇಕು. ಇವೊತ್ತಿನ ದಿವಸ ಮೈಸೂರಿಗೆ ಜನರು ಕನ್ನಡ ಪ್ರಾಂತವಾಗಬೇಕು ಎಂಬುದನ್ನು ಸ್ವಾಗತಿಸುತ್ತಾ ವಿಶಾಲವಾದ ಮೈಸೂರು ಆಗಬೇಕೆಂದು ಹೇಳುವ ಮೊದಲು ಮೈಸೂರಿನ ಹೊರಗಡೆ ಇರತಕ್ಕಂಥ ಕನ್ನಡ ನಾಡಿನ ಜನರು ತಮ್ಮ ತಮ್ಮ ಸರ್ಕಾರಗಳಲ್ಲಿ ಹೋರಾಟ ನಡೆಸಿ ಒಂದು ಪ್ರಾಂತ ಮಾಡಿಕೊಂಡು ಅವರ ಪ್ರದೇಶಗಳಲ್ಲಿ ಪ್ರಗತಿಗಳನ್ನು ಸಾಧಿಸಿದರೆ ಆಗ ಸಾಧ್ಯವಾಗುತ್ತದೆ. ಹಾಗಿಲ್ಲದೆ ಮೈಸೂರಿನವರು ಅಲ್ಲಿಯ ಜನರನ್ನು ಪ್ರಚೋದನೆಮಾಡಿ ಹೋರಾಟ ಮಾಡಿದರೆ ನಿಮ್ಮ ಜೊತೆಯಲ್ಲಿ ಹೋರಾಟ ಮಾಡುತ್ತೇವೆಂದು ಭರವಸೆ ಕೊಡುವುದಾಗಲಿ ಮಾತನಾಡುವುದಾಗಲಿ ಸರಿಯಲ್ಲ. ತತ್ಕಾಲದಲ್ಲಿ ಯಾವ ವಿಷಯವನ್ನೂ ಕೂಡ ಪರಿಶೀಲನೆಮಾಡದೆ ಇನ್ನೂ ಕೆಲವು ಕಾಲ ಈಗ ಇದ್ದಹಾಗೆ ಇರುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

Mr. SPEAKER.—The House will now rise and meet at 8-30 A. M. tomorrow.

The House adjourned for the day at Five Minutes past Five of the Clock to meet again at Thirty Minutes past Eight of the Clock on Saturday, the 23rd April 1955.

WD 4508—GPB—550—6-10-55.